[Mr. Speaker in the Chair.]

BUDGET ESTIMATES FOR 1964-65.

Demand No. 17—Education.

Sri S. R. KANTHI (Minister for Education).—Sir, I beg to move:

"That a sum not exceeding Rs. 21,93,66,400 be granted to the Government to defray the charges which will come in course of payment during the financial year for the period ending 31st day of March 1965, in respect of 'Education'"

Mr. SPEAKER.—Motion moved:

"That a sum not exceeding Rs. 21,93,66,400 be granted to the Government to defray the charges which will come in course of payment during the financial year for the period ending 31st day of of March 1965, in respect of 'Education'".

Now, the Two demands, namely, 37 and 49 and the cut motions are all before the House. Before I call upon anybody to initiate the debate, I want to point out that according to the Business Advisory Committee, one full day, *i.e.*, 4½ hours has been allotted for this demand. We have barely 3 hours now. How to make up 1½ hours?

Sri S. SIVAPPA.—Every day we shall sit from 12 0' Clock and make up that half an hour everyday.

ಶ್ರೀ ಎನ್. ಹುಚ್ಚ ಮಾಸ್ತಿಗೌಡ (ಚಂದ್ರಶೇಖರಪುರ).—ಈ ದಿವಸ ವಿದ್ಯಾಭ್ಯಾಸದ ಬೇಡಿಕೆಯನ್ನು ಚರ್ಚೆ ಮಾಡುವುದರ ಜೊತೆಗೆ ನಾಳೆ ಪೂರ್ತಿ ಈ ಬೇಡಿಕೆಯ ಮೇಲೆ ಚರ್ಚೆ ಮಾಡುವುದಕ್ಕೆ ಅವಕಾಶ ಕೊಟ್ಟಾಗ ನಾಲ್ಕೂವರೆ ಗಂಟೆಗಳ ಕಾಲ ಬೇಕಾಗುವುದನ್ನು ಪ್ರತಿದಿವಸ ಅರ್ಧ ಗಂಟೆ ಹೆಚ್ಚು ಹೊತ್ತು ಕುಳಿತುಕೊಂಡರೆ ಸರಿಹೊಂದಿಸಿ ಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ. ಆದ್ದರಿಂದ ಪ್ರತಿ ದಿವಸ ನಾಳೆಯಿಂದ 12 ಗಂಟೆಯಿಂದ 6 ಗಂಟೆಯವರೆಗೂ ಕುಳಿತುಕೊಂಡರೆ ಅರ್ಧ ಗಂಟೆ ಹೆಚ್ಚಾಗಿ ಕುಳಿತುಕೊಂಡ ಹಾಗೆ ಆಗುತ್ತದೆ. ಕಡೆ ದಿವಸ ವಿಷಯವನ್ನು ಇತರ ಡಿಮ್ಯಾಂಡುಗಳು ಬಂದಾಗ ವಿಚಾರ ಮಾಡಬಹುದು. ಈಗ ಸದ್ಯಕ್ಕೆ ಈ ರೀತಿ ಮಾಡಬಹುದು ಎಂದು ನಾನು ಸೂಚನೆ ಮಾಡುತ್ತೇನೆ.

ಶ್ರೀ ಎಸ್. ಎಂ. ಕೃಷ್ಣ (ಮದ್ದೂರು).—ಸ್ವಾಮಿ, ಈ ವಿದ್ಯಾಭ್ಯಾಸದ ಇಲಾಖೆಯ ಬೇಡಿಕೆಯ ಸಂಬಂಧದಲ್ಲಿ ನಾನು ಹಲವು ಮಾತುಗಳನ್ನು ಆಡಬಯಸುತ್ತೇನೆ. ವಿದ್ಯಾಭ್ಯಾಸದ ವಿಚಾರಗಳ ಬಗ್ಗೆ ಆಗಿಂದಾಗ್ಗೆ ನಾವು ಈ ಸಭೆಯಲ್ಲಿ ಚರ್ಚೆ ಮಾಡುತ್ತಾ ಬಂದಿದೇವೆ. ಸುಮಾರು 22 ಕೋಟಿ ರೂಪಾಯಿಗಳ ಬೇಡಿಕೆಯನ್ನು ಮಾನ್ಯ ಸಚಿವರು ಸಭೆಯ ಮುಂದೆ ಮಂಡಿಸಿದ್ದಾರೆ. ಕಳೆದ ಒಂದು ವರ್ಷದಲ್ಲಿ ವಿದ್ಯಾಭ್ಯಾಸದ ಕ್ಷೇತ್ರದಲ್ಲಿ ಎಷ್ಟರಮಟ್ಟಿನ ಪ್ರಗತಿಯನ್ನು ನಾವು ಸಾಧಿಸಿದ್ದೇವೆ ಎನ್ನುವುದನ್ನು ಅಳತೆ ಮಾಡತಕ್ಕ ದಿವಸ ಇದು. ವಿದ್ಯಾ ಕ್ಷೇತ್ರದಲ್ಲಿ ಪ್ರಗತಿಯು ಒಂದೇ ಅಲ್ಲ, ಆ ಪ್ರಗತಿಯ ಜೊತೆಗೆ ಒಂದು ಸ್ಪಷ್ಟವಾದಂತಹ ಧ್ಯೇಯವನ್ನು, ಉದ್ದೇಶವನ್ನು ಇಟ್ಟುಕೊಂಡು ಒಂದು ಶ್ರೇಷ್ಠವಾದಂತಹ ದಿಗ್ದರ್ಶನವನ್ನು ನಾವು ಕೊಟ್ಟಿದ್ದೇವೆಯೋ ಎನ್ನುವುದನ್ನೂ ಕೂಡ ನಾವು ಆಲೋಚನೆ ಮಾಡಬೇಕಾಗಿದೆ. ಕೆಲವು ದಿವಸಗಳ ಕೆಳಗೆ ನಾನು ಭಾಷಣ ಮಾಡುವಾಗ ಹೇಳಿದೆ ಈ ವಿದ್ಯಾಭ್ಯಾಸದ ಕ್ಷೇತ್ರದಲ್ಲಿ ಈ ದಿವಸ ಸುಧಾರಣೆ ಮಾತು ಸರ್ವೇ ಸಾಮಾನ್ಯವಾಗಿ ಆಡಲ್ಪಡುತ್ತಾ ಇದೆ, ಮತ್ತು ಆಗಿಂದಾಗ್ಗೆ ಸಂಸ್ಥಾನ ಸರಕಾರಗಳು ರಾಜ್ಯ ಸರಕಾರಗಳು ಈ ಸುಧಾರಣೆ ಮಾಡತಕ್ಕ ಸಪದಲ್ಲಿ ಹಲವಾರು ಸಮಿತಿಗಳನ್ನು ಕೂಡ ನೇಮಕ ಮಾಡಿ ಆ ಸಮಿತಿಗಳಿಂದ ವರದಿಯನ್ನು ಕೂಡ ಪಡೆದದ್ದು ಆಗಿದೆ. ಬೇಕಾದಷ್ಟು ಸಮಿತಿಗಳು ನೇಮಕವಾಗಿವೆ. ಆ ಸಮಿತಿಗಳ ವರದಿಗಳೂ ಕೂಡ ಸರಕಾರದ ಮುಂದೆ ಬಂದು ಬಿದ್ದಿವೆ. ಆದರೆ ಯಾವ ಒಂದು ಸ್ಪಷ್ಟವಾದಂತಹ ನಿಲುವನ್ನು ಕೂಡ ಸರಕಾರ ಪಡೆದುಕೊಂಡಿಲ್ಲ ಎಂದು ನಾನಾದರೂ ಕೂಡ

ಭಾವನೆ ಮಾಡಬೇಕಾಗಿದೆ. ಸಾಕಾದಷ್ಟು ನಾವು ಈ ವಿದ್ಯಾಭ್ಯಾಸ ಸುಧಾರಣೆಯ ಬಗ್ಗೆ ಮಾತನ್ನು ಆಡಿದ್ದೇವೆ ಮತ್ತು ಹಲವಾರು ಕ್ಷೇತ್ರದಲ್ಲಿ ನಾವು ಕೆಲವೊಂದು ಸುಧಾರಣೆಗಳಿಗೆ ಹುಟ್ಟೂ ಕೂಡ ಹಾಕಿದ್ದೇವೆ. ನನಗಾದರೂ ಅನಿಸುತ್ತದೆ 17 ವರ್ಷಗಳು ಕಳೆದು ಹೋಗಿವೆ, ಈ 17 ವರ್ಷಗಳು ಬಹಳ ಅಮೂಲ್ಯವಾದ ಕಾಲ, ಸ್ವಾತಂತ್ರ್ಯ ಬರುವುದಕ್ಕೆ ಮುನ್ನ ನಮ್ಮಲ್ಲಿ ಒಂದು ಸ್ಪಷ್ಟವಾದ ಧ್ಯೇಯವಾಗಲಿ ಉದ್ದೇಶವಾಗಲೀ ಇರಲಿಲ್ಲ. ಆದರೆ ಸ್ವಾತಂತ್ರ್ಯ ಬಂದ ಮೇಲೆ ನಮ್ಮ ಮಕ್ಕಳಿಗೆ ಎಂತಹ ವಿದ್ಯಾಭ್ಯಾಸ ಪದ್ಧತಿ ಬೇಕು ಎನ್ನುವುದರ ಬಗ್ಗೆ ಆದರೂ ಕೂಡ ಒಂದು ಸ್ಪಷ್ಟವಾದಂತಹ ಅಭಿಪ್ರಾಯ ಬರುತ್ತದೆ ಎಂದು ನಾನಾದರೂ ನಿರೀಕ್ಷೆ ಮಾಡಿದ್ದೆ. ಆದರೆ ಆ ನಿರೀಕ್ಷೆಯಿಂದ ನಮಗೆ ಯಾರಿಗೂ ಕೂಡ ಸಮಾಧಾನವಾಗಲಿಲ್ಲ ಮತ್ತು ಒಂದು ರೀತಿಯ ಮಹತ್ವಾಕಾಂಕ್ಷೆ ಬಂದಿಲ್ಲ ಎನ್ನುವುದನ್ನು ಈ ಸಮಯದಲ್ಲಿ ಹೇಳಬೇಕಾಗಿದೆ. ನಾನು ಆ ದಿವಸವೇ ನನ್ನ ಭಾಷಣದಲ್ಲಿ ತಿಳಿಸಿದೆ. ವಿಶ್ವ ವಿದ್ಯಾನಿಲಯದ ಮಟ್ಟದಲ್ಲಿ—ಇಂಟರ್‌ಮೀಡಿಯಟ್ ಕೋರ್ಸ್ ಎರಡು ವರ್ಷ ಇರಬೇಕೇ, 11ನೇ ಸ್ಟ್ಯಾಂಡರ್ಡ್‌ನ್ನು ವಿಶ್ವವಿದ್ಯಾನಿಲಯದವರು ವಹಿಸಿಕೊಳ್ಳಬೇಕೇ ಅಥವಾ ಹೈಸ್ಕೂಲಿನಲ್ಲಿ ಒಂದು ವರ್ಷ ಇರಬೇಕೇ ಎನ್ನುವ ವಿಚಾರದಲ್ಲೂ ಕೂಡ ಯಾವ ಒಂದು ನಿಲುವನ್ನೂ ಇದುವರೆಗೂ ತೆಗೆದುಕೊಂಡಿಲ್ಲ. ಹಾಗೆ ಒಂದು ಪಕ್ಷ ನಿಲುವನ್ನು ತೆಗೆದುಕೊಂಡಿದ್ದರೂ ಕೂಡ ಅದು ಬಹುಮಟ್ಟಿಗೆ ಅಸ್ಪಷ್ಟವಾಗಿಯೇ ಉಳಿದಿದೆ. ಅದಕ್ಕೆ ನಾನು ಸಲಹೆ ಮಾಡುವುದು ಏನೆಂದರೆ ಕೇಂದ್ರ ವಿದ್ಯಾ ಮಂತ್ರಿಯವರಾದಂತಹ ಮಾನ್ಯ ಚಾಗ್ಲ ಅವರು ಇತ್ತೀಚೆಗೆ ಲೋಕ ಸಭೆಯಲ್ಲಿ ವಿದ್ಯಾಭ್ಯಾಸದ ಬೇಡಿಕೆಯ ಬಗ್ಗೆ ಭಾಷಣ ಮಾಡುವಾಗ ಒಂದು ಮಾತನ್ನು ಆಡಿದ್ದಾರೆ ಅದು ಏನೆಂದರೆ : ''ನಮ್ಮ ದೇಶದ ವಿದ್ಯಾಭ್ಯಾಸದ ಪರಿಣತರು ಮತ್ತು ವಿದೇಶಗಳಿಂದಲೂ ಕೂಡ ಆಹ್ವಾನ ಮಾಡಲ್ಪಡತಕ್ಕ ಕೆಲವು ಪರಿಣತರು ಸೇರಿ ನಮ್ಮ ದೇಶದ ವಿದ್ಯಾಭ್ಯಾಸ ಪದ್ಧತಿಯ ಬಗ್ಗೆ ಸಾಕಾದಷ್ಟು ಅಧ್ಯಯನ ಮಾಡತಕ್ಕ ಒಂದು ಸಣ್ಣ ಸಮಿತಿಯನ್ನು ಕೇಂದ್ರ ಸರಕಾರದವರು ನೇಮಕ ಮಾಡುತ್ತಾರೆ'' ಎಂದು ಆ ಸಮಿತಿಯವರು ಇಡೀ ದೇಶದಾದ್ಯಂತ ಸಂಚಾರ ಮಾಡಿ ಸಂಬಂಧಪಟ್ಟ ವಿಶ್ವವಿದ್ಯಾನಿಲಯಗಳ ಮತ್ತು ವಿದ್ಯಾಭ್ಯಾಸದ ಚಳಕಟ್ಟಿನಲ್ಲಿರತಕ್ಕ ಎಲ್ಲರನ್ನೂ ಕೂಡ ಸಾಧ್ಯವಾದಷ್ಟು ಭೇಟಿ ಮಾಡಿ ನಮ್ಮ ದೇಶದ ಮಕ್ಕಳಿಗೆ ಎಂತಹ ವಿದ್ಯಾಭ್ಯಾಸ ಪದ್ಧತಿಯನ್ನು ಇವತ್ತು ವ್ಯವಸ್ಥೆ ಮಾಡಬೇಕು ಎನ್ನುವ ವಿಚಾರದಲ್ಲಿ ಒಂದು ನಿಲುವನ್ನು ತೆಗೆದುಕೊಳ್ಳಬೇಕೆಂದು ಆಶೆ ಮಾಡುತ್ತೇನೆ. ಆದುದರಿಂದ ನಾನು ಮೈಸೂರು ವಿಶ್ವವಿದ್ಯಾನಿಲಯಕ್ಕೂ, ಕರ್ಣಾಟಕ ವಿಶ್ವವಿದ್ಯಾನಿಲಯಕ್ಕೂ ಮತ್ತು ಮೈಸೂರು ಸರ್ಕಾರಕ್ಕೂ ಪ್ರಾರ್ಥನೆ ಮಾಡುವುದು ಇಷ್ಟು : ಆ ಒಂದು ಸಮಿತಿಯೇನು ವರದಿಯನ್ನು ತಾನು ಕೊಡುತ್ತದೆಯೋ ಅದಕ್ಕೆ ಕಾಯದೆ ಈ ಮಧ್ಯೆ ಆಗಿರುವ ವಿದ್ಯಾಭ್ಯಾಸದ ಚಳಕಟ್ಟಿನಲ್ಲಿ ಕೆಲಸ ಮಾಡಲು ನಮಗೆ ಅವಕಾಶ ದೊರೆತರೆ ಕ್ಷೇಮವಾಗುತ್ತದೆಂದು ನಾನು ಭಾವಿಸುತ್ತೇನೆ. ಈ ವಿದ್ಯಾಭ್ಯಾಸದ ಕ್ಷೇತ್ರದಲ್ಲಿ ಸಾಕಾದಷ್ಟು ಪ್ರಯೋಗಗಳು ನಡೆದಿವೆ. ಅವನ್ನು ಈ ದಿವಸ ಜಾರಿಗೆ ತರಬೇಕಾಗಿದೆ. ಆದರೆ ನಾವು ಮಾಡಿರುವ ಸುಧಾರಣೆಯಿಂದ ಅದು ಅರ್ಧಂಬರ್ಧವಾಗಿರುವುದರಿಂದ ಅನರ್ಥ ಜಾಸ್ತಿಯಾಗಿದೆ. ಆ ದೃಷ್ಟಿಯಿಂದ ಕೇಂದ್ರ ಸಮಿತಿಯೇನು ವರದಿ ಅಥವ ಸಲಹೆ ಮಾಡುತ್ತದೆ ಅದರ ಯೋಗ್ಯತೆ ಮೇಲೆ ನಾವು ಚರ್ಚೆ ಮಾಡಿ ಒಂದು ನಿರ್ಧಾರಕ್ಕೆ ಬರಬಹುದು ಎಂದು ಈ ಸಮಯದಲ್ಲಿ ಅರಿಕೆ ಮಾಡುತ್ತೇನೆ.

ಪಕ್ಕದ ಮದ್ರಾಸು ಪ್ರಾಂತ ಇತ್ತೀಚೆಗೆ ಉದಾತ್ತವಾದ ಒಂದು ನೆರವನ್ನು ನೀಡಿದೆ. ಮದ್ರಾಸು ಎಲ್ಲೆಯಲ್ಲಿ ಯಾರೇ ಒಬ್ಬ ವಿದ್ಯಾರ್ಥಿ ಅಥವ ವಿದ್ಯಾರ್ಥಿನಿಯಾಗಲಿ ಎಸ್. ಎಸ್. ಎಲ್ ಸಿ. ವರೆಗೆ ಓದಿದರೆ ಉಚಿತವಾಗಿ ವಿದ್ಯಾಭ್ಯಾಸವನ್ನು ನೀಡುವ ಅವಕಾಶವನ್ನು ಮದ್ರಾಸು ಕಲ್ಪಿಸಿದೆ. ಆಂಧ್ರ ಕೂಡ ಇದೇ ರೀತಿಯ ಒಂದು ನಿರ್ಧಾರವನ್ನು ಮಾಡಿದೆ. ಶ್ರೀಮಾನ್ ಕಂಠಿಯವರು ನಿನ್ನೆ ಮೊನ್ನೆ ಕೂಡ ಕೊಯಮತ್ತೂರಿನಲ್ಲಿ ಭಾಷಣಮಾಡಿದರು. ನನಗಾದರೂ ಮದ್ರಾಸಿಗೆ ಹೋದಾಗ ಅಲ್ಲಿಯ ಜನರ ಒಂದು ಸ್ಫೂರ್ತಿಯ ಕಿರಣ ಕೂಡ ಅವರಲ್ಲುಂಟಾಗಲಿಲ್ಲವಲ್ಲಾ ಎಂದು ಪಶ್ಚಾತ್ತಾಪವಾಯಿತು. ಏಕೆಂದರೆ ಆ ಸರ್ಕಾರ ಕೈಗಾರಿಕೆ, ವಿದ್ಯಾಭ್ಯಾಸ, ರಾಜಕೀಯ ಕ್ಷೇತ್ರ ಮುಂತಾದುವುಗಳಲ್ಲಿ ಒಂದು ವಿಶೇಷ ಮಾದರಿಯಾಗಿದೆ. ಒಂದು ಕಾಲದಲ್ಲಿ ನಾವೂ ಕೂಡ ನಮ್ಮ ರಾಜ್ಯವನ್ನು ಮಾದರಿ ಮೈಸೂರೆಂದು ಕರೆಯುತ್ತಿದ್ದೆವು. ಅದೆಲ್ಲವೂ ಕೂಡ ಗತಕಾಲದ ವೈಭವವಾಯಿತೋ ಏನೋ. ಮದ್ರಾಸ್ ರಾಜ್ಯ ಇಂಥ ಒಳ್ಳೆಯ ನಿಲುವನ್ನು ತೆಗೆದುಕೊಂಡಿರುವಾಗ ಮೈಸೂರು ರಾಜ್ಯವೇಕೆ ಹಿಂದಿರಬೇಕು ಎಂಬ ಪ್ರಶ್ನೆಗೆ ಮಾನ್ಯ ವಿದ್ಯಾ ಮಂತ್ರಿಗಳು ಉತ್ತರ ಕೊಡಬೇಕಾಗಿದೆ. ಮದ್ರಾಸು ಸರ್ಕಾರದಲ್ಲಿ 8 ಜನ ಮಂತ್ರಿಗಳಿದ್ದರೆ ನಾವು ಯಾರಿಗೂ ಕಡಮೆಯಿಲ್ಲ ಎಂದು 25 ಜನ ಇಟ್ಟುಕೊಂಡಿರುವಾಗ ಈ ಸರ್ಕಾರ ಎಷ್ಟುಮಟ್ಟಿಗೆ ಕೆಲಸ ಮಾಡುತ್ತಿದೆ ಎಂಬುದನ್ನು ನೋಡಬಹುದು. ಇದಕ್ಕೆ ಸಮಜಾಯಿಸಿ ಹೇಳಲು ನಿಮ್ಮಿಂದ ಸಾಧ್ಯವಿಲ್ಲ. ಏಕೆಂದರೆ ನಿಮ್ಮಲ್ಲಿ ದೇಶ ಪ್ರೇಮವಾಗಲಿ ಅಥವಾ ಪ್ರಜಾ ಪ್ರೇಮವಾಗಲಿ ಉಳಿದಿಲ್ಲ. ಈ ಎರಡರ ಅಭಾವದಿಂದಾಗಿ ಈ ರಾಜ್ಯದ ವಿದ್ಯಾಭ್ಯಾಸ ಕ್ಷೇತ್ರದಲ್ಲಿ ಪ್ರಗತಿಯನ್ನು ನೋಡಲು ಸಾಧ್ಯವಾಗಲಿಲ್ಲ. ಶ್ರೀಮಾನ್

(ಶ್ರೀ ಎಸ್. ಎಂ ಕೃಷ್ಣ)

ಕಂಠಿಯವರ ಬಗ್ಗೆ ನಾನು ಹಿಂದೆ ಮಾತನಾಡಿದ್ದೇನೆ. ಈ ದಿವಸ ಮತ್ತೆ ಮಾತನಾಡಬೇಕೆಂದರೆ ಈಗ ನನಗೆ ಅಷ್ಟು ಉತ್ಸಾಹವಿಲ್ಲ. ಏಕೆಂದರೆ ನಾನು ಕಟ್ಟಾ ಮೈಸೂರು ವಾದಿ ಎಂದು ಕೆಲವರು ತಿಳಿದಿದ್ದಾರೆ. ಮೈಸೂರಲ್ಲಿರುವುದೆಲ್ಲಾ ಅಪದ್ಧ ಎಂದು ಕೆಲವರಿಗೆ ಭಾವನೆ ಇರಬಹುದು. ಆದರೆ ನಾನಾದರೂ ಬಹಳ ನಮ್ರತೆಯಿಂದ ಸೂಚಿಸುವುದು: ನಾನು ಮೈಸೂರು ವಾದಿಯೇನೋ ಹೌದು, ಕೆಲವು ವಿಷಯಗಳ ಮಟ್ಟಿಗೆ ಮೈಸೂರಿನ ಬಗ್ಗೆ ನನಗೆ ಬಹಳ ಅಭಿಮಾನವಿದೆ. ಆದರೆ ಕೃಷ್ಣಾನದಿ ನೀರಿನ ವಿಚಾರ ಬಂದಾಗ ನಾನು ಮೈಸೂರಿನವನಲ್ಲ, ಬಿಜಾಪುರ ಮತ್ತು ಗುಲ್ಬರ್ಗ ಪ್ರದೇಶಗಳಿಗೆ ನೀರನ್ನು ದೊರಕಿಸಿಕೊಡಲು ಸರ್ಕಾರವನ್ನು ಒತ್ತಾಯಮಾಡಲು ನಿಂತವರಲ್ಲಿ ನಾನು ಮೊಟ್ಟ ಮೊದಲನೆಯವನು ಎಂಬುದನ್ನು ವ್ಯಕ್ತಮಾಡಿದೆ. ಆದುದರಿಂದ ನನ್ನ ಮೇಲೆ ಕೇವಲ ಮೈಸೂರು ವಾದಿ, ಎಂದು ಥೂಳನ್ನೆಬ್ಬಿಸಿ ನಾನು ಮಾಡುವ ಟೀಕೆಗಳನ್ನೆದುರಿಸುವುದು ನೀತಿಯಲ್ಲ ಎಂದು ನಾನು ಹೇಳುತ್ತೇನೆ. ಮತ್ತೊಂದು ಲಘುವಾಗಿ ಮಾತನಾಡುವುದಾದರೆ ನನ್ನಲ್ಲಿ ಭಾವೈಕ್ಯತೆಗೆ ಅಭಾವವಿರುವುದನ್ನು ಕಂಠಿಯವರು ಹೊಸದಾಗಿ ಕಂಡಿದ್ದಾರೆ, ಅದಕ್ಕೆ ಅವರು ಹೇಳುವುದು ನಿಮಗೆ ಉತ್ತರ ಕರ್ಣಾಟಕದ ಹೆಣ್ಣನ್ನು ದೊರಕಿಸುತ್ತೇನೆ, ಅದರಿಂದ ನಿಮ್ಮ ಟೀಕೆಯು ಹೊಡೆತ ಕಡಮೆಯಾಗಬಹುದು ಎಂದು. ಸ್ವಾಮಿ, ಈ ವಿದ್ಯಾಭ್ಯಾಸದ ಕ್ಷೇತ್ರದಲ್ಲಿ ಕಂಠಿಯವರು ಕೊಟ್ಟಿರುವ ನಿರ್ದೇಶನ ನೋಡಿದರೆ ಎಷ್ಟು ನಾನು ನನ್ನ ಭವಿಷ್ಯ ಅವರ ಕೈಲಿ ಕೊಡಲು ಸಿದ್ಧವಾಗಿದ್ದೇನೆ ಎಂಬ ವಿಚಾರದಲ್ಲಿ ಸಾಕಾದಷ್ಟು ಸಂಶಯ ಉಂಟಾಗುತ್ತದೆ. ಅದೇನೇ ಇರಲಿ, ಕಂಠಿಯವರಲ್ಲಿ ಕೆಲವು ಪ್ರಗತಿಪರವಾದ ಯೋಚನೆಯಿದೆ. ಮುಖ್ಯವಾಗಿ ಪಠ್ಯಪುಸ್ತಕಗಳನ್ನು ರಾಷ್ಟ್ರೀಕರಣ ಮಾಡುತ್ತೇವೆಂದು ಕಂಠಿಯವರು ಹಿಂದೊಮ್ಮೆ ಹೇಳಿದ್ದಾರೆ. ಅದನ್ನು ಸ್ವಾಗತಿಸುತ್ತೇನೆ. ಪಠ್ಯಪುಸ್ತಕಗಳನ್ನು ರಾಷ್ಟ್ರೀಕರಣ ಮಾಡುವುದೊಂದೇ ಅಲ್ಲ, ಸಣ್ಣ ಸಣ್ಣ ತರಗತಿಗಳಲ್ಲಿ ಓದುವ ಬಾಲಕಬಾಲಕಿಯರಿಗೆ ಶಾಲೆ ಪ್ರಾರಂಭವಾದ ಮೇಲೆ ಹಲವಾರು ಸ್ಥಳಗಳಲ್ಲಿ ಹಲವಾರು ಸಾರಿ ಪುಸ್ತಕಗಳೇ ಸಿಕ್ಕದೆ ದೊಡ್ಡ ಸಂಕಷ್ಟಕ್ಕೀಡಾಗುತ್ತಾರೆ. ಮತ್ತು ಅದರಿಂದ ತಂದೆತಾಯಿಗಳಿಗೆ ಕೂಡ ಬಹಳ ದೊಡ್ಡದಾದ ತೊಂದರೆ ಬರುತ್ತದೆ. ಕಾರಣ ಇಷ್ಟೇ: ಕೆಲವು ಸಮಯಗಳಲ್ಲಿ ಕರ್ಣಾಟಕದಲ್ಲಿ ಪಠ್ಯಪುಸ್ತಕಗಳು ಮಾಯವಾಗುತ್ತವೆ. ಅವೆಲ್ಲಾ ಕಾಳಸಂತೆಯಲ್ಲಿ ಮಾರಾಟವಾಗುತ್ತವೆ. ತಂದೆತಾಯಿಗಳು ಮನೆಗೆ ಹೋದರೆ ಅಪ್ಪ ಪುಸ್ತಕ ತಂದಿರಾ, ಅಮ್ಮಾ ಪುಸ್ತಕ ತಂದಿರಾ ಎಂದು ಮಕ್ಕಳು ಕೇಳುವುದು ವಾಡಿಕೆ. ಆದುದರಿಂದ ಹೇಗಾದರೂ ಮಾಡಿ, ಪುಸ್ತಕಗಳು ಸಲೀಸಾಗಿ ದೊರೆಯುವಂತೆ ಮಾಡಬೇಕು. ಮತ್ತು ಕೆಲವು ಪುಸ್ತಕಗಳಲ್ಲಿ ವಿವಾದಾತ್ಮಕವಾದ ಕೆಲವು ವಿಚಾರಗಳು ಕೂಡ ಇರುತ್ತವೆ. ಹಿಂದೊಂದು ಸಲ ಮುಕ್ಕಣ್ಣಪ್ಪನವರು ಈ ಸಭೆಯಲ್ಲಿ ತ್ರಿವರ್ಣರಂಜಿತ ಬಾವುಟದಲ್ಲಿ ಚರಕ ಮತ್ತು ಚಕ್ರ ಇರುವ ಬಗ್ಗೆ ಜಿಜ್ಞಾಸೆಗೆ ಅವಕಾಶವಾಗಿದೆ ಎಂದು ಹೇಳಿದಾಗ ಬಹಳ ಗಲಾಟೆಯಾಯಿತು. ಈ ಎಲ್ಲಕ್ಕೂ ಕೂಡ ಪರಮ ಔಷಧಿ ಅಂದರೆ ಪರಿಣತರ ಒಂದು ಸಮಿತಿ ಮಾಡಿ ಅವರಿಗೆ ಈ ಪುಸ್ತಕಗಳನ್ನಾರಿಸುವ ಕೆಲಸ ವಹಿಸಿ ಯಾವ ಯಾವ ಶಾಲೆಗಳಿಗೆ ಯಾವುದಿರಬೇಕು ಎಂದು ನಿರ್ಣಯ ಮಾಡಿದರೆ ಒಳ್ಳೆಯದು, ಹಾಗೆ ಮಾಡಬೇಕು ಎಂದು ಪ್ರಾರ್ಥನೆ ಮಾಡುತ್ತೇನೆ.

ಗ್ರಾಮಾಂತರ ಪ್ರದೇಶದ ವಿದ್ಯಾಭ್ಯಾಸದ ಬಗ್ಗೆ ಸರ್ಕಾರದ ನೀತಿಯಾದರೂ ಕೂಡ ಬಹಳ ಶೋಚನೀಯವಾಗಿದೆ. ತುರ್ತು ಪರಿಸ್ಥಿತಿಯಿಂದ ಕಳೆದ ವರ್ಷ ನಮ್ಮ ನಾಡಿನ ಗ್ರಾಮಾಂತರ ಶಾಲಾ ಕಟ್ಟಡಗಳನ್ನು ಕಟ್ಟಲು ಕೊಡುವ ಸಹಾಯ ಧನದಲ್ಲಿ ಸ್ವಲ್ಪ ಖೋತಾ ಮಾಡಿದರು. 1,400 ರೂಪಾಯಿಗಳ ಸಬ್ಸಿಡಿಯನ್ನು ಸರ್ಕಾರ ಮೊದಲು ಕೊಡುತ್ತಿತ್ತು, ಅದನ್ನು 1.100ಕ್ಕೆ ಅಥವಾ 900ಕ್ಕೆ ಇಳಿಸಿದರು.

4-00 P.M.

ಇದರಿಂದೇನಾಗಿದೆ ಎಂದರೆ, ಮೊದಲೇ ನಮ್ಮ ಹಳ್ಳಿಗಾಡಿನ ಪ್ರದೇಶದಲ್ಲಿ ಈ ವಿದ್ಯಾಭ್ಯಾಸಕ್ಕಾಗಿ ಸಾಕಾದಷ್ಟು ಒಳ್ಳೆಯ ವಾತಾವರಣ ಈವೊತ್ತು ಇಲ್ಲ. ಈ ಮಧ್ಯೆ ಸರಕಾರದವರು ಮತ್ತು ಆ ಸ್ಥಳದವರು ಇಬ್ಬರೂ ಸೇರಿ ಯಾವುದಾದರೂ ಒಂದು ರೀತಿಯಲ್ಲಿ ಒಂದು ಸಣ್ಣ ಶಾಲಾ ಕಟ್ಟಡಗಳನ್ನು ಕಟ್ಟುತ್ತಾರೆ ಎನ್ನುವ ಆಸೆಯನ್ನು ಇಟ್ಟುಕೊಂಡಿದ್ದರೆ ನೀವು ಆ ಆಸೆಗೂ ಕೂಡ ಭಂಗ ಮಾಡುತ್ತಿದ್ದೀರಿ. ಇದನ್ನು ನಾವು ವಿಶಾಲವಾಗಿ ಹಾಗೂ ವಿಸ್ತೃತವಾಗಿ ರಚನೆ ಮಾಡಬೇಕಾದರೆ ನೇರವಾಗಿ ನಿಮ್ಮ ಪ್ರಜಾಪ್ರಭುತ್ವ ಯಶಸ್ವಿಯಾಗಿ ನಡೆಯಬೇಕಾದರೆ ನೀವು ಮೊಟ್ಟಮೊದಲನೆಯದಾಗಿ ವಿದ್ಯಾಭ್ಯಾಸದ ಕಡೆಗೆ ದೃಷ್ಟಿ ಇಡಬೇಕು. ಯಾವ ಪ್ರಜಾಪ್ರಭುತ್ವದಲ್ಲಿ ಶೇಕಡಾ 20 ಜನರು

ಅಕ್ಷರಸ್ಥರಿರುವರೋ ಅಂತಹ ಜನರ ಮಟ್ಟವನ್ನು ಹೆಚ್ಚಿಸುವುದಕ್ಕೆ ಪ್ರಯತ್ನ ಮಾಡಬೇಕು. ನೀವು ತುರ್ತು ಪರಿಸ್ಥಿತಿಯ ಹೆಸರಿನಲ್ಲಿ ಖೋತಾ ಮಾಡಿರುವುದು ಪ್ರಗತಿಯ ಮಾರ್ಗವನ್ನು ನೀವು ಬಿಟ್ಟಿರುವ ರೀತಿಯಲ್ಲಿದೆ ಎನ್ನುವುದು ಭಾಸವಾಗುತ್ತದೆ. ಒಂದು ಹಳ್ಳಿಯಲ್ಲಿ ಕನಿಷ್ಟ ಅವಶ್ಯಕತೆಗಳು ಮೂರು, ಎಂದರೆ ಶಾಲೆಯ ಕಟ್ಟಡ, ಹಳ್ಳಿಯ ಜನಕ್ಕೆ ವೈದ್ಯಕೀಯ ಸಹಾಯಕ್ಕೆ ಅನುಕೂಲವಾಗುವಂತಹ ಒಂದು ಆಸ್ಪತ್ರೆ ಮತ್ತು ಹಳ್ಳಿಗೆ ಒಂದು ಅಪ್ರೋಚು ರೋಡು, ಎಷ್ಟು ಹಳ್ಳಿಗಳಲ್ಲಿ ಪ್ರೈಮರಿ ಶಾಲೆ ಕಟ್ಟಡಗಳು ಇಲ್ಲ ಎನ್ನುವುದಕ್ಕೆ ವಿಶಾಲ ಮೈಸೂರು ಸಂಸ್ಥಾನದಲ್ಲಿ ಏನಾದರೂ ಸರ್ವೆ ಮಾಡಿದ್ದೀರಾ ಎಂದು ನೋಡಿದರೆ ನಿಮಗೆ ಆ ಬಗ್ಗೆ ಸಾಕಾದಷ್ಟು ಮಾಹಿತಿ ಇಲ್ಲವೆಂದು ನನ್ನ ಭಾವನೆ. ಒಂದೊಂದು ತಾಲ್ಲೂಕಿನಲ್ಲಿ ಸುಮಾರು ಏನೂ ಇಲ್ಲ ಎಂದರೂ 100-150 ಹಳ್ಳಿಗಳಲ್ಲಿ ಇರುವ ಪ್ರೈಮರಿ ಶಾಲೆಗಳಿಗೆ ಕಟ್ಟಡಗಳಿರುವುದಿಲ್ಲ. ಒಂದೊಂದು ತಾಲ್ಲೂಕಿನಲ್ಲಿಯೇ ಇಷ್ಟು ಇದ್ದರೆ ನಮ್ಮ ಮೈಸೂರು, ಸಂಸ್ಥಾನದ ಎಲ್ಲ ತಾಲ್ಲೂಕುಗಳನ್ನೂ ಸರ್ವೆ ಮಾಡಿ ನೋಡಿದರೆ ಶೇಕಡ ನೂರಕ್ಕೆ 60 ರಿಂದ 70ರ ವರೆಗೆ ಇರುವ ಪ್ರೈಮರಿಶಾಲೆಗಳಲ್ಲಿ ಶಾಲಾ ಕಟ್ಟಡಗಳು ಇಲ್ಲ. ನೀವು ಇದಕ್ಕೇನಾದರೂ ಉಪಾಯವನ್ನು ಕಂಡು ಹಿಡಿದಿದ್ದೀರಾ ಎಂದರೆ ಏನೂ ಕಾಣುತ್ತಿಲ್ಲ. ಒಂದು ಕಡೆ ಹಣವನ್ನು ಲೀಲಾಜಾಲವಾಗಿ ಶರಾವತಿಗಾಗಿ ನೀರಿನಂತೆ ಖರ್ಚು ಮಾಡುತ್ತಿದ್ದೀರಿ. ಇಲ್ಲಿ ಶರಾವತಿಗಾಗಿ ಪ್ರಗತಿದಾಯಕವಾಗಿ ಎಷ್ಟು ಲಾಭ ಬರುತ್ತದೆ ಎಂದು ನೀವು ಹಣವನ್ನು ಕೊಟ್ಟಿದ್ದೀರೋ ಅದಕ್ಕೂ ನೂರರಷ್ಟು ತ್ವರಿತವಾದ ರೀತಿಯಲ್ಲಿ ನೀವು ಪ್ರತಿಯೊಂದು ಹಳ್ಳಿಯಲ್ಲೂ ಪ್ರೈಮರಿಶಾಲಾ ಕಟ್ಟಡಗಳನ್ನು ಕಟ್ಟುವ ಏರ್ಪಾಡನ್ನು ಮಾಡಬೇಕು ಎಂದು ನಾನು ಇಲ್ಲಿ ಬಹು ಒತ್ತಾಯಪೂರ್ವಕವಾಗಿ ಸರಕಾರದಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ತುರ್ತು ಪರಿಸ್ಥಿತಿಯ ಹೆಸರಿನಲ್ಲಿ ಏನು ಒಂದು ಖೋತಾ ಮಾಡಿದ್ದೀರೋ ಅವನ್ನು ಪುನರ್ವಿಮರ್ಶೆ ಮಾಡುವ ಕಾಲ ಇವೊತ್ತು ಸನ್ನಿಹಿತವಾಗಿದೆ ಇವೊತ್ತು ಶೇಕಡ ಎಂಬತ್ತು ಜನ ವಾಸ ಮಾಡುವಂತಹ ಹಳ್ಳಿಗಳು ನಮ್ಮ ರಾಜ್ಯದಲ್ಲಿ ಜಾಸ್ತಿಯಾಗಿರುವ ಈ ಕಾಲದಲ್ಲಿ ನೀವು ಹಳ್ಳಿಗಾಡಿನ ಜನರ ವಿದ್ಯಾಭ್ಯಾಸದ ಬಗ್ಗೆ ನಿರ್ಲಕ್ಷ ಮಾಡಕೂಡದು ಮತ್ತು ಯಾವುದೇ ಪ್ರಜಾ ಸರಕಾರಕ್ಕಾಗಲೀ ಇದು ಮಾನ್ಯತೆಯನ್ನು ತರತಕ್ಕ ಅಂಶವೂ ಅಲ್ಲ ಎಂದು ವಿದ್ಯಾ ಮಂತ್ರಿಗಳ ಗಮನಕ್ಕೆ ತರಲಿಚ್ಛಿಸುತ್ತೇನೆ.

ಬೆಂಗಳೂರು ಯೂನಿವರ್ಸಿಟಿ ಬಗ್ಗೆ ಒಂದು ಮಾತು. ಇವೊತ್ತು ನಾವು ಪತ್ರಿಕೆಗಳಲ್ಲಿ ಓದಿದಂತೆ ಬೆಂಗಳೂರಿನಲ್ಲಿ ಒಂದು ಯೂನಿವರ್ಸಿಟಿಯನ್ನು ಈ ಮುಂದಿನ ಅಕೆಡಿಮಿಕ್ ವರ್ಷದಿಂದಲೇ ಪ್ರತಿಷ್ಠಾಪಿತವಾಗುತ್ತದೆ ಎಂದು ಇತ್ತು. ಇದು ಸ್ವಾಗತಾರ್ಹವಾದ ವಿಚಾರ. ನನಗೆ ತಿಳಿದ ಹಾಗೆ ಮಾನ್ಯ ವಿದ್ಯಾ ಸಚಿವರು ಒಂದು ಹೇಳಿಕೆಯನ್ನು ಕೊಟ್ಟು ಬೆಂಗಳೂರು ಯೂನಿವರ್ಸಿಟಿಯ ರೂಪುರೇಖೆಗಳು ಹೇಗಿರಬೇಕು ಎನ್ನುವುದನ್ನು ಚರ್ಚೆ ಮಾಡಿ ವಿಮರ್ಶೆ ಮಾಡಲು ಒಂದು ಮೇಲ್ಮಟ್ಟದ ಸಮಿತಿಯನ್ನು ಮಾಡಿ ಅದರಲ್ಲಿ ವಿದ್ಯಾಭ್ಯಾಸದಲ್ಲಿ ಸಾಕಾದಷ್ಟು ಅನುಭವವಿರತಕ ಕೆಲವು ಜನರನ್ನು ನೇಮಕ ಮಾಡಿದ್ದಾರೆ ಮತ್ತು ಆ ನಂತರ ಅವರೂ ಕೂಡ ಯಾವ ಒಂದು ವರದಿಯ ಕರಡನ್ನು ಸರಕಾರಕ್ಕೆ ಸಲ್ಲಿಸಿರುವರೋ ಅವರ ಕಾಪಿಯನ್ನು ನಮ್ಮ ಮುಂದೆ ಇಡುತ್ತೇವೆಂದು ತಿಳಿಸಿದ್ದಾರೆ. ನಾವಾದರೂ ನಿರೀಕ್ಷೆ ಮಾಡುತ್ತಿರುವುದು ಏನೆಂದರೆ ಇಂತಹ ಮಹತ್ವಪೂರಿತವಾದ ಒಂದು ಹೊಸ ವಿಶ್ವವಿದ್ಯಾನಿಲಯವನ್ನು ಸೃಷ್ಟಿ ಮಾಡುವ ಈ ಕೆಲಸದಲ್ಲಿ ನಮ್ಮ ಈ ಸಭೆಯ ಸದಸ್ಯರ ಹಾಗೂ ಮೇಲ್ಮನೆಯ ಸದಸ್ಯರುಗಳ ಅಭಿಪ್ರಾಯಗಳನ್ನು ಕೇಳುತ್ತಾರೆಂದು ನಿರೀಕ್ಷೆ ಮಾಡುತ್ತಿದ್ದೇವೆ. ಬೆಂಗಳೂರು ಯೂನಿವರ್ಸಿಟಿಯ ಬಗ್ಗೆ ನೇಮಕವಾದ ಸಮಿತಿ ಏನು ವರದಿ ಮಾಡಿದೆಯೋ ಆ ವರದಿಯ ಬಗ್ಗೆ ಈ ಸಭೆಯಲ್ಲಿ ಚರ್ಚೆ ಮಾಡಿದರೆ ನಮ್ಮ ಅಭಿಪ್ರಾಯಗಳಿಗೂ ಒಂದು ಮಾನ್ಯತೆ ಸಿಗುತ್ತದೆ ಎಂದು ನಾನಾದರೂ ಆಸೆ ಮಾಡುತ್ತೇನೆ. ಬೆಂಗಳೂರು ಯೂನಿವರ್ಸಿಟಿಯ ಬಗ್ಗೆ ಒಂದು ಕರಡು ಮಸೂದೆ ಸಿದ್ಧವಾಗಿದೆ ಮತ್ತು ಆ ಮಸೂದೆ ಈ ಮನೆಯಲ್ಲಿ ಹಾಗೂ ಮೇಲ್ಮನೆಯಲ್ಲಿ ಚರ್ಚೆಯಾಗಬೇಕಾಗಿದೆ. ಆ ನಂತರ ಈ ವಿಶ್ವವಿದ್ಯಾನಿಲಯ ಅಸ್ತಿತ್ವಕ್ಕೆ ಬರಬೇಕಾಗಿದೆ ಎಂದು ಮಾನ್ಯ ವಿದ್ಯಾ ಮಂತ್ರಿಗಳ ಹೇಳಿಕೆ ಇದೆ. ಆದುದರಿಂದ ನಾನು ವಿಷಾದದಿಂದ ವಿದ್ಯಾ ಮಂತ್ರಿಗಳಿಗೆ ಹೇಳುವುದೇನೆಂದರೆ ಬೆಂಗಳೂರು ವಿಶ್ವವಿದ್ಯಾನಿಲಯವು ಒಳ್ಳೆಯ ಗಳಿಗೆಯಲ್ಲಿ ಅಸ್ತಿತ್ವಕ್ಕೆ ಬರಬೇಕು, ಅದು ಒಳ್ಳೆಯ ಶಕುನಗಳಿಂದ ಅಸ್ತಿತ್ವಕ್ಕೆ ಬರಬೇಕು. ಬಾಕಿ ಎಲ್ಲ ವಿಶ್ವ ವಿದ್ಯಾನಿಲಯಗಳಿಗೆ ಬಂದಂತಹ ಸಮಸ್ಯೆಗಳು ಮತ್ತು ಕಳಂಕಗಳು ಬೆಂಗಳೂರು ವಿಶ್ವವಿದ್ಯಾನಿಲಯಕ್ಕೆ ತಗಲಬಾರದು ಎನ್ನುವುದು ನಮ್ಮ ಉದ್ದೇಶ. ಪ್ರತಿಯೊಂದು ಕಾಲೇಜುಗಳಲ್ಲಿರುವ ತಜ್ಞರ ಸೇವೆಯನ್ನೂ ಈ ವಿಶ್ವವಿದ್ಯಾನಿಲಯಕ್ಕೆ ತೆಗೆದುಕೊಳ್ಳುವುದು ಎಂದರೆ ಚೆನ್ನಾಗಿರುತ್ತದೆ ಎಂದು ನಾನು ಸೂಚಿಸಬಯಸುತ್ತೇನೆ.

ಮೈಸೂರು ವಿಶ್ವವಿದ್ಯಾನಿಲಯದ ಬಗ್ಗೆ ನಾನು ಒಂದೆರಡು ಸಲಹೆಗಳನ್ನು ಹಿಂದೆ ಮಾತನಾಡುತ್ತಾ ಮಾಡಿದ್ದೆ. ಈಗ ಮೈಸೂರು ವಿಶ್ವವಿದ್ಯಾನಿಲಯಕ್ಕೆ ಸಬಂಧಪಟ್ಟ ಹಾಗೆ ತಾತ್ಕಾಲಿಕವಾಗಿ ನೇಮಕ ಮಾಡಿದ್ದ ಟೆಂಪರರಿ ಲೆಕ್ಚರರುಗಳ ಬಗ್ಗೆ ಸರಕಾರದ ಗಮನವನ್ನು ಬಹು ತೀಕ್ಷ್ಣವಾಗಿ ಸೆಳೆಯಲು ಇಚ್ಛೆಪಡುತ್ತೇನೆ. ಈ ಟೆಂಪರರಿ ಲೆಕ್ಚರರುಗಳ ವಿಚಾರವನ್ನು ನನಗೆ ಜ್ಞಾಪಕವಿರುವ

(ಶ್ರೀ ಎಸ್ ಎಂ ಕೃಷ್ಣ)

ಮಟ್ಟಿಗೆ ನಾನು ಶಾಸನ ಸಭೆಯ ಸದಸ್ಯನಾಗಿ ಮೊಟ್ಟ ಮೊದಲನೆಯ ಅಧಿವೇಶನದಿಂದ ಇವೊತ್ತಿನ ವರೆಗೆ ಹೇಳುತ್ತಾ ಬಂದಿದ್ದೇನೆ. ನಾನು ಹಿಂದೆ ಮೊಟ್ಟಮೊದಲನೆಯದಾಗಿ ವಿದ್ಯಾ ಸಚಿವರ ಗಮನ ವನ್ನು ಸೆಳೆದಾಗ ಕೇಡರ್ ಅಂಡ್ ರೆಕ್ರೂಟುಮೆಂಟ್ ರೂಲ್ಸುಗಳನ್ನು ಪಬ್ಲಿಕ್ ಸರ್ವಿಸ್ ಕಮಿಷನ್ನಿ ನವರು ಇಷ್ಟರಲ್ಲೇ ಪ್ರಕಟ ಮಾಡುತ್ತಾರೆ, ಎಷ್ಟು ವೇಕೆನ್ಸಿಗಳು ವಿಶ್ವವಿದ್ಯಾನಿಲಯದಲ್ಲಿ ಇವೆ ಅಷ್ಟು ಜನರನ್ನೂ ಪಬ್ಲಿಕ್ ಸರ್ವಿಸ್ ಕಮಿಷನ್ನಿನವರೇ ನೇರವಾಗಿ ರೆಕ್ರೂಟ್ ಮಾಡುತ್ತಾರೆ ಎಂದು ಎರಡು ವರ್ಷದ ಕೆಳಗೆ ಅವರು ತಿಳಿಸಿದ್ದರು.

ಶ್ರೀ ಎಸ್. ಆರ್. ಕಂಠಿ.—ಹೈಕೋರ್ಟು ತೀರ್ಮಾನ ಮಾಡಲಿ ಎಂದು ಹೋದರು. ಅದಕ್ಕೆ ತಡವಾಯಿತು.

ಶ್ರೀ ಎಸ್. ಎಂ. ಕೃಷ್ಣ.—ಎರಡು ವರ್ಷಗಳು ಆದ ಮೇಲೂ ಕೂಡ ನಮ್ಮಲ್ಲಿ ಟೆಂಪರರಿ ಲೆಕ್ಚರರುಗಳು ಆಗಿದ್ದ ಜನಕ್ಕೆ ಇನ್ನೂ ಪ್ರಮೋಷನ್ನು ಮಾಡತಕ್ಕ ಶಕ್ತಿ ಸರಕಾರಕ್ಕೆ ಬರಲಿಲ್ಲ ಎನ್ನುವು ದನ್ನು ಹೇಳಲು ವಿಷಾದವಾಗುತ್ತದೆ. ನನಗೆ ತಿಳಿದಿರುವ ಮಟ್ಟಿಗೆ ಒಬ್ಬ ಲೆಕ್ಚರರು ಎಂ. ಎಸ್‌ಸಿ. ಯಲ್ಲಿ ಮೊದಲನೇ ತರಗತಿಯಲ್ಲಿ ಪಾಸು ಮಾಡಿರತಕ್ಕ ಪದವೀಧರರು ಎಂಟು ವರ್ಷಗಳಿಂದಲೂ ಟೆಂಪರರಿ ಲೆಕ್ಚರರು ಎನ್ನುವ ಡೆಸಿಗ್ನೇಷನ್ನನ್ನು ಪಡೆದುಕೊಂಡು ಬಂದಿದ್ದಾರೆ.

ಶ್ರೀ ಎಸ್. ಆರ್. ಕಂಠಿ.—ಈ ಕಾಲೇಜುಗಳು ಮೊದಲು ಯೂನಿವರ್ಸಿಟಿಯಲ್ಲಿದ್ದುವು. ಸರಕಾರದ ವಶಕ್ಕೆ ಬಂದದ್ದು 1960 ನೇ ಜೂನ್ ತಿಂಗಳಲ್ಲಿ.

ಶ್ರೀ ಎಸ್. ಎಂ. ಕೃಷ್ಣ.—ಜೂನ್ 1960 ರಲ್ಲಿ ನಮ್ಮ ವಶಕ್ಕೆ ಬಂತು ಮತ್ತು ಅವರ ಭವಿಷ್ಯವೂ ಬಹಳ ಉತ್ತಮವಾಯಿತು. ಎರಡು ಮೂರು ಸಾರಿ ನನಗೆ ಜ್ಞಾಪಕವಿರುವ ಮಟ್ಟಿಗೆ ವಿದ್ಯಾ ಮಂತ್ರಿಗಳು ಈ ಸಭೆಗೆ ಒಂದು ಆಶ್ವಾಸನೆಯನ್ನೂ ಬಹಳ ಗಂಭೀರವಾಗಿ ಕೊಟ್ಟರು. ಪ್ರಾಮಾಣಿಕ ವಾಗಿ ಕೊಟ್ಟರು ಎಂದು ಭಾವನೆ ಮಾಡುತ್ತೇನೆ. ಟೆಂಪರರಿ ಲೆಕ್ಚರರುಗಳ ಸಮಸ್ಯೆಯನ್ನು ಪರಿ ಶೀಲನೆ ಮಾಡಿ ನಾವು ಪ್ರಮೋಷನ್ನು ಮಾಡುತ್ತೇವೆ, ಹಾಗೆ ಪ್ರಮೋಷನ್ನು ಮಾಡುವಾಗ ಅವರನ್ನು ಟ್ಯೂಟರುಗಳಾಗಿ ಡೆಮಾನ್‌ಸ್ಟ್ರೇಟರಾಗಿ ಮಾಡುತ್ತೇವೆ ಎಂದು ಹಿಂದೆ ಹೇಳಿದಂತೆ ಇವೊತ್ತು ಡೆಮಾನ್ ಸ್ಟ್ರೇಟರಾಗಿ ಮಾಡಿದಿರಾ ? ತಾವು ಮಾಡಿದಂತಹ ಕೆಲಸದಿಂದಾಗಿ ಅವರೆಲ್ಲ ಇವೊತ್ತು ಹೈಕೋರ್ಟಿಗೆ ಹೋಗಿ ಹಿಂದೆ ಮಾಡಿದ ಸರಕಾರದ ಆಜ್ಞೆ ಕ್ರಮ ಬದ್ಧವಾಗಿದೆಯೇ ಎನ್ನುವ ಪ್ರಶ್ನೆ ಮಾಡಿ ಹೈ ಕೋರ್ಟಿನಲ್ಲಿ ಜಡ್ಜ್‌ಮೆಂಟು ಕೂಡ ಬಂತು. ಆ ಜಡ್ಜ್‌ಮೆಂಟಿನಲ್ಲಿರುವ ಒಂದೇ ಒಂದು ವಾಕ್ಯವನ್ನು ಇಲ್ಲಿ ಉಲ್ಲೇಖಿಸುವುದಕ್ಕೆ ತಮ್ಮ ಅನುಮತಿಯನ್ನು ಬೇಡುತ್ತೇನೆ :

> "These cases have given us more than usual amount of worry. They have distressed us. Undoubtedly we were worried about the injustice meted out to these young men. But What worried us more is the trend noticed in a Department and that in a Department of Education."

ಸ್ವಾಮಿ ಆಂಧ್ರ ಪ್ರದೇಶದಲ್ಲಿ ಯಾವುದೋ ಒಂದು ಬಸ್ ರೂಟನ್ನು ನ್ಯಾಷನಲೈಜ್ ಮಾಡಿದ್ದ ಕೇಸಿನಲ್ಲಿ ಸುಪ್ರೀಂ ಕೋರ್ಟಿನವರು ಮಾಡಿದ ಒಂದು ಕಾಮೆಂಟಿಗಾಗಿ ಒಬ್ಬ ಮುಖ್ಯ ಮಂತ್ರಿ ರಾಜಿ ನಾಮೆ ಕೊಟ್ಟ ನಿದರ್ಶನ ಇದು. ಇತ್ತೀಚೆಗೆ ನಡೆದಿದ್ದಾಗಿದೆ. ನಾವೀಗ ಪ್ರಜಾಪ್ರಭುತ್ವದ ಚೌಕಟ್ಟಿ ನಲ್ಲಿ ಆಡಳಿತವನ್ನು ನಡೆಸುತ್ತಿದ್ದೇವೆ. ಯಾವುದೇ ಒಂದು ವಿಚಾರದಲ್ಲಾಗಲೀ ಒಂದು ಶ್ರೇಷ್ಠ ನ್ಯಾಯಾಲಯ ಒಂದು ತೀರ್ಪನ್ನು ಕೊಟ್ಟಿದ್ದರಲ್ಲಿ ರಾಜ್ಯದ ವಿದ್ಯಾ ಮಂತ್ರಿಗಳು ಈ ವಿಚಾರದಲ್ಲಿ ಸರಿಯಾಗಿ ನಡೆದುಕೊಂಡಿಲ್ಲ ಎಂಬುದಾಗಿ ತಿಳಿಸಿರುವಾಗ ಯಾರೊಬ್ಬರ ಒತ್ತಾಯವೂ ಇಲ್ಲದೆ ಮಂತ್ರಿ ಗಳಾಗಿರತಕ್ಕವರ ಹೊಣೆಗಾರಿಕೆ, ಆ ಒಂದು ಜವಾಬ್ದಾರಿ ಇದರಲ್ಲೇನಿದೆ ಎಂಬುದು ಅವರಿಗೆ ಗೊತ್ತಾಗಬಾರದೇನು ? ಈ ವಿಚಾರದಲ್ಲಿ ವಿದ್ಯಾ ಮಂತ್ರಿಗಳು ಏನು ಸಮಾಧಾನ ಕೊಡಬಲ್ಲರು ? ಆ ನ್ಯಾಯಸ್ಥಾನದವರು ಮಾಡಿರತಕ್ಕ ಟೀಕೆಯನ್ನು ನೋಡಿದರೆ ಅದರಲ್ಲಿ ಮಂತ್ರಿಗಳ ಸಂಬಂಧ ಪೂರ್ಣವಾಗಿದೆ. ಅದುದರಿಂದ ಈ ಪ್ರಜಾಪ್ರಭುತ್ವದಲ್ಲಿ ಒಂದು ಒಳ್ಳೆಯ ಕನ್‌ವೆನ್‌ಷನ್‌ನ್ನು, ಒಂದು ಸತ್ಸಂಪ್ರದಾಯವನ್ನು ಬೆಳೆಸತಕ್ಕ ಮತ್ತು ಅದನ್ನು ರೂಢಿಸತಕ್ಕ ದೃಷ್ಟಿಯಿಂದ ಅಧಿಕಾರದಲ್ಲಿರ ತಕ್ಕವರು ಯಾರೇ ಆಗಿರಲಿ ಅವರು ಗೌರವದಿಂದ ವಿರಮಿಸಲೇಬೇಕೆಂದು ಕೇಳಿಕೊಳ್ಳುತ್ತೇನೆ. ನಮ್ಮ ನಿಮ್ಮ ವೈಯಕ್ತಿಕ ಪ್ರಶ್ನೆಗಳೇನೇ ಇರಲಿ, ಒಂದು ಸಂಪ್ರದಾಯ ಅಥವಾ ಘನತೆಯ ಪ್ರಶ್ನೆಯಿದ್ದಾಗ ಅದರಲ್ಲಿ ಯಾರೂ ಏನೂ ಮಾಡುವುದಕ್ಕಾಗಿಲ್ಲ. ಇನ್ನೂ ಒಂದು ವಿಚಾರ: ಹಾಗೆ ಮಂತ್ರಿಗಳೊಂದು ಸವಾಲನ್ನು ಈ ಹೈಕೋರ್ಟಿನ ತೀರ್ಪಿನ ಬಗ್ಗೆ ಹಾಕುವುದಾದರೆ, ನಾಳೆ ಒಂದು ವೇಳೆ ಈ

ಹೈಕೋರ್ಟಿನ ತೀರ್ಪನ್ನೇ ಆ ಸುಪ್ರೀಂ ಕೋರ್ಟೂ ಕೂಡ ಎತ್ತಿ ಹಿಡಿದಾಗಲಾದರೂ, ಮಂತ್ರಿಗಳು ಸತ್ಯ ನ್ಯಾಯಕ್ಕಾದರೂ ಕಟ್ಟು ಬಿದ್ದು ಆಗಲಾದರೂ ಸ್ಥಾನವನ್ನು ಬಿಡುವರೇನು ?

ಶ್ರೀ ಎಸ್. ಆರ್. ಕಂಠಿ.—ಸುಪ್ರೀಂ ಕೋರ್ಟಿಗೆ ಹೋಗಲು ಸರ್ಕಾರ ಪರ್ಮಿಷನ್ ಕೇಳಿದೆ. ಎಂಥೆಂಥ ಕೆಲಸಗಳೋ ಹೇಗೇಗೋ ನಡೆಯುತ್ತಿವೆ. ಇಲ್ಲಿರತಕ್ಕದ್ದೆಲ್ಲಾ ಬರಿ ಒಂದು ಕೊಶ್ಚನ್ ಆಫ್ ಇಂಟರೆಪ್ರಿಟೇಷನ್. ಆದರೆ ಸುಪ್ರೀಂ ಕೋರ್ಟಿನ ಇಂಟರೆಪ್ರಿಟೇಷನ್ ಹೇಗೆ ಬರುತ್ತದೋ ಹೇಳುವುದಕ್ಕೆ ಬರುವುದಿಲ್ಲ.

ಶ್ರೀ ಎಸ್. ಎಂ. ಕೃಷ್ಣ.—ಮಂತ್ರಿಗಳು ಸುಪ್ರೀಂ ಕೋರ್ಟಿಗೆ ಹೋಗುವುದು ಅದೇನೂ ಅಷ್ಟು ದೊಡ್ಡ ಕೆಲಸವಲ್ಲ. ಇಲ್ಲಿ ನೂರಾರು ಜನ ಯುವಕ ಯುವತಿಯರು ಆಶ್ರಯಕ್ಕಾಗಿ ಒದ್ದಾಡುತ್ತಿರುವಾಗ ಅವರಿಗೊಂದು ಆಶ್ರಯವನ್ನು ಮಾನವೀಯತೆಯ ದೃಷ್ಟಿಯಿಂದ ಕಲ್ಪಿಸಿಕೊಡಬೇಕಾದಂಥ ಪ್ರಸಂಗ ಇಲ್ಲಿದೆ. ಇನ್ನಾದರೂ ಸರ್ಕಾರದವರು ಇವರ ವಿಚಾರದಲ್ಲಿ ಒಂದು ನ್ಯಾಯವಾದ ಮಾರ್ಗದಲ್ಲಿ ಔದಾರ್ಯದಿಂದ ವರ್ತಿಸಿ ಎಂದು ನಾನು ತಮ್ಮಲ್ಲಿ ಕೇಳಿಕೊಳ್ಳುತ್ತಿದ್ದೇನೆ. ಹೀಗೆ ಮಾಡಿದರೆ ಮಂತ್ರಿಗಳ ಘನತೆಗೇನೂ ಕುಂದುಕ ಬರುವುದಿಲ್ಲ.

ಶ್ರೀ ಎಸ್. ಆರ್. ಕಂಠಿ.—ಈಗ ತಾವು ಹೇಳುತ್ತಿರುವ ಸುಪ್ರೀಂ ಕೋರ್ಟಿನ ವಿಚಾರಕ್ಕೂ, ಇಲ್ಲಿ ಇವರಿಗೆ ಕೆಲಸಗಳನ್ನು ಕೊಡುವುದಕ್ಕೂ ಯಾವ ಸಂಬಂಧವೂ ಇಲ್ಲ. ನಾವು ಇವರ ಸರ್ವೀಸನ್ನು ರೆಗ್ಯುಲರೈಸ್ ಮಾಡಬೇಕೆಂದಿದ್ದಾಗ ಪಿ.ಎಸ್.ಸಿ. ಅವರು ಕೇಡರ್ ಅಂಡ್ ರೆಕ್ರೂಟ್‌ಮೆಂಟ್ ರೂಲ್ಸನ್ನು ಮಾಡಿ ಎಂದು ಅವರು ತಿಳಿಸಿದರು. ಅದನ್ನು ಮಾಡಿ ಈ ವಿಚಾರದಲ್ಲಿ ಒಂದು ಆಖೈರು ತೀರ್ಮಾನವನ್ನು ತೆಗೆದುಕೊಳ್ಳುತ್ತೇವೆ. ಆದರೆ ಈಗ ತಡವಾಗಿದೆ ಎಂಬ ಪ್ರಶ್ನೆ ಅವರು ಕೋರ್ಟಿಗೆ ಹೋದ್ದರಿಂದ ಹಾಗಾಯಿತು.

Sri G. V. GOWDA.—It is not a regularization question.

Sri S. R. KANTHI.—Hon'ble Member must read the High Court Judgment.

ಶ್ರೀ ಎಸ್. ಎಂ. ಕೃಷ್ಣ.—ಈ ಹಿಂದೆ ತಾವೇ ಮೇಲ್ಮನೆಯಲ್ಲಿ ಈ ವಿಚಾರವನ್ನು ಪ್ರಸ್ತಾಪಮಾಡಿ ಈ ಟೆಂಪರರಿ ಲೆಕ್ಚರರರುಗಳಿಗೆಲ್ಲಾ ಕನಿಷ್ಟ ಪರಿಮಿತಿಯ ಸಂಬಳ, ವೆಕೇಷನ್ ಸಂಬಳ ಕೊಟ್ಟು ಅವರ ಸರ್ವೀಸನ್ನು ರೆಗ್ಯುಲರೈಸ್ ಮಾಡುತ್ತೇವೆಂದು ಹೇಳಿದ್ದಿರಿ. ಆದರೆ ಆ ಸಂಭಂದದಲ್ಲಿ ಒಂದು ಆರ್ಡರನ್ನು ಹೊರಡಿಸುವಾಗ ಅದನ್ನು ಟ್ಯೂಟರಿಗೂ, ಡೆಮಾನ್‌ಷ್ಟ್ರೇಟರಿಗೂ ಹೊರಡಿಸತಕ್ಕ ಆಜ್ಞೆಯೋಪಾದಿಯಲ್ಲಿ ಹೊರಡಿಸಿರುತ್ತೀರಿ. ಅದನ್ನು ಲೆಕ್ಚರರುಗಳಿಗೆ ಅನ್ವಯಿಸುವಹಾಗೆ ಮಾಡಲಿಲ್ಲ. ಎಲ್ಲಕ್ಕೂ ಮೇಲಾಗಿ ಮಾನವೀಯತೆಯಿಂದ ನೋಡತಕ್ಕಂಥ ಪ್ರಶ್ನೆ ಇದು. ಈಗ ಇದರ ಬಗ್ಗೆ ಸುಪ್ರೀಂ ಕೋರ್ಟಿಗೆ ಹೊಗಬೇಕೆಂದಿದ್ದೀರಿ ಆದರೆ ನಾನೀಗ ಸರ್ಕಾರದಲ್ಲಿ ಅಂದರೆ ಮಾನ್ಯ ವಿದ್ಯಾಮಂತ್ರಿಗಳಲ್ಲಿ ಬಹಳ ಕಳಕಳಿಯಿಂದ ಕೇಳಿಕೊಳ್ಳುವುದೇನೆಂದರೆ ಈ ಪ್ರಶ್ನೆಯನ್ನು ಸುಪ್ರೀಂ ಕೋರ್ಟಿನ ತೀರ್ಪಿಗೆ ಗಂಟು ಹಾಕದೆ ಇದನ್ನು ಒಂದು ಮಾನವೀಯತೆಯ ದೃಷ್ಟಿಯಿಂದ ನೋಡಬೇಕೆಂದು ನಾನು ಮನವಿ ಮಾಡಿಕೊಳ್ಳುತ್ತೇನೆ. ಆದರೆ ಇದನ್ನು ಇಷ್ಟು ಎಳೆದಾಡುವುದಕ್ಕೆ ಅವರೇ ದಾರಿ ಮಾಡಿದರೋ ಅಥವಾ ತಾವೇ ದಾರಿ ಮಾಡಿದಿರೋ ಅದು ಭಗವಂತನಿಗೇ ಗೊತ್ತಾಗ ಬೇಕು. ಆದರೆ ಈಗ ಈ ವಿದ್ಯಾಬೇಡಿಕೆಗಳ ಬಗ್ಗೆ ನಾವು ನಮ್ಮ ಅನುಮೋದನೆಯನ್ನು ಕೊಡುವುದಕ್ಕೆ ಮುನ್ನ ನಾವು ಮಾಡಿರತಕ್ಕ ಟೀಕೆ ಟಿಪ್ಪಣಿಗಳಿಗೆ ಸಮಂಜಸವಾದ ಸಮಾಧಾನಕರವಾದ ಉತ್ತರವನ್ನು ಕೊಡದವಿನಾ ನಾವು ಈ ಬೇಡಿಕೆಗಳಿಗೆ ನಮ್ಮ ಒಪ್ಪಿಗೆಯನ್ನು ಕೊಡುವುದಕ್ಕೆ ಸಾಧ್ಯವಿಲ್ಲವೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀಮತಿ ರತ್ನಮ್ಮ ಮಾಧವರಾವ್ (ಶಿವಮೊಗ್ಗ).—ಮಾನ್ಯ ಅಧ್ಯಕ್ಷರೇ, ನಾನು ಈಗ ನಮ್ಮ ಮುಂದಿಟ್ಟಿರತಕ್ಕ ವಿದ್ಯಾಬೇಡಿಕೆಗಳನ್ನು ಅನುಮೋದಿಸುತ್ತಾ ಕೆಲವು ಮಾತುಗಳು ನಮ್ಮ ವಿದ್ಯಾಭಾಸದ ಮಟ್ಟವನ್ನು ಹೆಚ್ಚಿಸಲು ಸರ್ಕಾರದವರು ಅನೇಕ ಸುಧಾರಣೆಗಳನ್ನು ಮಾಡಿದ್ದಾರೆ, ಆದರೆ ಅದಗಲ್ಲಿ ಕೆಲವು ನ್ಯೂನತೆಗಳಿವೆ, ಅವುಗಳನ್ನು ಸರಿಪಡಿಸಲು ನಾನು ಕೆಲವು ಮಾತುಗಳನ್ನಾಡ ಬಯಸುತ್ತೇನೆ.

ಪ್ರಾಥಮಿಕ ವಿದ್ಯಾಭ್ಯಾಸದಲ್ಲಿ ಏಕರೂಪತೆಯನ್ನು ಇಡೀ ಸಂಸ್ಥಾನದಲ್ಲ ಜಾರಿಗೆ ತರಲು ಕೈಗೊಂಡಿರತಕ್ಕ ಸುಧಾರಣೆಗಳು ಎಷ್ಟರಮಟ್ಟಿಗೆ ಸಫಲವಾಗಿವೆಯೆಂಬುದನ್ನು ನೋಡಬೇಕಾಗಿದೆ

[MR. DEPUTY SPEAKER in the Chair.]

ಇಂದು ಕರ್ಣಾಟಕ ರಾಜ್ಯವಾಗಿದ್ದರೂ ಭಾಷಾ ಪ್ರಯೋಗದಲ್ಲಿ ಸ್ವಲ್ಪ ಬದಲಾವಣೆಯಿದ್ದು ಆಯಾಯ ಭಾಗಗಳಲ್ಲಿ ಬೇರೆ ಬೇರೆ ವೈಶಿಷ್ಟ್ಯವನ್ನು ಒಳಗೊಂಡಿದೆ. ಅವುಗಳನ್ನು ಒಂದುಗೂಡಿಸುವುದಕೆ ಇನ್ನೂ ಸಕಾಲಬಂದಿಲ್ಲವೇನೋ ಎಂದು ನನಗೆ ಅನಿಸುತ್ತದೆ. ಒಂದೇ ಪಠ್ಯ ಪುಸ್ತಕವನ್ನು

(ಶ್ರೀಮತಿ ರತ್ನಮ್ಮ ಮಾಧವರಾವ್)

ಇಡೀ ಸಂಸ್ಥಾನಕ್ಕೆಲ್ಲಾ ಒದಗಿಸುವುದರಿಂದ ಈ ಕೆಲಸ ಈಡೇರುತ್ತೆಂದು ಭಾವಿಸಿರುವುದು ಸರಿಯಲ್ಲ. ಅಷ್ಟೇ ಅಲ್ಲದೆ ಇಡೀ ಸಂಸ್ಥಾನಕ್ಕೆ ಒಂದೇ ವಿಧವಾದ ಪಠ್ಯ ಪುಸ್ತಕಗಳನ್ನೊದಗಿಸಲು ತುಂಬ ಅವ್ಯವಸ್ಥೆಯಾಗಿ ಪುಸ್ತಕದ ಮಾರಾಟದಲ್ಲಿ ಸಹಾ ಅಕ್ರಮ ನಡವಳಿಕೆ ನಡೆಯುತ್ತಿದೆ. ಪುಸ್ತಕಗಳ ಮೇಲೆ ಅದರ ಬೆಲೆಯನ್ನು 30 ನಯಾ ಪೈಸೆಗಳೆಂದು ಹಾಕಿದ್ದರೂ ಅವು ಬಹಿರಂಗವಾಗಿ 60 ನಯಾ ಪೈಸೆಗಳಿಗೆ ಮಾರಾಟವಾಗುತ್ತಿವೆ. ಹೀಗೆ ಹಂತ ಹಂತದಲ್ಲಿಯೂ ಪಠ್ಯ ಪುಸ್ತಕದ ವಿತರಣೆ ಸರಿಯಾಗಿಲ್ಲದೆ ಬಡಜನರಿಗೆ ಬಹಳ ಕಷ್ಟವಾಗಿದೆ. ಅದಕ್ಕಾಗಿ ನಾನು ಸಲಹಮಾಡುವುದೇನೆಂದರೆ—ಸರ್ಕಾರದ ಮುದ್ರಣಾಲಯದಲ್ಲಿಯೇ ಈ ಪಠ್ಯ ಪುಸ್ತಕಗಳನ್ನು ಅಚ್ಚುಹಾಕಿಸಿ ಪ್ರತಿತಾಲ್ಲೂಕಿಗೂ ಒದಗಿಸಬೇಕೆಂದು ಹೇಳುತ್ತೇನೆ.

ಇನ್ನು ಕಡ್ಡಾಯ ಶಿಕ್ಷಣದ ವಿಚಾರಕ್ಕೆ ಬಂದರೆ—ಈಗ ವಿದ್ಯಾರ್ಥಿಗಳ ಸಂಖ್ಯೆಯೇನೋ ಏರಿದೆ. ಆದರೆ ಅವರಿಗೆಲ್ಲಾ ಸಾಕಷ್ಟು ಶಾಲಾವ್ಯವಸ್ಥೆಯಿಲ್ಲದೆ ಈ ಕಡ್ಡಾಯ ಶಿಕ್ಷಣವು ಒಂದು ಅಪಹಾಸ್ಯಕ್ರೀಡಾಗಿದೆ. ವ್ಯವಸ್ಥೆಗಳನ್ನೆಲ್ಲಾ ಬೆಟರ್‌ಮೆಂಟ್ ಕಮಿಟಿಯವರೇ ಮಾಡಬೇಕೆಂದು ಸರ್ಕಾರದವರು ತಮ್ಮ ಜವಾಬ್ದಾರಿಯನ್ನು ಕೈಬಿಡುವಹಾಗಿಲ್ಲ. ಈ ದಿವಸ ಈ ಶಾಲಾ ಕಟ್ಟಡಗಳು ಎಷ್ಟರಮಟ್ಟಿಗೆ ಒದಗಿಸಲ್ಪಟ್ಟಿವೆ, ಎಲ್ಲಿ ಮಾಡಿಲ್ಲ, ಎಂಬುದನ್ನೆಲ್ಲಾ ಕೂಲಂಕಷವಾಗಿ ವಿಮರ್ಶೆಮಾಡಿ ತಕ್ಕ ಕಾರ್ಯಕ್ರಮಗಳನ್ನು ಕೈಗೊಳ್ಳಲು ಒಂದು ಸಮಿತಿಯನ್ನು ನೇಮಕಮಾಡಿ ಇದನ್ನೆಲ್ಲಾ ವಿಚಾರಣೆ ಮಾಡಬೇಕೆಂದು ನನ್ನ ಸಲಹೆ.

ಇನ್ನು ನಮ್ಮಲ್ಲಿ ವಿದ್ಯಾಭ್ಯಾಸವನ್ನು ಪ್ರಾಥಮಿಕ ಹಂತದವರೆಗೂ ಉಚಿತವೆಂದು ಸಾರಲಾಗಿದೆ. ಖಾಸಗೀ ಶಾಲೆಗಳು ಆದರೆ ಬೇರೆ ಬೇರೆ ಹೆಸರಿನಲ್ಲಿ ಹೆಚ್ಚು ಹೆಚ್ಚಾಗಿ ಶುಲ್ಕವನ್ನು ಪಡೆಯುತ್ತಿರುವುದು ಕಂಡುಬರುತ್ತಿದೆ, ಆದರೆ ಇದಕ್ಕೂ ಒಂದು ಮಿತಿಯಿರಬೇಕು. ಎಲ್ಲಾ ಸರ್ಕಾರಿ ಶಾಲೆಗಳೂ 9 ತಿಂಗಳು ಕೆಲಸಮಾಡಿದರೆ ಈ ಖಾಸಗೀ ಶಾಲೆಗಳು 11 ತಿಂಗಳೂ ಇರುತ್ತವೆ. ಬಾಲಕರು 11 ತಿಂಗಳೂ ಶುಲ್ಕವನ್ನು ತೆರಬೇಕಾಗಿದೆ. ಇನ್ನು ಇದೇ ರೀತಿ ಹೈಸ್ಕೂಲುಗಳಲ್ಲಿ ಶಿಕ್ಷಣ ಶುಲ್ಕದ ಜೊತೆಗೆ ಇನ್ನೂ ಬೇರೆ ಬೇರೆ ಹೆಸರಿನಲ್ಲಿ ವಸೂಲುಮಾಡುತ್ತಿರುವ ಮೊಬಲಗನ್ನು ನೋಡಿದರೆ ಅದು ಸುಲಿಗೆಯೋಪಾದಿಯಲ್ಲಿರುವುದಾಗಿ ಕಂಡುಬರುತ್ತಿದೆ. ಹೀಗೆ ಯಾವುದಾದರೊಂದು ಕಾನೂನಿನ ಚೌಕಟ್ಟಿನೊಳಗೆ ಸೇರಿದಂಥ ಶುಲ್ಕವನ್ನು ವಸೂಲು ಮಾಡುವುದಕ್ಕೂ ಒಂದು ತಡೆಯಿರಬೇಕು.

ಇನ್ನು ಕಾಲೇಜು ಶಿಕ್ಷಣದ ವಿಚಾರಕ್ಕೆ ಬಂದರೆ, ಕಾಲೇಜುಗಳಲ್ಲಿ ಎಲ್ಲಿ ನೋಡಿದರೂ ಅಧ್ಯಾಪಕರ ಅಭಾವ ಹೆಚ್ಚಾಗಿರುತ್ತದೆ. ಕಾಲೇಜುಗಳು ಪ್ರಾರಂಭವಾದ ಮೇಲೆ 2-3 ತಿಂಗಳು ಯಾವ ಪಾಠಪ್ರವಚನಗಳೂ ನಡೆಯುತ್ತಿರುವಂತೆ ಕಂಡುಬರುವುದಿಲ್ಲ. ಒಂದು ಕಾಲೇಜಿನಲ್ಲಿ ಎಷ್ಟು ಜನ ಲೆಕ್ಚರರುಗಳಿರಬೇಕು, ಅಲ್ಲಿ ಎಷ್ಟು ಜನ ಖಾಯಂ ಲೆಕ್ಚರರುಗಳಿದ್ದಾರೆ, ಎಷ್ಟು ಸ್ಥಾನಗಳು ಖಾಲಿ ಇರುತ್ತವೆ ಎನ್ನುವುದರ ಬಗ್ಗೆ ಒಂದು ಮುಂದಾಲೋಚನೆ ಇದ್ದಾಗ್ಯೂ ಈ ಶಿಬ್ಬಂದಿ ವರ್ಗವನ್ನು ಕಾಲೇಜು ಪ್ರಾರಂಭವಾದ 2-3 ತಿಂಗಳ ನಂತರವೇ ಅವರನ್ನು ನೇಮಿಸುತ್ತಾರೆಂದು ಕಂಡುಬರುತ್ತಿದೆ, ಅದೂ ಕೂಡ ತಾತ್ಕಾಲಿಕವಾಗಿ. ಇದರಿಂದ ನಮ್ಮಲ್ಲಿ ಶಿಕ್ಷಣವ್ಯವಸ್ಥೆಗೊಂದು ಕೆಟ್ಟ ಹೆಸರು ಬಂದಿದೆ. ಇದರಿಂದ ಶಿಕ್ಷಣವ್ಯವಸ್ಥೆಯಲ್ಲಿ ವಿದ್ಯಾರ್ಥಿಗಳಲ್ಲಿ ಶಿಸ್ತನ್ನು ತುಂಬಲು ವ್ಯವಸ್ಥಾಪಕರೇ ಮುಂದೆಬಾರದಂತಾಗಿದೆ. ಈ ವಿಧವಾದ ನಾನಾ ತೊಂದರೆಗಳಿಂದ ಕಾಲೇಜುಗಳಿಗೆ ಅರ್ಜಿಹಾಕಿಕೊಳ್ಳುವುದಕ್ಕೂ ಕೂಡ ಪರೀಕ್ಷೆಯ ಫಲಿತಾಂಶಗಳು ಸಕಾಲದಲ್ಲಿ ಹೊರಬೀಳದಿರುವುದರಿಂದ ಬಹಳ ತೊಂದರೆಯಾಗಿದೆ. ಇದರಿಂದ ಅರ್ಜಿಗಳ ಪರಿಶೀಲನೆಯಲ್ಲಿ ತಡವಾಗಿ ಅಡ್ಮಿಷನ್ ಪಡೆದವರ ಪಟ್ಟಿಯನ್ನು ತಯಾರುಮಾಡುವ ಹೊತ್ತಿಗೆ ಈ ಶಿಸ್ತು ವಿದ್ಯಾರ್ಥಿಗಳಲ್ಲಿ ಹೇಗೆ ಬರುತ್ತೆ? ಈ ಏರ್ಪಾಡುಗಳು ಪ್ರತಿ ವರ್ಷವೂ ಆಗಬೇಕಾಗಿರತಕ್ಕವುಗಳಾಗಿವೆ. ಆದ್ದರಿಂದ ಈಗ ನಡೆಯುತ್ತಿರುವ ಒಂದು ಅವ್ಯವಸ್ಥೆ ತಪ್ಪಿ ಅದರಕಾರ್ಯಕ್ರಮ ಗಡಿಯಾರ ನಡೆದ ಹಾಗೆ ನಡೆಯುವ ವ್ಯವಸ್ಥೆ ಆಗಬೇಕೆಂದು ನಾನು ಆಶಿಸುತ್ತೇನೆ. ತಾಂತ್ರಿಕ ಕಾಲೇಜುಗಳಲ್ಲಿ ಸಲಕರಣೆಗಳ ಅಭಾವ ತುಂಬಾ ಇದೆ. ಇದು ಇನ್ನೊಂದು ದೊಡ್ಡ ಸಮಸ್ಯೆ. ಈ ಶಾಲೆಗಳಲ್ಲಿ ಕಲಿಸುವ ಮುಖ್ಯ ವಿಭಾಗ ಅಂದರೆ ಪ್ರಯೋಗ ಶಾಲೆಗಳು. ಇದರಲ್ಲಿ ಕೊರತೆ ಕಂಡು ಬಂದರೆ ಕಾಲೇಜುಗಳಲ್ಲಿ ಓದತಕ್ಕ ವಿದ್ಯಾರ್ಥಿಗಳು ಎಷ್ಟರಮಟ್ಟಿಗೆ ಬುದ್ಧಿವಂತರಾಗುತ್ತಾರೆ? ಹೀಗಾದರೆ ಆ ಕಾಲೇಜಿನಲ್ಲಿ ಕೊಟ್ಟ ಶಿಕ್ಷಣ ಖಂಡಿತವಾಗಿ ಕೆಳಮಟ್ಟಕ್ಕೆ ಹೋಗುತ್ತದೆ. ನಮ್ಮ ಮೈಸೂರು ರಾಜ್ಯದಲ್ಲಿ ಶಿಕ್ಷಣ ಪಡೆದ ವಿದ್ಯಾರ್ಥಿಗಳು ಎಲ್ಲಿ ಹೋದರೂ ಉತ್ತಮರೆಂದು ಪರಿಗಣಿಸುವಂತಾಗಬೇಕು. ಈ ವಿಚಾರದಲ್ಲಿ ಸರ್ಕಾರದವರು ಹೆಚ್ಚಿಗೆ ಗಮನ ಕೊಡಬೇಕು.

ಮೈಸೂರು ಘನ ಸರ್ಕಾರ ವಿದ್ಯಾಭಿವೃದ್ಧಿ ಬಗ್ಗೆ ತುಂಬಾ ಆಸಕ್ತಿಯನ್ನೇನೋ ಹೊಂದಿದೆ ಆದರಲ್ಲಿ ನನಗೇನೂ ಸಂಶಯವಿಲ್ಲ ಮತ್ತು ಅನುಮಾನವಿಲ್ಲ. ಆದರೆ ಒಂದು ವಿಚಾರ. ಒಂದೊಂದು ವರ್ಷ ಒಬ್ಬೊಬ್ಬರು ಕುಲಪತಿಗಳು ಬಂದಾಗ ವಿದ್ಯಾಭ್ಯಾಸ ಕ್ರಮದಲ್ಲಿ ಒಂದೊಂದು ರೀತಿಯ ವ್ಯವಸ್ಥೆಯಾಗುತ್ತಿದೆ. ಈಗಂತೂ ಕುಲಪತಿಗಳೂ ಮತ್ತು ಉಪಕುಲಪತಿಗಳೂ ಇಬ್ಬರೂ ಬೇರೆ ಬರುವವರಿದ್ದಾರೆ. ಇದರಿಂದ ಇನ್ನು ಯಾವ ತರಹವಾಗುತ್ತದೋ ಎಂದು ಗಾಬರಿಯಾಗಿದೆ. ಮುಖ್ಯವಾಗಿ ಈ ವಿದ್ಯಾ ಇಲಾಖೆ ವಿನೋದದ ಇಲಾಖೆಯಾಗಿದೆನ್ನುವಂತಾಗಬಾರದು. ನಾನು ಇದನ್ನು ಬಹಳ ಅತ್ಯಂತ ವಿಷಾದದಿಂದ ಹೇಳಬೇಕಾಗಿದೆ. ಹೀಗಾದರೆ ನಮ್ಮ ರಾಜ್ಯದ ಅಭಿವೃದ್ಧಿಗೆ ಮತ್ತು ಏಳಿಗೆಗೆ ಕಾರಣರಾದ ನಮ್ಮ ಮಕ್ಕಳ ವಿದ್ಯಾಭ್ಯಾಸದ ಗತಿಯೇನು? ಎರಡು ವರ್ಷಗಳ ಇಂಟರ್‌ಮೀಡಿಯಟ್ ಕೋರ್ಸನ್ನು ತೆಗೆದು ಈಗ ಒಂದು ವರ್ಷ ಪಿ.ಯು.ಸಿ. ಕೋರ್ಸ್ ಆಯಿತು. ಎರಡು ವರ್ಷಗಳ ಪದವಿ ಶಿಕ್ಷಣ ತೆಗೆದು 3 ವರ್ಷಗಳ ಪದವಿ ಶಿಕ್ಷಣವಾಯಿತು. ಇದರ ಪ್ರತಿಫಲವೇನಾಯಿತೆಂದರೆ ಹಳೆಯ ಸ್ಕೀಮ್ ಪ್ರಕಾರ ಓದಿದವರ ಜ್ಞಾನ ಹೆಚ್ಚಾಯಿತು ಹೊಸ ಸ್ಕೀಮ್ ಪ್ರಕಾರ ಓದಿದವರ ಜ್ಞಾನ ಕಡಿಮೆಯಾಯಿತು. ಇದಕ್ಕೆ ನಿದರ್ಶನ ಈಗಿನ ಪರೀಕ್ಷೆಯ ಫಲಿತಾಂಶಗಳೇ ಹೇಳುತ್ತೆ. ಕೆಲವು ನೌಕರಿಗಾಗಿ ಇಂಟರವ್ಯೂಗೆ ಹೋಗಿ ಕೊಡುವ ಉತ್ತರಗಳನ್ನು ವರ್ತಮಾನಪತ್ರಿಕೆಗಳ ಮೂಲಕ ಅನೇಕರು ಓದಿರಬಹುದು. ಇಂದಿರಾಗಾಂಧಿ ಯಾರ ಮಗಳು ಅಂದರೆ ಅವರ ಅಪ್ಪ ಮಹಾತ್ಮ ಗಾಂಧಿ ಎಂಬುದಾಗಿ ಹೇಳಿದ್ದಾರೆ. ಹಿಂದೆ ಇಂಟರ್ ಮೀಡಿಯಟ್ ಪರೀಕ್ಷೆ ಇದ್ದಾಗ ಜನರಲ್ ಇಂಗ್ಲಿಷ್ ಪೇಪರ್ ಇತ್ತು. ಅದರಲ್ಲಿ ಜನರಲ್ ನಾಲೆಡ್ಜ್ (ಸಾಮಾನ್ಯ ಜ್ಞಾನ) ಮೇಲೆ ಕೆಲವು ಪ್ರಶ್ನೆಗಳನ್ನು ಕೇಳುತ್ತಿದ್ದರು. ಸಾಮಾನ್ಯ ಜ್ಞಾನ ಪಡೆಯಬಹುದಾಗಿತ್ತು. ಇಂಗ್ಲೀಷಿನಲ್ಲಿ ಎರಡು ಪೇಪರ್‌ಗಳಿದ್ದವು. ಈಗ ಒಂದೇ ಪೇಪರ್ ಆಗಿದೆ. ಇನ್ನು ಪಿ. ಯು. ಸಿ. ಕೋರ್ಸನ್ನು ಹೊಸದಾಗಿ ಆರಂಭ ಮಾಡಿದಾಗ ನಾಲ್ಕು ಪಾರ್ಟ್‌ಗಳನ್ನು ಮಾಡಿದರು. ಪದವಿ ಶಿಕ್ಷಣದಲ್ಲೂ ಕೂಡ ಹಾಗೆಯೇ ಇತ್ತು. ಈಗ ಪಿ. ಯು. ಸಿ. ಯಲ್ಲಿ ಕೊನೆಯಲ್ಲಿ ಒಂದು ಭಾಗವನ್ನು ತೆಗೆದರು. ಪದವಿ ಶಿಕ್ಷಣದಲ್ಲಿ ಮಾತ್ರ ಹಾಗೆಯೇ ಉಳಿಯಿತು. ಇದರಿಂದ ಪಿ. ಯು. ಸಿ. 3 ಭಾಗಗಳನ್ನು ಓದಿದವರು ಪದವಿ ಶಿಕ್ಷಣದಲ್ಲಿ 4 ಭಾಗಗಳನ್ನು ಓದಬೇಕಾಗಿದೆ. ಆದರೆ ಪಿ. ಯು. ಸಿ. ಮುಗಿಸಿ ಇಂಜನಿಯರಿಂಗ್ ಅಥವಾ ಮೆಡಿಕಲ್‌ಗೆ ಹೋಗುವವರಿಗೆ ಈ ನಾಲ್ಕನೆಯ ಭಾಗ ಬೇಕಾಗಿಲ್ಲ. ಆದ್ದರಿಂದ ಪದವಿ ಶಿಕ್ಷಣದಲ್ಲಿ ಈ ನಾಲ್ಕನೆಯ ಭಾಗವನ್ನು ಕೊಡಲೇ ತೆಗೆದು ಬಿಡುವುದು ಬಹಳ ಒಳ್ಳೆಯದು.

ಇತ್ತೀಚೆಗೆ ವರ್ತಮಾನ ಪತ್ರಿಕೆಗಳಲ್ಲಿ ಓದಿದೆ. 1965ನೇ ಸಾಲಿನಲ್ಲಿ ಪಿ. ಯು. ಸಿ. ಕೋರ್ಸ್ 2 ವರ್ಷಗಳು, ಡಿಗ್ರಿ ಶಿಕ್ಷಣ 3 ವರ್ಷಗಳು ಆಗುತ್ತದೆ ಎಂದು. ಅದು ಅಕಾಡಮಿಕ್ ಇಯರ್‌ನಲ್ಲಿ ಜಾರಿಗೆ ಬರುತ್ತದೆಂದು ಹೇಳಿದರು. ಪದೇ ಪದೇ ವರ್ಷೇ ವರ್ಷೇ ಈ ಸ್ಕೀಮನ್ನು ಈ ರೀತಿಯಾಗಿ ಬದಲಾವಣೆ ಮಾಡುತ್ತಾ ಇದ್ದರೆ ವಿದ್ಯಾರ್ಥಿಗಳ ಗತಿಯೇನು? ವಿದ್ಯಾಭಿವೃದ್ಧಿ ಹೇಗಾಗಬೇಕು? ದಯವಿಟ್ಟು ಈ ವಿಚಾರದಲ್ಲಿ ಕೂಡಲೆ ಒಂದು ತೀರ್ಮಾನವನ್ನು ತೆಗೆದು ಕೊಳ್ಳಬೇಕು. ಇದರಿಂದ ಯಾವುದೂ ನಷ್ಟವಾಗುವುದಿಲ್ಲ. ದೇಶವೇನೂ ಮುಳುಗಿ ಹೋಗುವುದಿಲ್ಲ. ಖಚಿತವಾಗಿ ತೀರ್ಮಾನವನ್ನು ತೆಗೆದುಕೊಳ್ಳಬೇಕು. ಆದ್ದರಿಂದ ಈ ಬಗ್ಗೆ ತಜ್ಞರ ಅಭಿಪ್ರಾಯವನ್ನು ತೆಗೆದುಕೊಂಡು ಒಂದೆ ತರಹ ಮಾಡಬೇಕೆಂದು ಹೇಳುವುದಲ್ಲದೆ ಬೆರಕೆ ಜನರೇಷನ್‌ನಂತೆ ಆಗಬಾರದೆಂದು ನನ್ನ ಸಲಹೆ.

ಇನ್ನೊಂದು ವಿಷಯ ಈ ವಿದ್ಯಾಇಲಾಖೆ ಟೀಕೆಗೆ ಗುರಿಯಾಗುವುದು ಬೇಡವೆಂದು ನಾನು ಹೇಳುತ್ತೇನೆ. ಇನ್ನು ಲೆಕ್ಚರರುಗಳನ್ನು ಡೆಮಾನ್‌ಸ್ಟ್ರೇಟರುಗಳಾಗಿ ಮಾಡಿದ ಬಗ್ಗೆ ಹೈಕೋರ್ಟಿನ ತೀರ್ಮಾನದ ಪ್ರಕಾರ ಸರ್ಕಾರ ಏನು ಕ್ರಮವನ್ನು ತೆಗೆದುಕೊಂಡಿದೆ? ಅವರಿಗೆ ಬರಬೇಕಾದ ಬಾಕಿಯನ್ನು ಕೊಟ್ಟಿದ್ದೀರಾ? ಕೊಡಬೇಕಾದ ಬಾಕಿ ಎಷ್ಟು? ಅದನ್ನು ಉತ್ತರ ಕೊಡುವಾಗ ಹೇಳಬೇಕು. ಇನ್ನು ಕೊಲಿಜಿಯೇಟ್ ಶಿಕ್ಷಣದ ಅಧಿಕಾರಿಯ ವ್ಯಾಪ್ತಿಯನ್ನು ಅಂದರೆ ಡೆಮಾನ್‌ಸ್ಟ್ರೇಟರ್ಸ್ ಮತ್ತು ಟ್ಯೂಟರ್ಸ್ ಇವರುಗಳ ನೇಮಕವನ್ನು ಮೈಸೂರು ಪಿ.ಎಸ್.ಸಿ.ಗೆ ವಹಿಸಿ ಅವರೇ ಆಯ್ಕೆ ಮಾಡುವುದಾಗಿ ತಿಳಿದು ಬಂತು. ಹೀಗೆ ಮಾಡುವುದರಿಂದ ನಿಜವಾಗಿ ಬುದ್ಧಿವಂತನ ಜ್ಞಾನದೃಷ್ಟಿಯನ್ನು ಪಿ.ಎಸ್.ಸಿ. ಪರಿಗಣಿಸುವುದೇ? ಇದನ್ನು ದೀರ್ಘ ಪರಿಶೀಲನೆ ಮಾಡುವುದು ಉತ್ತಮ. ಖಂಡಿತವಾಗಿ ಇದನ್ನು ಪಿ. ಎಸ್. ಸಿ. ಗೆ ವಹಿಸುವುದು ಸೂಕ್ತವಲ್ಲ. ಕೊಲಿಜಿಯೇಟ್ ಅಧಿಕಾರಕ್ಕೆ ವಹಿಸುವುದು ಒಳ್ಳೆಯದು. ವರ್ಷೇ ವರ್ಷೇ ಕಾಲೇಜುಗಳಲ್ಲಿ ಹುಡುಗರು ಸೇರುತ್ತಲೇ ಇರುತ್ತಾರೆ. ಅವರ ಸಂಖ್ಯೆಗೆ ಅನುಗುಣವಾಗಿ ಟೀಚರ್ಸ್ ಸಹ ಬೇಕಾಗುತ್ತದೆ. ಅವರನ್ನು ತಾತ್ಕಾಲಿಕವಾಗಿ ನೇಮಿಸಿ ಕೊಂಡಿರುತ್ತಾರೆ. ಆ ಕ್ರಮವನ್ನು ತಪ್ಪಿಸಿ ಅಂತಹವರನ್ನು ಖಾಯಂ ಮಾಡುವುದು ಒಳ್ಳೆಯದು.

ಇನ್ನು ಅನೇಕ ಕಾಲೇಜುಗಳಲ್ಲಿ ಹೆಚ್ಚಿಗೆ ಇನ್‌ಚಾರ್ಜ್ ಪ್ರಿನ್ಸಿಪಾಲರುಗಳು ಎಂಬುದಾಗಿ ಬಹಳ ದಿನಗಳಿಂದ ನಡೆದುಕೊಂಡು ಬಂದಿದೆ. ಇದರಿಂದ ಕೆಲಸಕಾರ್ಯಗಳು ಸುಗಮವಾಗಿ ನಡೆಯಲಿಲ್ಲ. ಇದು ಮೊದಲು ತಪ್ಪಬೇಕು. ಇನ್ನು ಪಿ.ಯು.ಸಿ. ನಲ್ಲಿ ಪಿ.ಸಿ.ಬಿ. ಎಂಬುದಾಗಿ ಒಂದು ಕಾಂಬಿನೇಷನ್ ಇದೆ. ಇದರಲ್ಲಿ ಹೆಚ್ಚಿನ ಅಂಶ ತೆಗೆದುಕೊಂಡವರು ನೇರವಾಗಿ ಎಂ.ಬಿ.ಬಿ.ಎಸ್.ಗೆ ಹೋಗಬಹುದು.

(ಶ್ರೀಮತಿ ರತ್ನಮ್ಮ ಮಾಧವರಾವ್)

ಆದರೆ ಸಾಧಾರಣವಾಗಿ ಪಾಸ್ ಮಾಡಿಕೊಂಡಿರುವವನಿಗೆ ಈತರಹ ಕಾಂಬಿನೇಷನ್ನಿಂದ ಮುಂದೆ ಏನು ಪ್ರಯೋಜನವಿಲ್ಲ. ಇದಕ್ಕೆ ಸರಿಸಮಾನವಾಗಿ ಫಿಜಿಕ್ಸ್ ಕೆಮಿಸ್ಟ್ರಿ ಮೇಜರಾಗಲೀ, ಫಿಜಿಕ್ಸ್ ಬಯಾಲಜಿ ಮೇಜರಾಗಲೀ, ಅಥವಾ ಬಯಾಲಜಿ ಕೆಮಿಸ್ಟ್ರಿ ಮೇಜರಾಗಲೀ ಇಲ್ಲ. ಇದರಿಂದ ಸ್ವಲ್ಪ ತೊಂದರೆ ಉಲ್ಬಣವಾಗುತ್ತದೆಂದು ಕಾಣುತ್ತದೆ. ಪಿ.ಸಿ.ಬಿ. ತೆಗೆದು ಕೊಂಡಿರುವವರಿಗೆ ಪದವಿ ಶಿಕ್ಷಣದಲ್ಲಿಯೂ ಮೇಜರ್ ಭಾಗಗಳನ್ನು ತೆಗೆದುಕೊಳ್ಳುವ ಕ್ರಮವನ್ನು ಸರ್ಕಾರದವರು ಕೈಗೊಳ್ಳಬೇಕು.

ಇನ್ನು ಕಾಲೇಜುಗಳಲ್ಲಿ ಸ್ಥಳಾಭಾವವಂತೂ ಹೇಳಬೇಕಾಗಿಲ್ಲ. ಅದರಲ್ಲೂ ಶಿವಮೊಗ್ಗೆಯ ಸಹ್ಯಾದ್ರಿ ಕಾಲೇಜಿನಲ್ಲಿ ಸುಮಾರು 600 ಜನ ವಿದ್ಯಾರ್ಥಿನಿಯರಿದ್ದು ವರ್ಷೇ ವರ್ಷೇ ಈಗ ಜಾಸ್ತಿ ಯಾಗುತ್ತಿರುವುದರಿಂದ ಸ್ಥಳಾವಕಾಶ ಸಾಲದಾಗಿದೆ, ಆದ್ದರಿಂದ ಹೆಚ್ಚಿಗೆ ಸ್ಥಳಾವಕಾಶವನ್ನು ಕಲ್ಪಿಸಿಕೊಡಿ. ಅದಲ್ಲದೆ ಶಿವಮೊಗ್ಗೆಯಲ್ಲಿ ವಿದ್ಯಾರ್ಥಿನಿಯರಿಗಾಗಿ ಒಂದು ಜನರಲ್ ಹಾಸ್ಟೆಲ್ಲನ್ನು ಸರ್ಕಾರದವರು ಏರ್ಪಡಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಇದಕ್ಕೆ ಸರ್ಕಾರ ಹೆಚ್ಚಿನ ಪ್ರೋತ್ಸಾಹ ಕೊಟ್ಟು ಮುಂದುವರಿಸಬೇಕೆಂದು ಆಶಿಸುತ್ತೇನೆ.

ಇನ್ನು ಕಾಲೇಜು ಊರಿನಿಂದ ದೂರವಿದ್ದು ಬಸ್ಸುಗಳ ಸೌಕರ್ಯವಿಲ್ಲದೆ ಅದರಲ್ಲೂ ವಿದ್ಯಾರ್ಥಿನಿಯರಿಗಾಗುವ ತೊಂದರೆಯಂತೂ ಹೇಳತೀರದು. ವಿದ್ಯಾಮಂತ್ರಿಗಳು ಟ್ರಾನ್ಸ್‌ಪೋರ್ಟ್ ಮಂತ್ರಿಗಳಿಗೆ ವಿನಂತಿಮಾಡಿ ಬಸ್ಸುಗಳ ವ್ಯವಸ್ಥೆ ಮಾಡಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಇನ್ನು ಕಾಲೇಜು ಶುಲ್ಕ ವಿನಾಯಿತಿ ವಿಷಯ. ಫ್ರೀಶಿಪ್ ಮತ್ತು ಸ್ಕಾಲರ್ ಷಿಪ್‌ನಲ್ಲಿ 2,400 ರೂಪಾಯಿಗಳವರೆಗೆ ವಿನಾಯಿತಿ ಎಂಬುದು ಪುನರ್ವಿಮರ್ಶೆಯಾಗಬೇಕು. ಈಗಿನ ದುಬಾರಿ ದರದಲ್ಲಿ 2,400 ರೂಪಾಯಿಗಳು ವರಮಾನ ಇರುವಂತಹರಿಗೆ ಕೇವಲ ಒಂದು ಸಂಸಾರವನ್ನು ನಿರ್ವಹಿಸುವುದೇ ಕಷ್ಟ. ಡಿಸೆಂಬರ್ ವೇಳೆಗೆ ಫ್ರೀ ಕನ್‌ಸೆಷನ್ ಕಮಿಟಿ ಆಗಿಬಿಡಬೇಕು. ಫೆಬ್ರವರಿ 17ನೇ ತಾರೀಖಿನಲ್ಲಿ ಒಂದು ಮಿಟಿಂಗ್ ಆಯಿತು. ಅದರಲ್ಲಿ ನೂರೆಂಟು ಕ್ವೈರಿಗಳು ಬಂದು ಅವೆಲ್ಲಾ ಇತ್ಯರ್ಥವಾಗುವುದಕ್ಕೆ ಬಹಳಕಾಲ ಬೇಕಾಗುತ್ತದೆ. ಈಚೆಗೆತಾನೆ ಫ್ಯಾಮಿಲಿ ಪ್ಲಾನಿಂಗ್ ಬಂದುದು. ಸಾಮಾನ್ಯವಾಗಿ ಅನೇಕರಿಗೆ ಮಕ್ಕಳು ಕೊನೆಯ ಪಕ್ಷ ಐದಾರಾದರೂ ಇರುತ್ತವೆ. ಸರ್ಕಾರಿ ನೌಕರರು ಆದವರು ಸುಳ್ಳು ಲೆಕ್ಕವನ್ನು ಕೊಡುವುದಕ್ಕಾಗುವುದಿಲ್ಲ. ಸರಿಯಾಗಿ ಲೆಕ್ಕ ಕೊಡಬೇಕು. ಆದ್ದರಿಂದ ಸರ್ಕಾರೀ ನೌಕರರಿಗೆ 4800 ರೂಪಾಯಿಗಳವರೆಗೆ ವಿನಾಯಿತಿಮಾಡುವುದು ಒಳ್ಳೆಯದು. ಒಟ್ಟಿನಲ್ಲಿ ಜನವರಿಯೊಳಗಾಗಿ ಈ ಫ್ರೀ ಕನ್‌ಸೆಷನ್ ಕೊಡತಕ್ಕ ಕಾರ್ಯ ಮುಗಿಯಬೇಕು.

ಇನ್ನು ಸಂಸ್ಥಾನ ಸರ್ಕಾರದವರು ಮಾಹೆಯಾನ 29 ರೂಪಾಯಿಗಳಂತೆ ವಿದ್ಯಾರ್ಥಿವೇತನವನ್ನು ಕೊಡುತ್ತಿದ್ದಾರೆ. ಇದರಿಂದ ಬಡ ವಿದ್ಯಾರ್ಥಿಗಳು ಜೀವನ ಮಾಡುವುದಕ್ಕೆ ಸಾಧ್ಯವೆ? ಇದನ್ನು ಸರ್ಕಾರದವರು ಪುನರ್ವಿಮರ್ಶೆ ಮಾಡಬೇಕು.

ಇನ್ನು ಕಾಲೇಜುಗಳಲ್ಲಿ ಸಂಗೀತ ಮೇಜರ್ ಸಬ್ಜೆಕ್ಟ್ ಆಗಿದೆ. ಆ ರೀತಿಯಾಗಿದ್ದರೂ ಕೂಡ ಕಾಲೇಜುಗಳಲ್ಲಿ ಸುಮಾರು 7 ವರ್ಷಗಳಿಂದಲೂ ಒಬ್ಬ ಸಂಗೀತೋಪಾಧ್ಯಾಯರನ್ನು ಪಾರ್ಟ್-ಟೈಂ ಆಗಿ ನೇಮಕಮಾಡಿದ್ದಾರೆ. ಇದು ತುಂಬಾ ಅನ್ಯಾಯ. ಅವರನ್ನು ಫುಲ್-ಟೈಂ ಆಗಿ ನೇಮಕ ಮಾಡಬೇಕು. ಮಹಾರಾಣೀ ಕಾಲೇಜಿನಲ್ಲಿ ಸಂಗೀತ ಪಾಠ ನಡೆಯತಕ್ಕ ಕೊಠಡಿಯ ವಿಚಾರವಾಗಿ ನಾನು ಹೋದಸಲವೇ ತಿಳಿಸಿದ್ದೆ. ಅದು ಬಹಳ ಸಣ್ಣ ಕೊಠಡಿ. ಹುಡಗಿಯರು ಸಂಗೀತದ ಇನ್‌ಸ್ಟ್ರುಮೆಂಟ್ಸನ್ನು ಇಟ್ಟುಕೊಂಡು ನನ್ನ ಹಾಗೆ ಇರತಕ್ಕ ಒಬ್ಬ ಸಂಗೀತೋಪಾಧ್ಯಾಯಿನಿ ಶ್ರೀಮತಿ ಚನ್ನಮ್ಮನವರೂ ಸಹ ಅಲ್ಲಿ ಕುಳಿತುಕೊಂಡರೆ ಆ ಕೊಠಡಿಯಲ್ಲಿರುವವರೆಲ್ಲರೂ ಹೇಗೆ ಉಸಿರಾಡಬೇಕೋ ಮತ್ತು ಹೇಗೆ ಅವರ ಉಸಿರು ಹೊರಡಬೇಕೋ ನನಗೆ ಗೊತ್ತಾಗಲಿಲ್ಲ. ಆದ್ದರಿಂದ ಆ ಸಣ್ಣ ಕೊಠಡಿ ಸಾಕಾಗುವುದಿಲ್ಲ. ಜಾಗವೂ ಸರಿಯಾಗಿಲ್ಲ. ಪಕ್ಕದಲ್ಲಿ ಒಂದು ಸೆಂಟ್ರಲ್ ಜೈಲ್ ಒಂದಿದೆ. ಅದನ್ನು ಬೇರೆಕಡೆ ಎಲ್ಲಾದರೂ ಷಿಫ್ಟ್‌ಮಾಡಿ ಆ ಜಾಗವನ್ನು ಯೂನಿವರ್ಸಿಟಿಗೆ ಬಿಟ್ಟುಬಿಡಿ. ಆ ಜಾಗವನ್ನು ಈ ಕಾಲೇಜಿಗೆ ಒದಗಿಸಿದರೆ ಅದರಿಂದ ಹೆಚ್ಚಿನ ಅನುಕೂಲವಾಗುತ್ತದೆ.

ಇನ್ನು ಎಸ್. ಎಸ್. ಎಲ್. ಸಿ. ಉಪಾಧ್ಯಾಯರಾಗಿರುವರು ಗ್ರಾಜುಯೇಟುಗಳಾಗಿದ್ದರೂ ಅವರಿಗೆ ಯಾವ ಅನುಕೂಲವೂ ದೊರೆಯುತ್ತಿಲ. ಅವರಿಗೆ ಎಷ್ಟು ದಿವಸಗಳಲ್ಲಿ ಯಾವಾಗ ಅನುಕೂಲಗಳು ಸಿಗಬಹುದೆಂದು ನಾನು ಕೇಳುತ್ತೇನೆ.

ಇನ್ನು ಬೆಂಗಳೂರಿನಲ್ಲಿ ಒಂದು ವಿಶ್ವವಿದ್ಯಾನಿಯಲಯವನ್ನು ತೆರೆಯುತ್ತೇವೆಂದು ಹೇಳಿದ್ದಾರೆ. ಆದರೆ ಸಾಕಷ್ಟು ಈ ಬಾಬಿಗೆ ಹಣವನ್ನೊದಗಿಸಲಿಲ್ಲ. ಆದ್ದರಿಂದ ಕೂಡಲೇ ಇದಕ್ಕೆ ಬೇಕಾಗುವಷ್ಟು ಹಣವನ್ನು ಒದಗಿಸಬೇಕೆಂದು ಹೇಳುತ್ತೇನೆ.

ಕೊನೆಯದಾಗಿ ಒಂದು ಮಾತನ್ನು ಹೇಳುತ್ತೇನೆ. ಹೆಣ್ಣುಮಕ್ಕಳ ವಿದ್ಯಾಭ್ಯಾಸಕ್ಕೆ ಸಾಕಷ್ಟು ಪ್ರೋತ್ಸಾಹ ಸೌಲಭ್ಯ ಮತ್ತು ಅನುಕೂಲಗಳಿಲ್ಲ. ಎಲ್ಲಾ ಕಡೆಗಳಲ್ಲಿಯೂ ಹೆಣ್ಣುಮಕ್ಕಳ ಹೈಸ್ಕೂಲು

ಗಳಿರಬೇಕು. ಯಾವಾಗಲೂ ಪಟ್ಟಣಗಳಲ್ಲಿ ಖಾಸಗೀ ಸಂಸ್ಥೆಯವರು ಮುಂದೆ ಬಂದು ಹೈಸ್ಕೂಲು ಗಳನ್ನು ಕಟ್ಟಲಿಕ್ಕೆ ಪ್ರಯತ್ನ ಪಡುತ್ತಿದ್ದರೆ ಹಳ್ಳಿಗಳ ಕಡೆಯಲ್ಲಿ ವಾಸಿಸುತ್ತಿರುವ ಹೆಣ್ಣು ಮಕ್ಕಳ ಗತಿಯೇನು ? ಆ ಕಡೆ ಹೆಚ್ಚು ಗಮನವನ್ನು ಸರ್ಕಾರದವರು ಕೊಡಬೇಕು. ಅದೂ ಅಲ್ಲದೆ ಕಡ್ಡಾಯ ಶಿಕ್ಷಣ ಪಟ್ಟಣಕ್ಕೋ ಅಥವಾ ಹಳ್ಳಿಗೋ ಗೊತ್ತಾಗಿಲ್ಲ. ಇದನ್ನು ಸರ್ಕಾರದವರೇ ವಿಚಾರ ಮಾಡಿ ನೋಡಬೇಕೆಂದು ನಾನು ಹೇಳುತ್ತೇನೆ.

ಇಷ್ಟು ಹೊತ್ತು ಮಾತನಾಡುವುದಕ್ಕೆ ನನಗೆ ಅವಕಾಶವನ್ನು ಕೊಟ್ಟಿದ್ದಕ್ಕಾಗಿ ನಾನು ಅಧ್ಯಕ್ಷ ರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

Sri B. R. SUNTHANKAR (Belgaum city).—Mr. Speaker, Sir, the field of education is very vast. I wish to deal with only two or three aspects of this field of education. The problems of education are many, and in a short period of time it is not possible to cover many points. So, I will restrict my remarks only to a few aspects.

There has been vast expansion in the educational activities of the State and in a way it is bound to be so not only in this State but also in the whole of India ; because education is of vital important to a democracy. If a sound and firm foundation is to be laid for a democracy in a country, the system of education must also be sound. The White Paper containing the proposals for the post-war expansion of the British system of education begins with a very important statement, namely, 'upon the education of the people of this country the fate of this country depends.' These words are more truely applicable to our country also. The future of our country depends upon what sort of education we give to our children. Whenever we examine any system of education or whenever we have to assess the achievements of this Government in the field of education, we have to examine it from this point of view. During the last six or seven years, the activities of the Education Department have increased immensely ; there has been vast expansion. As there have been many deeds on the part of the Government, so also there have been misdeeds.

Again and again on the floor of this House charges have been levelled against the Hon'ble Education Minister. I do not feel that all the charges are fair or justified. I have great sympathy for the Education Minister. I may say I have a soft corner for him. He claims that he has done a lot in the field of education. I do not deny it. He has been doing lot. Rather he has been overstraining himself. He has been rather too ambitious. He wishes to work a miracle in this State, but he forgets that there is no atmosphere in this state to work miracles. If anybody tries to work miracles here, he will certainly fail. Unfortunately, that has been the fate of the Hon'ble Education Minister. While trying to do a lot, he has made confusion worse confounded. He has been trying to construct a vinayaka, but unfortunately a monkey has been created (Maruthi). I know that he is very sincere and earnest, but his sincerity and earnestness are not paying him. He has been trying to bring about uniformity in this State and with that view he increased the fees in the colleges. But what has been the result ? The result has been complete capitulation, complete surrender. He had to yield to the agitation of the students. Similarly, he introduced a cut of 10% in the grants of the aided high schools. On that count also he had to yield and he had

(Sri B. R. Sunthankar)

to restore the cut. Similarly about fee concessions. In the second part of the Speech it is stated that 87% of the boys will be benefited by fee concessions, but actually in practice the Government is giving away by one hand and taking it out by another hand. I will show how. Though fee concessions have been given, a number of fees have been levied on the boys. There is the betterment fee. This Government failed to recover the betterment levey on irrigation though the Act was passed in 1957, but on these poor boys the Government is levying this betterment fee of Rs. 10 per year. Then, every boy has to pay Re. 1 per year to the Teachers Benefit Fund. Then there is the Students Benefit Fund and the contribution to it Re. 1 per boy. Then there is the drawing fee of Rs. 2. Over and above all that, there is the term fee of Rs. 13, *i.e.*, Rs. 26 annually. All these fees together come to Rs. 40 annually.

Sri S. R. KANTHI.—After all, the Government is giving the concessions only to the income group of Rs. 2,400 so far as tuition fees are concerned and so far as other fees are concerned, it is a matter pertaining to the Management. They are charging and Government is not responsible for that.

Sri B. R. SUNTHANKAR.—Anyway, the parents have to pay and they are suffering. That means, about every boy has to pay Rs. 40 per year. That means, Rs. 3½ per month. I had to pay less when I was in the Matriculation class as fees. Then there is the Games Fee collected in connection with sports competition at the State as well as All-India level and 10 naye paise were collected from every primary boy and Re. 1 from every teacher for this purpose and they were compulsorily recovered.

Similarly, in his anxiety to start a Medical College at Belgaum, he mooted a move to close the institution there. There was a move to close the Sardars High School.

Sri S. R. KANTHI.—I refute that charge. This was not my idea; they were put before me. It came from top people there.

Sri B. R. SUNTHANKAR.—But that move was there and I want that move to be done away with. We want that this institution at Belgaum should not be abolished under any circumstance. Similarly, there was another move to shift the Secondary Training College to Jamkhandi or Bijapur.

Sri S. R. KANTHI.—They are the proposals sent by your people.

Sri B. R. SUNTHANKAR.—Government would have accepted it had the people not agitated.

Sri S. R. KANTHI.—I know Government was not in a position to accept it.

Sri B. R. SUNTHANKAR.—Then, thank you. I want a definite assurance from the Hon'ble Education Minister that no institution of Belgaum will be abolished or no institition shifted to another place.

Sri S. R. KANTHI.—Not merely that, we are thinking of giving more institutions to Belgaum.

Sri B. R. SUNTHANKAR.—Thank you Sir. As my time is short, I will first deal with the grievances of the Marathi people We are charged that we are repeating the same thing. On the floor of this House, the Treasury Benches, the Ministers and the Government are giving assurances from time to time ; but our grievance is that those assurances are not kept up and are not implemented. The Hon'ble the Finance Minister said the other day that all the circulars will be sent in Marath . But to this day the circulars to Marathi schools are sent in Kannada both in Belgaum District and North Kanara District. So, we have to raise the same grievances again and again. My Hon'ble Friend, Sri Kadam, has been putting forth the grievances of Karwar and we have been putting forth the grievances of Belgaum. But they are not being removed. I will only point out one or two instances one about the Sardars High School, Belgaum. During the last 3 or 4 years every year I have been raising the issue that there are no adequate teachers for the Marathi Divisions in the Sardars High School. Where according to rules as many as 10 teachers are required, only 3 or 4 teachers are there in this school. Here is a letter from the guardian of a pupil of that High School which I would like to read.

Mr. DEPUTY SPEAKER.—He can't read it. If it is a private letter that cannot be read here.

Sri B. R. SUNTHANKAR.—I will only quote what is said in that letter.

Mr. DEPUTY SPEAKER.—He can only say that there is a complaint.

Sri B. R. SUNTHANKAR.—The Education Minister knows Marathi
and I will say in Marathi what is written in this complaint : (Marathi)

He says that for the 7th standard there has been no Marathi teacher since June 1963 and that is why boys are handicapped.

Sri G. V. GOWDA.—It is not uncommon in other areas also.

Sri B. R. SUNTHANKAR.—Formerly there were 10 teachers in that High School. This is not a new High School, but this is a High Schoo of 114 years standing.

Similarly I have received a complaint from the Sarpanch of Mangsuli. He says ..

Mr. DEPUTY SPEAKER.—He cannot read it.

Sri B. R. SUNTHANKAR.—He says that a disabled Kannada teacher has been sent to the Mangsuli primary school. He says: (Marathi)

Sri S. R. KANTHI —We made a special grant of Rs. 3 ,000 to the Mangsuli Primary School.

Sri B. R. SUNTHANKAR.—But the complaints are there that a disabled Kannada teacher has been sent to that school.

Then at Halyal the books and slates which were sent there for free distribution among the boys were distributed only among the Kannada schools and not a single book or slate was distributed among Marathi schools. Why is this discrimination, I ask. I can point out so many instances like this, but I do not want to deal with them in detail here. I have mentioned only one or two cases here.

(SRI B. R. SUNTHANKAR)

Then I will come to primary education. The Compulsory Primary Education Act has been in force for the last two or three years, but, unfortunately, this Act is not being properly implemented. The Government is not taking all the precautions, all the measures and all the care that it should take to make primary education free and compulsory. We are told that there has been good results in enrolment. Yes, there had been in the beginning, but as the figures show, in the last two or three years the figures are declining and particularly the figures of girls' enrolment are very much declining. Then, what about attendance? We are not given any figures about attendance. Enrolment is there and enrolment can be made at any time, but I want to know from Government whether it has got a regular record of the attendance figures particularly in the rural areas where the attendance is only between 40 and 50 per cent. If this Compulsory Act is to be a success, the Government should make concerted efforts to see that there is regular attendance of a high degree.

As regards school buildings, my Hon'ble friend Sri Krishna has already dealt with this subject. It has been our experience particularly in respect of school buildings that the response from the villagers is very good. The villagers have been collecting contributions and depositing them with Government.

MR. DEPUTY SPEAKER.—His time is up.

SRI B. R. SUNTHANKAR.—I will finish in a couple of minutes. The Government should make more provision for the school buildings.

Then, Sir, my next point is about wastage. There has been a lot of wastage. The wastage is on two counts, wastage on account of desertion and wastage on account of failures in Examinations. Even though a large number of boys are enrolled for the first class, all of them do not reach the 5th class. There are desertions and a number of boys forsake and desert the schools and this wastage is enormous. Unfortunately, there has been no investigation or study in this respect by the State Government. I would request the Hon'ble Minister to make a special study of this aspect of wastage. It has been found in studies that have been made in several States that the wastege at the primary stage is to the extent of 60 per cent. That means 60 per cent of the boys who enter the first class do not reach at all the 5th class. Similarly, there has been wastage due to the failure in examinations. If you take the example of S.S.L.C., more than 50 per cent of the boys fail. That means it is an enormous waste and it is a waste of time, energy and money. This aspect of education has also got to be taken into consideration. We are spending Rs. 21 crores, but actually what are the achievements and what do we get in return? If you take into consideration this wastage due to desertion and also due to failures in examinations, the actual return from the expenditure is very much less. There has been avast wastage of expenditure in the field of education.

There are three reasons for this wastage. The most important cause is poverty. Government should see that poverty is not a bar to any field of education. Next in importance comes the inefficiency of the education system, the retardation or lack of progress in schools, the poor quality of the teachers and the poor quality of teaching, the different systems of examination, lack of enthusiasm on the part of the students and so on and so forth. There are several other reasons also. Government should see that if education is to become a success a firm foundation of democracy, *i.e.*, education has is laid in this country. All these causes of wastage should be removed. Poverty should not be a bar for education in any field. There should be effective teaching and the quality of the teachers and teaching should be improved. Unless all these are done this vast expenditure and this vast expansion of education will be of no use. I request the Education Minister to look at the field of education from this viewpoint and I would also request him to initiate a study in this aspect of wastage in order to stop and check this wastage.

I have done, Sir.

† ಶ್ರೀ ಟಿ. ಮಾದಯ್ಯ ಗೌಡ (ರಾಮನಗರ).—ಸ್ವಾಮಿ, ಮಾನ್ಯ ಅಧ್ಯಕ್ಷರೇ, ವಿದ್ಯಾ ಮಂತ್ರಿಗಳು ಸಭೆಯ ಮುಂದೆ ಮಂಡಿಸಿರತಕ್ಕ ಬೇಡಿಕೆಯ ವಿಚಾರದಲ್ಲಿ ನಾಲ್ಕು ಮಾತುಗಳನ್ನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ನಾನು ತಮ್ಮನ್ನು ವಂದಿಸುತ್ತೇನೆ. ನಮ್ಮ ಮಂತ್ರಿಗಳು ಉತ್ತರ ಕೊಡತಕ್ಕ ಸಂದರ್ಭದಲ್ಲಿ ಏನೇನು ವಿದ್ಯಾ ಖಾತೆಯಲ್ಲಿ ಪ್ರಗತಿಯನ್ನುಂಟುಮಾಡಿದ್ದಾರೆಯೋ ಅದನ್ನೆಲ್ಲ ವಿವರಿಸುತ್ತಾರೆ. ನಾನಾದರೂ ಅವುಗಳ ವಿಚಾರವಾಗಿ ಪ್ರಸ್ತಾಪ ಮಾಡುವುದಕ್ಕೆ ಬದಲಾಗಿ ಕೆಲವು ಸಲಹೆಗಳನ್ನು, ಕೆಲವು ವಿಚಾರಗಳನ್ನು ಮಾನ್ಯ ಸಭೆಗೆ ತಿಳಿಸಿದರೆ ಅದರಿಂದ ಹೆಚ್ಚಾಗಿ ಅನುಕೂಲವಾಗುತ್ತದೆ ಎಂದು ನಾನಾದರೂ ಭಾವಿಸುತ್ತೇನೆ.

ಈ ಪ್ರಾಥಮಿಕ ವಿದ್ಯಾಭ್ಯಾಸದ ವಿಷಯವಾಗಿ ಹಿಂದೆ ಅನೇಕ ಸಾರಿ ನಾನು ಪ್ರಸ್ತಾಪ ಮಾಡಿದ್ದೇನೆ. ಪ್ರಾಥಮಿಕ ವಿದ್ಯಾಭ್ಯಾಸ, ಅದರಲ್ಲಿಯೂ ಕಡ್ಡಾಯ ಪ್ರಾಥಮಿಕ ಶಿಕ್ಷಣ ಎಷ್ಟುಮಟ್ಟಿಗೆ ಪ್ರಗತಿ ಹೊಂದುತ್ತಿದೆ, ಎಷ್ಟುಮಟ್ಟಿಗೆ ಉತ್ತಮವಾಗುತ್ತಿದೆ ಎನ್ನುವುದನ್ನು ಇನ್ನೂ ನಿರೀಕ್ಷಿಸುತ್ತಿದ್ದೇನೆ. ಆದಕಾರಣ ಈ ದಿವಸ ಇದರ ವಿಚಾರವನ್ನು ಹೆಚ್ಚು ಪ್ರಸ್ತಾಪಿಸುವುದಕ್ಕೆ ಹೋಗದೆ ಪ್ರೌಢ ವಿದ್ಯಾಭ್ಯಾಸ, ಪ್ರೌಢಶಾಲೆಗಳ ಸ್ಥಿತಿಗತಿ ಹೇಗಿದೆ ಎನ್ನುವ ಬಗ್ಗೆ ಒಂದೆರಡು ಮಾತು ಹೇಳಬಯಸುತ್ತೇನೆ. ಅಣಬೆಗಳು ಹುಟ್ಟಿದ ಹಾಗೆ ಪ್ರೌಢಶಾಲೆಗಳು ಬೇಕಾದಷ್ಟು ಹುಟ್ಟಿವೆ. ಹಿಂದಿನ ಯೋಜನೆಯಲ್ಲಿ ಸುಮಾರು 250 ಪ್ರೌಢಶಾಲೆಗಳನ್ನು ತೆರೆಯಬೇಕೆಂದಿದ್ದೆವು ಆದರೆ 450 ಶಾಲೆಗಳು ಹುಟ್ಟಿಕೊಂಡಿವೆ ಎಂದು ವಿದ್ಯಾಮಂತ್ರಿಗಳು ಹೆಮ್ಮೆಯಿಂದ ಹೇಳುತ್ತಾರೆ. 450 ಶಾಲೆಗಳು ಹೆಚ್ಚಿವೆ ಎಂದರೆ ಪ್ರೌಢವಿದ್ಯಾಭ್ಯಾಸ ಬಹಳ ಮುಂದುವರಿದಿದೆ, ಅಚ್ಚುಕಟ್ಟಾಗಿ ನಡೆಯುತ್ತಿದೆ ಎಂಬ ಭಾವನೆಯಿಂದ ಹೇಳುತ್ತಾರೆಂದು ನಂಬಿದ್ದೇನೆ. ಆದರೆ ನಾನು ವಿಚಾರ ಮಾಡಿ ನೋಡಿದುದರಲ್ಲಿ ಪ್ರೌಢಶಾಲೆಗಳಲ್ಲಿ ವಿದ್ಯಾಭ್ಯಾಸ ಯಾವ ಮಟ್ಟದಲ್ಲಿದೆ, ಯಾವ ಸ್ಟಾಂಡರ್ಡ್‌ನಲ್ಲಿರಬೇಕೆಂದು ಜನರೂ ವಿದ್ಯಾಸಚಿವರೂ ಅಪೇಕ್ಷಿಸುತ್ತಾರೋ ಆ ಮಟ್ಟದಲ್ಲಿ ಅಥವಾ ಸ್ಟಾಂಡರ್ಡ್‌ನಲ್ಲಿ ಇಲ್ಲವೆಂದು ನಾನು ಹೇಳುವುದಲ್ಲದೆ ತಜ್ಞರೂ ಕೂಡ ಹೇಳುತ್ತಾರೆ. ಇದನ್ನು ಇಲಾಖೆಯವರೂ ವಿದ್ಯಾಮಂತ್ರಿಗಳೂ ಅನೇಕ ಸಂದರ್ಭದಲ್ಲಿ ಒಪ್ಪಿಕೊಂಡಿದ್ದಾರೆ. ಇದಕ್ಕೆ ಕಾರಣವೇನೆಂದರೆ ವಿದ್ಯಾಸಂಸ್ಥೆಗಳ ಸಂಖ್ಯೆ ಜಾಸ್ತಿಯಾಯಿತು, ಓದತಕ್ಕ ಮಕ್ಕಳ ಸಂಖ್ಯೆ ಹೆಚ್ಚಾಯಿತು ಎಂದು ಇಷ್ಟರಲ್ಲೇ ತೃಪ್ತಿಪಟ್ಟುಕೊಂಡು ಕುಳಿತಿದ್ದೇವೆ. ಆದಕಾರಣ ಏನು ದಕ್ಷತೆ ಬರಬೇಕೋ ಅದು ಬರಲಿಲ್ಲವೆಂದು ವಿಷಾದದಿಂದ ಹೇಳಬೇಕಾಗಿದೆ. ವಿದ್ಯಾರ್ಥಿಗಳ ಸಂಖ್ಯೆ ಜಾಸ್ತಿ ಮಾಡಿದ ಮಾತ್ರಕ್ಕೇ, ಸಂಸ್ಥೆಗಳು ಜಾಸ್ತಿಯಾದ ಮಾತ್ರಕ್ಕೇ ವಿದ್ಯಾಪ್ರಗತಿಯಾಯಿತು, ಮಕ್ಕಳು ವಿದ್ಯಾವಂತರಾದರು ಎಂದು ನಾನು ಭಾವಿಸುವುದಿಲ್ಲ. ಪ್ರೌಢಶಾಲೆಗಳಲ್ಲಿ ಓದತಕ್ಕ ಮಕ್ಕಳು ಹತ್ತು ಹದಿನೈದು ವರ್ಷಗಳಲ್ಲಿ ನಾಗರಿಕರಾಗಿ ದೇಶವನ್ನು ಕಟ್ಟಲು ಸಮರ್ಥರಾಗಬೇಕು, ದೇಶವನ್ನು ಪೋಷಿಸಬೇಕು, ಬೆಳೆಸಬೇಕು. ಇಂತಹ ಕೆಲಸಕ್ಕೆ ದಕ್ಷತೆ ಸಾಲದು, ಯೋಗ್ಯತೆ ಇಲ್ಲವೆಂದರೆ ನಾವು ದುಃಖಪಡ

Indicates that the remarks or speeches have not been revised by the member concerned.

(ಶ್ರೀ ಟಿ. ಮಾದಯ್ಯ ಗೌಡ)

ಬೇಕಾದ ವಿಚಾರ. ಕೇವಲ ಸಣ್ಣ ಮತ್ತು ಸಾಮಾನ್ಯವಾದ ವಿಷಯವನ್ನು ಕೇಳಿದರೂ ಹುಡುಗರಿಗೆ ಉತ್ತರ ಹೇಳುವುದಕ್ಕೆ ಗೊತ್ತಿರುವುದಿಲ್ಲವೆಂದು ಶ್ರೀಮತಿ ರತ್ನಮ್ಮನವರು ಹೇಳುತ್ತಿದ್ದರು. ಯಾವುದಾದರೂ ನಿಮ್ಮ ತಾಲ್ಲೂಕಿನಲ್ಲಿರುವ ಯಾತ್ರಾಸ್ಥಳದ ಹೆಸರನ್ನು ಹೇಳು ಎಂದು ನಾನು ಹೈಸ್ಕೂಲು ವಿದ್ಯಾರ್ಥಿಗಳನ್ನು ಕೇಳಿದರೆ ಅವರಿಗೆ ಗೊತ್ತಿಲ್ಲ. ಹೀಗೆ ಸಾಮಾನ್ಯ ವಿಷಯಗಳನ್ನು ಕೂಡ ಅವರು ತಿಳಿದುಕೊಂಡಿರುವುದಿಲ್ಲ. ಎಂದಮೇಲೆ ಅವರ ಜೆನರಲ್ ನಾಲೆಡ್ಜ್ ಎಷ್ಟುಮಟ್ಟಿನದು ಎಂಬುದನ್ನು ನಾವು ಊಹಿಸಬಹುದು. ಅವರು ಕೇವಲ ಕೆಲವು ಪಠ್ಯ ಪುಸ್ತಕಗಳನ್ನು ಓದುತ್ತಾರೆ, ಆದರೆ ಅವರಿಗೆ ಏನು ತಿಳಿವಳಿಕೆ, ಜ್ಞಾನ ಬರಬೇಕೋ ಅದು ಬಂದಿದೆಯೇ ಎನ್ನುವುದನ್ನು ವಿದ್ಯಾ ಇಲಾಖೆಯಾಗಲೀ ಮಾನ್ಯ ಸಚಿವರಾಗಲೀ ವಿಚಾರ ಮಾಡಿಲ್ಲವೆನಿಸುತ್ತದೆ. ಆದುದರಿಂದ ವಿದ್ಯಾಸಚಿವರಿಗೆ ನಾನು ಹೇಳುವುದಿಷ್ಟೆ, ತಾವು ಹೇಗೆ 22 ಕೋಟಿ ರೂಪಾಯಿಗಳನ್ನು ವಿದ್ಯಾಭ್ಯಾಸದ ಇಲಾಖೆಗಾಗಿ ಖರ್ಚು ಮಾಡುತ್ತಿದ್ದೀರೋ, ಹೇಗೆ ಹೈಸ್ಕೂಲು ವಿದ್ಯಾರ್ಥಿಗಳ ಸಂಖ್ಯೆಯನ್ನು ಹೆಚ್ಚಿಸಬೇಕೆಂದು ಉತ್ಸಾಹದಿಂದ, ಹೆಮ್ಮೆಯಿಂದ ಹೊರಟಿದ್ದೀರೋ ಹಾಗೆಯೇ ಅದೇ ಉತ್ಸಾಹದಿಂದ ಹೆಮ್ಮೆಯಿಂದ ವಿದ್ಯಾರ್ಥಿಗಳ ಸ್ಟಾಂಡರ್ಡ್ ಅಥವಾ ದಕ್ಷತೆಯನ್ನು ಹೆಚ್ಚಿಸಬೇಕೆಂದು ಪ್ರಯತ್ನ ಮಾಡಬೇಕು. ಪರೀಕ್ಷೆಗಳಲ್ಲಿ ಹೆಚ್ಚು ಜನ ವಿದ್ಯಾರ್ಥಿಗಳು ಉತ್ತೀರ್ಣರಾಗುತ್ತಿಲ್ಲವೆಂದರೆ ಶಿಕ್ಷಣ ವ್ಯರ್ಥವಾಗುವುದಲ್ಲದೆ ಮಕ್ಕಳ ಶಕ್ತಿ ಕಡಮೆಯಾಗುತ್ತದೆ. ಅಲ್ಲದೆ ಹೆಚ್ಚು ಅನಾಹುತಗಳೂ ಆಗುತ್ತವೆ ಎನ್ನುವುದನ್ನು ವಿದ್ಯಾಪ್ರೌಢಿಮೆಯಿರುವ ಜನರು ಯೋಚನೆ ಮಾಡಬೇಕಾದ ವಿಚಾರ. ಪ್ರೌಢಶಾಲೆಗಳಲ್ಲಿರುವ ಉಪಾಧ್ಯಾಯರಲ್ಲಿ ಏನು ದಕ್ಷತೆ ಇರಬೇಕೋ ಅದೂ ಇಲ್ಲವೆಂದು ಎನಿಸುತ್ತದೆ.• ಅಲ್ಲದೆ ಉಪಾಧ್ಯಾಯರು ಹೆಚ್ಚು ಹಣ ಸಂಪಾದನೆ ಮಾಡುವ ಕೆಲಸಕ್ಕೆ ಹೊರಟಿದ್ದಾರೆ. ಯಾವುದಾದರೂ ಒಬ್ಬ ಹುಡುಗನಿಗೆ ವೇತನ ಬಂದರೆ ಮುಖ್ಯವಾಗಿ ಅವನನ್ನು ಪ್ರೈವೇಟ್ ಟ್ಯೂಷನ್‌ಗೆ ಸೇರಿಸಬೇಕು. ಇಂಥವರಿಗೆ ಹೆಚ್ಚು ಮಾರ್ಕ್ಸ್ ಕೊಟ್ಟು ಅವರನ್ನು ಮುಂದೆ ತರುವುದಕ್ಕೆ ಪ್ರಯತ್ನ ಮಾಡುತ್ತಾರೆ. ಇದನ್ನು ತಿಳಿದುಕೊಂಡು ಹೆಚ್ಚು ಜನರು ಉಪಾಧ್ಯಾಯರ ಮನೆಗಳಿಗೆ ಹೋಗುತ್ತಾರೆ. ಇಲಾಖೆಯವರು ಇದನ್ನು ನಿಷೇಧಿಸಿ ಸರ್ಕ್ಯುಲರ್ ಕಳುಹಿಸಿದ್ದರೂ ಅದು ಜಾರಿಗೆ ಬರುತ್ತಿಲ್ಲ.

ಉಪಾಧ್ಯಾಯರ ವಿಷಯ ಹೀಗಿದ್ದರೆ, ಶಾಲಾ ಕಟ್ಟಡಗಳ ಸ್ಥಿತಿ ಬಹಳ ಶೋಚನೀಯವಾಗಿದೆ. ಹಿಂದೆ ಚನ್ನಪಟ್ಟಣದ ಹೈಸ್ಕೂಲಿನಲ್ಲಿ ಎಷ್ಟು ಜನ ಹುಡುಗರಿದ್ದಾರೆ, ಕಟ್ಟಡ ಎಷ್ಟಿದೆ ಎಂಬ ಬಗ್ಗೆ ಪ್ರಶ್ನೆ ಬಂದಿತ್ತು, ಅದಕ್ಕೆ ಕೊಟ್ಟ ಉತ್ತರಗಳನ್ನೂ ಕೇಳಿದ್ದೇವೆ. ರಾಮನಗರದ ಹೈಸ್ಕೂಲಿನಲ್ಲಿ 19 ತರಗತಿಗಳಿಗೆ 12 ರೂಮುಗಳಿವೆ. ಅದರಲ್ಲೇ ಹೇಗೋ ಮಾಡುತ್ತಿದ್ದಾರೆ.........

ಶ್ರೀ ಎಸ್. ಆರ್. ಕಂಠಿ.—ಹೊಸ ಕಟ್ಟಡ ಕಟ್ಟಿಸಿದ್ದಾರೆ.

ಶ್ರೀ ಟಿ. ಮಾದಯ್ಯಗೌಡ.—ಅದೂ ಸೇರಿ ನಾನು ಹೇಳುತ್ತಿರುವುದು. ಒಂದು ಖಾಸಗಿ ಕಟ್ಟಡದಲ್ಲಿ ಬೆಳಿಗ್ಗೆ ಶಾಲೆ ನಡೆಸುತ್ತಿದ್ದರು ಈಗ ಅವರು ತಮಗೆ ಕಟ್ಟಡ ಬೇಕೆಂದು ಹೇಳಿದರು. ಈ ಸ್ಥಿತಿಯಲ್ಲಿ ವಿದ್ಯಾಭ್ಯಾಸ ಸರಿಯಾಗಿ ನಡೆಯುತ್ತಿಲ್ಲ. ಖಾಸಗಿ ಶಾಲೆಗಳ ಮೇಲೆ ಸರಕಾರಕ್ಕೆ ಮತ್ತು ಇಲಾಖೆಗೆ ಏನು ಕಂಟ್ರೋಲ್ ಇದೆಯೋ ಗೊತ್ತಿಲ್ಲ ; ಏನೂ ಹತೋಟಿ ಇಲ್ಲವೆಂದು ನನಗನಿಸುತ್ತದೆ. ಯಾರಾದರೂ ಖಾಸಗಿ ಜನ ಬಂದು ಒಂದು ಹೈಸ್ಕೂಲನ್ನು ಪ್ರಾರಂಭ ಮಾಡುತ್ತೇವೆ ಎಂದರೆ ಅದಕ್ಕೆ ಒಪ್ಪಿ ರೆಕಾಗ್‌ನಿಷನ್ ಕೊಡುತ್ತಾರೆ. ಕೊಟ್ಟಮೇಲೆ ಅಲ್ಲಿ ಪಾಠಗಳು ಸರಿಯಾಗಿ ನಡೆಯುತ್ತಿವೆಯೇ ಉಪಾಧ್ಯಾಯರು ಸರಿಯಾಗಿ ನೇಮಕವಾಗಿದ್ದಾರೆಯೇ, ಅವರಿಗೆ ತೃಪ್ತಿಕರವಾಗಿ ಸಂಬಳ ಸಾರಿಗೆ ಕೊಡುತ್ತಿದ್ದಾರೆಯೇ, ಸರಿಯಾಗಿ ಲೆಕ್ಕಪತ್ರಗಳಿವೆಯೇ, ಸಲಕರಣೆಗಳಿವೆಯೇ ಎನ್ನುವುದನ್ನು ನೋಡಬೇಕು. ಇದು ಸರಕಾರದ ಮೇಲಿರುವ ಜವಾಬ್ದಾರಿ. ಇದನ್ನು ಸರಿಯಾಗಿ ನಿರ್ವಹಿಸಬೇಕೆಂದು ಕಳಕಳಿಯಿಂದ ಪ್ರಾರ್ಥನೆ ಮಾಡುತ್ತೇನೆ.........

ಶ್ರೀ ಎಸ್. ಆರ್. ಕಂಠಿ.—ಮಾನ್ಯ ಸದಸ್ಯರು ಬೇರೆ ರೀತಿ ತಿಳಿದುಕೊಂಡಂತಿದೆ. ಮೊದಲು ನಾವು ಅನುಮತಿ ಕೊಟ್ಟಮೇಲೆ ಪ್ರಾರಂಭ ಮಾಡುತ್ತಾರೆ. ನಂತರ ರೆಕಗ್‌ನಿಷನ್ ಕೊಡಬೇಕಾದರೆ ಎಲ್ಲ ಷರತ್ತುಗಳೂ ಪೂರ್ತಿಯಾಗಿವೆಯೇ ಎಂಬುದನ್ನು ನೋಡಿ ಕೊಡುತ್ತೇವೆ. ಅದುವರೆಗೂ ಅವರಿಗೆ ಫೀ ಕಾಂಪನ್ಸೇಷನ್ ಕೊಡುವುದಿಲ್ಲ. ಎಷ್ಟೋ ಹೈಸ್ಕೂಲುಗಳಿಗೆ ರೆಕಗ್‌ನಿಷನ್ ಸಿಕ್ಕಿಲ್ಲ.

ಶ್ರೀ ಟಿ. ಮಾದಯ್ಯಗೌಡ.—ಒಂದು ಹೈಸ್ಕೂಲಿಗೆ ರೆಕಗ್‌ನಿಷನ್ ಕೊಟ್ಟಿದ್ದೀರಿ, ನಾವು ಮಕ್ಕಳನ್ನು ಅಲ್ಲಿಗೆ ಕಳುಹಿಸುತ್ತಿದ್ದೇವೆ. ಅಲ್ಲಿ ನಮ್ಮ ಮಕ್ಕಳು ಮೂರು ವರ್ಷ ವಿದ್ಯಾಭ್ಯಾಸ ಮಾಡಬೇಕಾದರೆ ಅಲ್ಲಿ ನಿಮ್ಮ ಷರತ್ತುಗಳ ಪ್ರಕಾರ ಎಲ್ಲವೂ ತೃಪ್ತಿಕರವಾಗಿ ನಡೆದಿದೆಯೇ ಇಲ್ಲವೇ ಎನ್ನುವುದನ್ನು ನೋಡುವುದು ಸರಕಾರದ ಭಾರ ; ಅದನ್ನು ನೋಡುತ್ತಿದ್ದಾರೆಯೇ ಎಂದು ಕೇಳುತ್ತೇನೆ

5-00 P.M.

ಶ್ರೀ ಎಸ್. ಆರ್. ಕಂಠಿ.—ಪರ್ಮಿಷನ್ ಕೊಟ್ಟಮೇಲೆ ಅವರು ಸ್ಕೂಲು ನಡೆಸುತ್ತಾರೆ. ಶಿಕ್ಷಕರು ಸಲಕರಣೆಗಳು ಎಲ್ಲವೂ ಇರುವುದನ್ನು ನೋಡಿ ಆ ಮೇಲೆ ರಿಪೋರ್ಟ್ ಮಾಡುತ್ತಾರೆ. ಸರಿಯಾಗಿ ನಡೆಸುತ್ತಿದ್ದರೆ ರಿಕಗ್ನಿಷನ್ ಕೊಡುತ್ತಾರೆ. ರಿಕಾಗ್ನಿಷನ್ ಇಲ್ಲದೇ ಇದ್ದರೆ ಫೀ ಕಾಂಪೆನ್ಸೇಷನ್ ಸಿಕ್ಕುವುದಿಲ್ಲ.

ಶ್ರೀ ಟಿ. ಮಾದಯ್ಯ ಗೌಡ.—ಇದು ನಮ್ಮ ದೃಷ್ಟಿಕೋಣದಿಂದ ವಿಚಿತ್ರವಾಗಿ ಕಾಣುತ್ತದೆ. ಎಲ್ಲ ಖಾಸಗೀ ಶಾಲೆಗಳಿಗೆ ದುರವಸ್ಥೆ ಇರುತ್ತದೆ. ಸರ್ವೇ ಸಾಧಾರಣವಾಗಿ ಇಂಥ ಪರಿಸ್ಥಿತಿ ಇರುತ್ತದೆ. ಟೀಕೆ ಮಾಡಬೇಕೆಂದು ಇದನ್ನು ಹೇಳುತ್ತಿಲ್ಲ. ಬೆಂಗಳೂರು ಪಟ್ಟಣದಲ್ಲಿ ಕೆಲವು ಒಳ್ಳೇ ಶಾಲೆಗಳು ನಡೆಯುತ್ತಿವೆ ಎಂದು ಕೇಳಿದ್ದೇನೆ. ಮಾನ್ಯಸದಸ್ಯರಾದ ಶ್ರೀಪಾರ್ಕ್ ದೇವಯ್ಯನವರು ಶ್ರೀರಾಮಪುರದಲ್ಲಿ ಒಂದು ಸರ್ವೋದಯ ಸ್ಕೂಲು ನಡೆಸುತ್ತಿದ್ದಾರೆ. 250 ಸ್ಕೂಲುಗಳನ್ನು ಪ್ರಾರಂಭಮಾಡಲು ಹೋಗಿ 450 ಸ್ಕೂಲುಗಳನ್ನು ಪ್ರಾರಂಭ ಮಾಡಲಾಗಿದೆ. ಕೇವಲ ವ್ಯಾಪಾರಕ್ಕೋಸ್ಕರ ಆ ದೃಷ್ಟಿಯಿಂದ ಸ್ಕೂಲುಗಳನ್ನು ತೆಗಯುತ್ತಿದ್ದಾರೆಯೇ ಎಂಬುದನ್ನು ಯೋಚನೆಮಾಡಿ ನೋಡಬೇಕು. ಹತ್ತು ಶಾಲೆಗಳಲ್ಲಿ ನೂರಾರು ವಿದ್ಯಾರ್ಥಿಗಳಿಗೆ ಅನ್ಯಾಯವಾದರೆ ಅದು ದೇಶಕ್ಕೆ ಕಳಂಕ. ಈ ಮಾತು ಬಹಳ ಕಟುವಾಗಿ ಇದ್ದರೂ ಕೂಡ ಇದನ್ನು ಸಹಾನುಭೂತಿಯಿಂದ ಅತಿ ಕಳಕಳಿಯಿಂದ ಮಾನ್ಯ ವಿದ್ಯಾ ಸಚಿವರಿಗೆ ಬಹಳ ನಮ್ರತೆಯಿಂದ ತಿಳಿಸುತ್ತೇನೆ. ಈ ಸಂದರ್ಭದಲ್ಲಿ ಇನ್ನೊಂದು ವಿಚಾರ ತಿಳಿಸಬೇಕಾಗಿದೆ. ಹೆಣ್ಣು ಮಕ್ಕಳ ಪ್ರೌಢಶಾಲೆಗಳ ವಿದ್ಯಾಭ್ಯಾಸ ಕ್ರಮದಲ್ಲಿ ಯಾವ ಪ್ರಗತಿ ಹೊಂದಿಲ್ಲ. ಯಾವುದೇ ಒಂದು ಸೂಕ್ತ ಏರ್ಪಾಡು ಇಲ್ಲ. ಹೆಣ್ಣು ಮಕ್ಕಳಿಗಾಗಿ ಗಂಡು ಮಕ್ಕಳಿಗಾಗಿ ಖಾಸಗಿ ಪ್ರೌಢಶಾಲೆಗಳನ್ನು ಮಾಡಿದ್ದಾರೆ. ಹಳ್ಳಿಗಾಡಿಗೆ ಬಂದು ಹೆಣ್ಣು ಮಕ್ಕಳಿಗೋಸ್ಕರ ಖಾಸಗಿಯವರು ಎಷ್ಟು ಪ್ರೌಢಶಾಲೆಗಳನ್ನು ತೆಗೆಯುತ್ತಾರೆ ? ಗ್ರಾಮಾಂತರ ಪ್ರದೇಶದಲ್ಲಿ ಹೈಸ್ಕೂಲು ವಿದ್ಯಾಭ್ಯಾಸ ಅನುಕೂಲವಾಗಿದೆಯೇ ಎಂಬುದನ್ನು ಸರಕಾರ ಸ್ವಲ್ಪ ಯೋಚನೆ ಮಾಡಬೇಕು. ಗಂಡು ಮಕ್ಕಳಿಗಿಂತ ಹೆಣ್ಣು ಮಕ್ಕಳ ವಿದ್ಯಾಭ್ಯಾಸಕ್ಕೆ ಹೆಚ್ಚು ಗಮನ ಕೊಟ್ಟರೆ ದೇಶಕ್ಕೆ ಕಲ್ಯಾಣವಾಗುತ್ತದೆ. ಸರಕಾರ ಈ ಅಭಿಪ್ರಾಯವನ್ನು ಗಮನದಲ್ಲಿಟ್ಟುಕೊಂಡು ದೇಶದಾದ್ಯಂತ ಹೆಣ್ಣು ಮಕ್ಕಳ ಪಾಠಶಾಲೆಗಳನ್ನು ತೆರೆಯಬೇಕು. ಖಾಸಗಿಯವರಿಗೆ ಅದು ಸಾಧ್ಯವಿಲ್ಲ. ಮುನಿಸಿಪಾಲಿಟಿಯವರಿಗೂ ಪ್ರಾರಂಭ ಮಾಡುವುದಕ್ಕೆ ಸಾಧ್ಯವಿಲ್ಲ. ಯಾಕೆಂದರೆ ಅವರಿಗೆ ಅಂಥ ಶಕ್ತಿ ಇಲ್ಲ. ಎಲ್ಲ ಅನುಕೂಲತೆ ಒದಗಿಸಿಕೊಡುತ್ತೇವೆ ನನಗೂ ಕೂಡ ಅಂಥ ಶಕ್ತಿ ಇಲ್ಲ. ಆದುದರಿಂದ ಈ ವಿಷಯವನ್ನು ಬಹಳ ಸಹಾನುಭೂತಿಯಿಂದ ವಿಮರ್ಶೆ ಮಾಡಬೇಕೆಂದು ಮಾನ್ಯ ವಿದ್ಯಾ ಸಚಿವರಲ್ಲಿ ಈ ಸಭೆಯ ಅಧ್ಯಕ್ಷರ ಮುಖಾಂತರ ತಿಳಿಸಲು ಬಯಸುತ್ತೇನೆ. ಒಟ್ಟಿನಲ್ಲಿ ಹೆಣ್ಣು ಮಕ್ಕಳ ವಿದ್ಯಾಭ್ಯಾಸಕ್ಕೆ ಹೆಚ್ಚಿನ ರೀತಿಯಲ್ಲಿ ಸರಕಾರ ಗಮನ ಕೊಡಬೇಕಾದುದು ಅಗತ್ಯ. ಪ್ರೌಢಶಾಲೆಗಳಲ್ಲಿ ದೇಶದ ಮೂಲೆ ಮೂಲೆಗಳಲ್ಲಿ ಓದತಕ್ಕಂತ ಎಲ್ಲ ಹೆಣ್ಣು ಮಕ್ಕಳಿಗೆ ಓದುವುದಕ್ಕೆ ಸೌಕರ್ಯ ಒದಗಿಸಿಕೊಡತಕ್ಕಂಥ ಯೋಜನೆ ಮಾಡಬೇಕೆಂದು ಬಹಳ ಕಳಕಳಿಯಿಂದ ತಮ್ಮಲ್ಲಿ ವಿಜ್ಞಾಪನೆ ಮಾಡಿಕೊಳ್ಳುತ್ತೇನೆ.

ಇನ್ನೊಂದು ವಿಚಾರ. ನಮ್ಮ ನೆರೆಹೊರೆ ಸಂಸ್ಥಾನಗಳಲ್ಲಿ ಪ್ರೌಢಶಾಲೆ ವಿದ್ಯಾಭ್ಯಾಸ ಉಚಿತವಾಗಿ ನೀಡತಕ್ಕಂಥಾದ್ದನ್ನು ನೋಡಿ ನಮಗೆ ಸಂತೋಷವಾಗುತ್ತದೆ. ನಮ್ಮ ವಿದ್ಯಾ ಸಚಿವರು ಕೊಯಮತ್ತೂರಿಗೆ ಹೋದಾಗ್ಗೆ ಅಲ್ಲಿ ಒಂದು ಸಮಾರಂಭದಲ್ಲಿ ಭಾಗವಹಿಸಿ ಈ ಬಗ್ಗೆ ಬಹಳ ಸಂತೋಷ ವ್ಯಕ್ತಪಡಿಸಿದ್ದಾರೆ. ನಮ್ಮ ರಾಜ್ಯದಲ್ಲಿ ಈ ರೀತಿ ಮಾಡುವುದಕ್ಕೆ ಇನ್ನೂ ಕಾಲ ಬಂದಿಲ್ಲ ಅದಕ್ಕೆ ಅವಕಾಶವಾಗಿಲ್ಲ ಎಂದು ಮಾನ್ಯ ಮಂತ್ರಿಗಳು ವ್ಯಸನ ಸಹ ಪಟ್ಟಿದ್ದಾರೆ. ಅದು ನಿಜವಾಗಿಯೂ ನಮಗೂ ಸಹ ವ್ಯಸನವಾಗುತ್ತದೆ. ಅದೇ ರೀತಿ ಉಚಿತ ಶಿಕ್ಷಣ ನಮ್ಮ ರಾಜ್ಯದಲ್ಲಿಯೂ ದೊರೆಯಬೇಕು ಎಂದು ನನ್ನ ಅಪೇಕ್ಷೆ. ನೆರೆಹೊರೆಯವರ ಹಾಗೆ ನಾವೂ ಇರಬೇಕು ಎಂಬುದು ನಮ್ಮ ಆಶೆ. ಆದುದರಿಂದ ಉಚಿತ ಪ್ರೌಢ ಶಿಕ್ಷಣ ದೊರೆಯುವ ಹಾಗೆ ತಾವು ಮಾಡುತ್ತೀರಿ ಎಂದು ನಂಬುತ್ತೇನೆ. ಇದಲ್ಲದೆ ಹೆಣ್ಣು ಮಕ್ಕಳ ವಿದ್ಯಾಭ್ಯಾಸ ಸೌಕರ್ಯ ಹೆಚ್ಚಿಸುವುದಕ್ಕೆ ಆಲೋಚನೆ ಮಾಡಿ ಸಹಾನುಭೂತಿಯಿಂದ ಒಂದು ಕಾರ್ಯಕ್ರಮ ಹಾಕುತ್ತೀರಿ ಮತ್ತು ಅದರಿಂದ ದೇಶದ ಪ್ರಗತಿ ಸಾಧಿಸಲು ಸಹಾಯ ಮಾಡುತ್ತೀರಿ ಎಂದು ತಿಳಿದುಕೊಂಡಿದ್ದೇನೆ. ಆ ರೀತಿ ಮಾಡಬೇಕೆಂದು ಬಹಳ ನಮ್ರತೆಯಿಂದ ಈ ಸಂದರ್ಭದಲ್ಲಿ ತಮ್ಮಲ್ಲಿ ವಿಜ್ಞಾಪನೆ ಮಾಡಿಕೊಳ್ಳುತ್ತೇನೆ.

Sri P. F. D'MELLOW (Nominated).—Mr. Speaker, Sir, if I should find myself obliged again this year to refer to a few of the problems that have been facing us, which I have had the honour to represent in past years, it is only because they are unresolved and I feel it my duty

(SRI P. F. D'MELLOW)

to bring it again to the notice of the Government through this Hon'ble House, and not, I hasten to add, that I am not aware of the generous understanding, which the Hon'ble Education Minister himself, in his personal capacity and in his official capacity, has been pleased to afford my representations, and of that, Sir, I am fully aware. I am aware that had it been left to the Hon'ble Minister for Education, most of my problems would have, by this time disappeared, and so, if I should mention these problems again, it is not so much by way of criticism, but rather by way of appeal, so that the Government will realise that what is really coming in the way is not a desire to help or the lack of desire again so much as the fact that there appears to be created difficulties represented by rules and regulations.

Mr. Speaker, Sir, my first point is with the question of what is known as Boarding grants. It has always been a matter of great worry to me that I have not as yet been able to succeed in making the point that I have been trying to do so many years, and that is, a Boarding grant of the level of ten rupees today is surely something quite out of all proportions to the realities of the situation. I would like to make my point clear by saying that when I am talking of orphans and destitutes, I speak of all unfortunate children and not of any particular community, nor again of children found in any particular cast. But, it has struck me as surprising that in the year 1961, when Government have been pleased to find it possible to reward, I use the word advisedly, the delinquent and the mischievous child by giving him a boarding grant, more in keeping with the cost of maintenance, should he be so unfortunate as to be sent on to a certified institution, the Government, at the same time, plead that it cannot look around those rules to be able to give an equally unfortunate but well behaved child, who spares us the necessity of picking him up in the street and who is willing to be admitted to a normal institution.

The Government have yet to find ways for raising the boarding grant to a level at least equal to the level of delinquent child. Here is a case for more humane approach and better reading of the existing rules. I demand that Boarding Grants to orphans and destitutes be made available at a higher rate and in any case not less than that allowed a child in a certified school to all destitues and orphans admitted to institutions whether labelled Boarding Schools or Orphanages and that these children be afforded further financial help to the same scale in the matter of their education as now allowed towards providing free Primary and Secondary education.

The next point is, during the general discussion on the budget I said it is a matter for congratulation that the Government have adopted a policy of encouragement to private initiative in the matter of establishment of high schools. I say it is a step in the right direction. We are aware that this encouragement is there because of financial considerations and inability to afford private institutions financial help

they require. But surely I fail to see why this encouragement should fall short of going on to encourage the private institutions by removal of certain restrictions and rules and regulations that are being tried to apply. It is my submission that if the Government is really serious in its desire to help private educational institutions, it must take a look not once but several times, at some of those rules and regulations which are found to interfere with and operate against the healthy growth and development of private schools and colleges. It is quite true that the State's financial resources will not permit the grant of financial assistance by way of Grants-in-Aid to all the many institutions that exist today. But, this is surely no reason why Government cannot help with their growth by framing its rules particularly in the matter of recognition in such a manner as not to deprive these schools management with the freedom to administer their institutions in a manner best suited to their choice and special needs. To do this I ask Government to undertake a complete revision of the existing uniform Grant-in-Aid Code for Secondary Schools which is generally found unworkable by schools throughout the State. I ask Government when it does undertake such a revision to write into its new rules evidence of its policy of encouragement to private Institutions, more particularly those established under the fundamental rights.

Sri S. R. KANTHI.—I am not aware of any complaint against the Secondary Education Code because my own impression is that people are satisfied with it. There are certain things like allowing small expenditure. If we improve them, I feel the Code is very good.

Sri P. F. D'MELLOW.—When I mention this particular Code I was not aware that they do not apply to the Anglo-Indian Schools and other schools which exist today because of the generous guarantees and privileges laid in the constitution. It is about those schools that I beg your indulgence. The schools which exist today have been well established under the generous provision enshrined in the Constitution for minorities based on language and religion. I plead and state emphatically that these schools, it is a wrong impression if entertained at all which have been established by minorities, are in any way less national, less patriotic, less Indian or less valuable to the State. These schools do have their problems and it is my submission that there are larger problems that are not completely understood, problems which I believe only require to be understood to be removed. To that extent, to understand them, I would like to submit to the Hon'ble Education Minister and to the House through you, that we have to have a correct approach towards these schools. In the judgment of the Supreme Court it has said :

(1) The State is under a positive obligation to give equal treatment in the matter of aid and recognitions to all educational institutions including those of minorities religious or linguistic, and

(2) The State is under a negative obligation as regards those Institutions not to prohibit their establishment or interfere with their administration.

(SRI P. F. D'MELLOW)

Mr. Speaker, the point that I am trying to make is to ask the hon'ble Education Minister to please accept the fact that in the absence of definite rules which provide for these safeguards, there does exist today a very real fear in the minds of managements of these private schools which of course the Government wants to encourage. If he were to spend his little time to remove this fear and worries by providing them with Code of Instructions, and regulations he would allow them to concentrate better on the main task which is the advancement of education.

Mr. Speaker, my third point is to refer to the needs of the underprivileged and poor child found in private schools today. I beg the indulgence of the House and Government to the question of extension of educational concessions to these poor underprivileged children who happen to be in private schools.

I may be forgiven if at this time of my life I cannot understand why there should be this inordinate delay of two or three years in bringing these concessions within the reach of those poor children who are entitled as anybody else to consideration at the hands of the State. I beg of the Hon'ble Education Minister not to misunderstand me for coming back to this subject so often. I am aware that he has been generous and understanding and left to himself I am sure I would have no need to refer to this matter again. It is the rules that come in the way and they have first to be got around.

Sir, may I now refer to a matter that is engaging wide public attention today and one that is causing no little disquiet. I refer to the question of the language medium which is to be introduced for the examinations conducted by the Union Public Service Commission. It is my view that this is a very important matter and one that should not be lightly dismissed. It appears from the press that there is no intention on the part of the Government to impose Hindi overnight. It is not so much the question of imposition of a particular language that concerns me so much as the fact that we are told that the States are shortly to introduce a system of model textbooks. I speak with some knowledge of the subject as I have spent most of my time in States like Rajasthan and U.P. which are Hindi-speaking States and therefore my acquaintance with Hindi is not limited. I may, however, remind the House that only last year we gave to ourselves an official language for the State and it was then said that it was Government's duty to do everything for the development of Kannada. Already we hear rumours that the State is now to embark on propagating Hindi so that it may take its place as the language medium for the examinations to be conducted by the Union Public Service Commission. It is my suggestion that we will be dissipating our energies in several directions and we will not be helping the cause of Kannada. Instead of devoting ourselves to the development of kannada and raising its stature so as to be a language medium for general education, if we are to distract ourselves within the next few years to acquiring a working knowledge of Hindi,

surely neither language will profit. Our children will acquire proficiency neither in the regional language nor in the official langauge, Hindi and in consequence they will be put at a great disadvantage when competing with children from other States. I therefore request the Government to ensure that first things come first.

Sri S. R. KANTHI.—May I ask the Hon'ble Member that we should not propagate Hindi.

Sri P. F. D'MELLOW.—I made no such assertion; on the contrary I myself love Hindi. But I do say that the schools in Mysore should devote sufficient time for the development of Kannada which is the State language.

ಶ್ರೀಮತಿ ನಾಗರತ್ನಮ್ಮ ಹಿರೇಮಠ್ (ಗಾಂಧಿನಗರ).—ಮಾನ್ಯ ಸಭಾಪತಿಗಳೇ ಈ ದಿವಸ ನಮ್ಮ ಮುಂದೆ ಇರುವಂತಹ ಈ ವಿದ್ಯಾಭ್ಯಾಸದ ಹಣದ ಬೇಡಿಕೆಯನ್ನು ಅನುಮೋದಿಸುತ್ತಾ ಒಂದೆರಡು ವಿಷಯಗಳನ್ನು ತಮ್ಮ ಮೂಲಕ ಸಭೆಯ ಗಮನಕ್ಕೆ ತರಬೇಕೆಂದು ಇದ್ದೇನೆ.

ವಿದ್ಯಾದದಾತಿ ವಿನಯಂ । ವಿನಾಯಾದ್ಯಾತಿ ಪಾತ್ರತಾಂ ।
ಪಾತ್ರತ್ವಾದ್ಧನ ಮಾಪ್ನೋತಿ । ಧನಾದ್ಧರ್ಮಂತತಃ ಸುಖಂ ॥

ವಿದ್ಯೆಯಿಂದ ಮಾನವನ ಜೀವನದ ಬಾಳುವೆ ಸುಖಮಯವಾಗುವುದೆಂದು ನಮ್ಮ ಆರ್ಯೋಕ್ತಿಯಿದೆ. ರಾಷ್ಟ್ರದ ಜೀವನಾಡಿಯಂತಿರುವ ವಿದ್ಯಾ ಇಲಾಖೆ ಸರಿಯಾಗಿದ್ದರೆ ಉಳಿದೆಲ್ಲವೂ ಸರಿಹೋಗುತ್ತದೆ. ನಮ್ಮ ದುರ್ದೈವವೆಂದೇ ಹೇಳಬೇಕು; ವಿದ್ಯಾ ಇಲಾಖೆ ಆಡಳಿತ ತುಂಬಾ ಕೆಟ್ಟಿದೆ. ಗ್ರಾಮ್ಯ ಭಾಷೆಯಲ್ಲಿ ಹೇಳಬೇಕೆಂದರೆ ಯುದ್ಧಾವ ತದ್ವಾ ಕೆಟ್ಟಿದೆ ಎಂದು ಹೇಳಬೇಕಾಗುತ್ತದೆ. ವಿದ್ಯಾ ಇಲಾಖೆ ಎಲ್ಲಿ ಕೆಟ್ಟಿದೆ ತೋರಿಸಿ ಎಂದು ಯಾರಾದರೂ ಕೇಳಿದರೆ, ಈ ಊರಿನಲ್ಲಿ ಹಗಲಿನಲ್ಲಿ ಸೂರ್ಯ ಎಲ್ಲಿ ಕಾಣುತ್ತಾನೆ ಎಂದು ಕೇಳಿದ ಹುಚ್ಚರಂತಾಗುತ್ತಾರೆ. ವಿದ್ಯಾ ಖಾತೆಯ ವಾರ್ಷಿಕ ಖರ್ಚು, ವಿಶ್ವ ವಿದ್ಯಾನಿಲಯಗಳ ಸಹಾಯ ಧನವೂ ಸೇರಿ ಸುಮಾರು 22 ಕೋಟಿ ರೂಪಾಯಿಗಳನ್ನು ಸಮೀಪಿಸುತ್ತಿದೆ. ಇದೇನು ಸಣ್ಣ ಮೊತ್ತವಲ್ಲ, ದೇಶದ ಉತ್ಪನ್ನದ ಕಾಲು ಭಾಗದಷ್ಟು ಹಣ. ಇಷ್ಟು ಹಣ ಖರ್ಚಾದರೂ, ಶೃಂಗರಿಸಿದ ಹೆಣದಂತೆ ಕಾಣುತ್ತಿದೆ. ವಿದ್ಯಾ ಇಲಾಖೆ ಈ ರೀತಿ ಆಗಲು ವಿವೇಕದ ಅಭಾವವಿರಬೇಕು, ಇಲ್ಲವೇ ಪ್ರತಿಷ್ಠೆಯ ಪ್ರಭಾವವಿರಬೇಕು. ಜೊತೆಗೆ ಪದವಿಗೆ ಅಂಟಿಕೊಂಡಿರುವ ಸ್ವಾರ್ಥದ ವ್ಯಾಮೋಹವಿರಬೇಕು. ಇವು ಮೂರು ವಿಚಾರಗಳು ಇಲ್ಲದಂತಾದಾಗ ಮಾತ್ರ ವಿದ್ಯಾ ಇಲಾಖೆಯ ಆಡಳಿತ ಸುಗಮವಾಗುವುದೆಂದು ಸ್ಪಷ್ಟವಾಗಿ ಹೇಳಬಯಸುತ್ತೇನೆ. ಹಾಗೂ ತಪ್ಪುಗಳೆಷ್ಟೋ ಮಾಡಿದ್ದಾಯಿತು. ನಿಮ್ಮಯ ಜೀವಿತ ಸ್ವಾರ್ಥಕ್ಕೆ। ಒಪ್ಪದು ಜನತೆ ವಿದ್ಯಾ ಸಚಿವರೆ ನೀವಣಿಯಾಗಿರಿ ತ್ಯಾಗಕ್ಕೆ । ಅಂತಲೂ ಹೇಳಬಯಸುತ್ತೇನೆ.

ವಿದ್ಯಾ ಇಲಾಖೆ ಅವ್ಯವಸ್ಥೆಯ ಗೊಂದಲಗಳೆಂಬ ಹಡಗುಗಳು ನಿಲ್ಲುವ ಬಂದರಾಗಿದೆ. ಈ ಗೊಂದಲಗಳಲ್ಲಿ ಮೊದಲನೆಯದು ಸರ್ಕಾರ ಮತ್ತು ವಿಶ್ವವಿದ್ಯಾನಿಲಯಕ್ಕೆ ನಡೆಯುತ್ತಿರುವ ವಾಗ್ವಾದ. ನನ್ನ ಅಧಿಕಾರ ಹೆಚ್ಚೊ, ತನ್ನ ಅಧಿಕಾರ ಹೆಚ್ಚೋ—ನಾನು ಮಾಡಿದ್ದು ಸರಿಯೋ! ತಾನು ಮಾಡಿದ್ದು ಸರಿಯೋ ಎಂಬ ವಿಚಾರ, ಆಗಿಂದಾಗ್ಗೆ ತಲೆದೋರುತ್ತಿದೆ. ಘರ್ಷಣೆ ನಡೆಯುತ್ತಲೇ ಇದೆ. ಇದರ ಫಲವಾಗಿಯೇ ಕಾಲೇಜಿನಲ್ಲಿ ಅಧ್ಯಾಪಕರಾಗಿ ನೇಮಕವಾಗಿದ್ದವರ ಬಗ್ಗೆ ಹಂಗಾಮಿಯೋ, ಖಾಯಮ್ಮೋ ಎಂಬ ಪ್ರಶ್ನೆಯ ಬಗ್ಗೆ ಅವರಿಗೆ ಕೊಟ್ಟಿರುವ ಕಿರುಕುಳ, ವೇತನದ ಹಿಂಬಡ್ತಿ ಬಗ್ಗೆ ವಾದ ವಿವಾದ ನಡೆದು ಶ್ರೇಷ್ಠ ನ್ಯಾಯಾಲಯದ ತೀರ್ಮಾನವೇ ಆಗಬೇಕಾಯಿತು. ಇನ್ನೂ ಉಚ್ಚತಮ ನ್ಯಾಯಾಲಯಕ್ಕೆ ಹೋಗುವುದಾಗಿಯೂ ಇದು ನನ್ನ ಪ್ರತಿಷ್ಠೆಯ ಪ್ರಶ್ನೆ ನನಗೆ ನ್ಯಾಯಾಂಗ ಇಲಾಖೆ ಈ ರೀತಿ ಮಾಡಲು ಸಲಹೆ ಕೊಡುತ್ತಿದೆ ವಗೈರೆ ವಿದ್ಯಾ ಮಂತ್ರಿಗಳು ಹೇಳುತ್ತಿರುವುದಾಗಿ ವದಂತಿಯಿದೆ. ವಿದ್ಯಾ ಇಲಾಖೆ ವಿದ್ಯಾ ಮಂತ್ರಿಗಳ ಜಹಗೀರಲ್ಲ ರಾಷ್ಟ್ರದ ಸೊತ್ತು. ಹೀಗಿರುವಾಗ ವ್ಯಯಕ್ತಿಕ ಪ್ರತಿಷ್ಠೆ ಎಲ್ಲಿದೆಯೋ ನನಗೆ ಅರ್ಥವಾಗದು.

Sri S. R KANTHI.—Sir, I rise to a point of order. In the matter of going in appeal, it is not an individual who takes a decision, but is the Government as such on the recommendation of the Law Ministry through the Advocate General.

Sri C. J. MUCKANNAPPA.—I want to know what is the point of order. I am unable to find any point of order in this.

Sri S. R. KANTHI.—He is not entitled to say there is no point of order.

Mr. DEPUTY SPEAKER.—There is no point of order.

5-30 P.M.

ಶ್ರೀಮತಿ ನಾಗರತ್ನಮ್ಮ ಹಿರೇಮಠ್.—ಗಂಡಹೆಂಡಿರ ಜಗಳದಲ್ಲಿ ಕೂಸು ಫಾಸಿಯಾಯಿತೆಂಬಂತೆ, ಪಾಪ ಅಧ್ಯಾಪಕರುಗಳು ಅನಿಶ್ಚಿತ ಪರಿಸ್ಥಿತಿಯಲ್ಲಿ ಕಾಲ ತಳ್ಳಬೇಕಾಗಿದೆ. ಒಬ್ಬ ಸೊಸೆ ಮನೆಗೆ ಬಂದ ಭಿಕ್ಷುಕನಿಗೆ ಮುಂದೆ ಹೋಗು ಎಂದು ಹೇಳಿದಳು. ಭಿಕ್ಷುಕ ಸಪ್ಪೆ ಮೋರೆ ಹಾಕಿ ಹೊರಟ. ಇದನ್ನು ನೋಡಿದ ಅತ್ತೆ ಭಿಕ್ಷುಕನನ್ನು ಕರೆದಳು. ಅವನು ಆಸೆಯಿಂದ ವಾಪಸು ಬಂದ. ನೋಡಪ್ಪಾ ಈ ಮನೆಗೆ ಯಜಮಾನಿ ನಾನು, ನಿನಗೆ ಮುಂದಕ್ಕೆ ಹೋಗು ಎಂದು ಹೇಳಲು ಸೊಸೆಗೆ ಅಧಿಕಾರವಿಲ್ಲ, ಈಗ ನಾನು ಹೇಳುತ್ತೇನೆ, ಮುಂದಕ್ಕೆ ಹೋಗಪ್ಪಾ ಎಂದು ಹೇಳಿ ಒಳಗೆ ಹೋದಳು. 'ಹೀಗೂ ಉಂಟೆ' ಎಂದುಕೊಂಡು ಭಿಕ್ಷುಕ ಮುಂದಕ್ಕೆ ಹೋದ. ವಿಶ್ವವಿದ್ಯಾನಿಲಯಕ್ಕೂ ಸರ್ಕಾರಕ್ಕೂ ನಡೆಯುತ್ತಿರುವ ವಾಗ್ವಾದ, ಘರ್ಷಣೆ, ಸಾರ್ವಭೌಮತ್ವ ವಗೈರೆ ನಿರ್ದಿಷ್ಟ ನಿಯಮ ನೀತಿಗಳಿಂದ ತಪ್ಪಲೆಂಬುದಕ್ಕಾಗಿ ಈ ಉದಾಹರಣೆ ಹೇಳಿದೆ.

ಪಠ್ಯಪುಸ್ತಕಗಳ ವಿಚಾರದಲ್ಲಿ ಒಂದೆರಡು ಮಾತು ಹೇಳಲೇಬೇಕಾಗಿದೆ. ಪಠ್ಯ ಪುಸ್ತಕಗಳನ್ನು ನಿರ್ಣಯಿಸುವಾಗ ಅವುಗಳ ಮಟ್ಟ ಪ್ರೌಢಿಮೆ, ಅರ್ಹತೆ, ಶ್ಲೀಲ, ಅಶ್ಲೀಲ, ಇವುಗಳ ವಿಮರ್ಶೆ ನಡೆಯದೆ, ಪಕ್ಷಪಾತ, ಪ್ರಭಾವಗಳಿಂದ ಎಷ್ಟೋ ಅನರ್ಹ ಪುಸ್ತಕಗಳು ಪಠ್ಯ ಪುಸ್ತಕಗಳಾಗಿರುವುದರ ಬಗ್ಗೆ ಈಗಾಗಲೇ ಎಷ್ಟೋ ಸಲ ವಿಧಾನಸಭೆಯಲ್ಲಿ, ಪತ್ರಿಕೆಗಳಲ್ಲಿ ಸಾರ್ವಜನಿಕರಲ್ಲಿ, ಸರ್ಕಾರದವರಲ್ಲಿ ಸಾಕಷ್ಟು ಚರ್ಚೆ ನಡೆದಿದೆ. ಆ ಬಗ್ಗೆ ಎಚ್ಚರಿಕೆ ತೆಗೆದುಕೊಳ್ಳಲು ಸರ್ಕಾರವೂ ಒಪ್ಪಿಕೊಂಡಿದೆ. ಆದರೂ ಇನ್ನೂ "ಅಲ್ಲೊಂದಿತ್ತು, ಇಲ್ಲೊಂದಿತ್ತು, ಜಾಗೀಕೋಟೆ ಮೂಲೆಯಲ್ಲಿತ್ತು," ಎಂಬ ಪದ್ಯಗಳು ನುಸುಳಿಕೊಂಡು ಪಠ್ಯಪುಸ್ತಕಗಳಲ್ಲಿ ಸೇರುತ್ತಿವೆ. ಅನುಭವಸ್ಥರು ಪ್ರಾಮಾಣಿಕರಾದವರನ್ನು ಈ ಕಮಿಟಿಗೆ ಹಾಕುವುದನ್ನು ಕಟ್ಟುನಿಟ್ಟು ಎಚ್ಚರಿಕೆಯಿಂದ ವಿದ್ಯಾ ಇಲಾಖೆಯವರು ನೋಡಿಕೊಳ್ಳುತ್ತಾರೆಂದು ನಂಬಿದ್ದೇನೆ. ಪಠ್ಯ ಪುಸ್ತಕಗಳನ್ನು ರಾಷ್ಟ್ರೀಕರಣ ಮಾಡಲಾಗುವುದೆಂದು ವಿದ್ಯಾಮಂತ್ರಿಗಳು ಹೇಳಿದ್ದಾರೆ. ಇದು ಸಂತೋಷದ ವಿಚಾರ. ಆದರೆ ಪುಸ್ತಕಗಳ ರಾಷ್ಟ್ರೀಕರಣದಲ್ಲಿ-ಪುಡಾರೀಕರಣದಲ್ಲಿ, ಸಾಮಂತೀಕರಣ ವಶೀಲಬಾಜೀಕರಣ, ಎಳ್ಳಷ್ಟೂ ನುಳಿಯದಂತೆ ನೋಡಿಕೊಂಡು ಶಿಕ್ಷಣದ ಉನ್ನತಮಟ್ಟ ಕಾಯ್ದುಕೊಳ್ಳುತ್ತಾರೆಂದು ನಂಬಿದ್ದೇನೆ.

ಪ್ರಾಥಮಿಕ ಶಾಲಾ ಉಪಾಧ್ಯಾಯರುಗಳ ನೇಮಕದಬಗ್ಗೆ ನಿರ್ದಿಷ್ಟ ನೀತಿನಿಯಮಗಳಿಲ್ಲ, ಒಮ್ಮೆ ಲೋಯರ್ ಸೆಕೆಂಡರಿ ಆದವರ ನೇಮಕವಾಗುತ್ತದೆ, ಒಮ್ಮೆ ಎಸ್.ಎಸ್.ಎಲ್.ಸಿ. ಆದವರ ನೇಮಕವಾಗುತ್ತದೆ, ಒಮ್ಮೆ ಟೀಚರ್ಸ್ ಟ್ರೈನಿಂಗ್ ಆದವರೇಬೇಕೆಂಬ ನಿಬಂಧನೆ ಬರುತ್ತದೆ. ಹೀಗೆ ಅನುಕೂಲಸಿಂಧು ಲೆಕ್ಕಾಚಾರದಿಂದ ಹೋಗುವ ಬದಲು ಒಂದು ನಿರ್ದಿಷ್ಟ ಅರ್ಹತೆಗಳನ್ನು ನಿಗದಿ ಮಾಡಿದರೆ ಆಕ್ಷೇಪಣೆಗೆ ಅವಕಾಶವೇ ಇರುವುದಿಲ್ಲ. ಪ್ರಾಥಮಿಕ ಶಿಕ್ಷಕರಕೊರತೆ ಏಕೆ ಇದೆ ಎಂದು ಕೇಳಿದರೆ, ತರಪೇತಿ ಪಡೆದ ಶಿಕ್ಷಕರು ಸಾಕಷ್ಟು ಇಲ್ಲವೆಂದು ನೆಪ ಸರ್ಕಾರದವರು ಹೇಳುತ್ತಾರೆ. ಹಿಂದೆ ನೇಮಕಗೊಂಡವರಿಗೆ ತರಬೇತಿಕೊಡುತ್ತಾ ಬಂದರೆ ಈಗಲೂ ಮುಂದುವರೆಸುವುದರಲ್ಲಿ ತೊಂದರೆ ಏನೂ ಇಲ್ಲ. ಮೊದಲೇ ತರಬೇತಿ ಅಪೇಕ್ಷಿಸುವುದಕ್ಕಿಂತಲೂ ಅರ್ಹತೆಯಿದ್ದವರನ್ನು ನೇಮಿಸಿಕೊಂಡು ಆಮೇಲೆ ತರಬೇತಿಕೊಡಬಹುದು. ಮಂತ್ರಿಗಳಾಗುವವರು ತರಬೇತಿ ಹೊಂದಿಯೇ ಮಂತ್ರಿಗಳಾಗುತ್ತಾರೇನು? ಪ್ರಾಥಮಿಕ ಶಿಕ್ಷಕರ ನೇಮಕದ ಬಗ್ಗೆ ನಿರ್ದಿಷ್ಟ ರೀತಿನೀತಿಗಳನ್ನು ಮಾಡಿ ಶಿಕ್ಷಕರಕೊರತೆ, ಅಭಾವಗಳನ್ನು ತಪ್ಪಿಸುವ ಕಾರ್ಯಕ್ರಮ ಕೈಕೊಳ್ಳಲೆಂದು ವಿನಂತಿಸುತ್ತೇನೆ. ಪ್ರಾಥಮಿಕ ಶಿಕ್ಷಕರನ್ನು ಬಡ ಉಪಾಧ್ಯಾಯರನ್ನು ಜಿಲ್ಲೆಯಿಂದ ಜಿಲ್ಲೆಗೆ ಮನಬಂದಂತೆ ವರ್ಗಾವರ್ಗಿ ಮಾಡುವುದನ್ನು ಖಂಡಿತ ನಿಲ್ಲಿಸಬೇಕೆಂದು ಒತ್ತಾಯಪೂರ್ವಕ ಸೂಚಿಸುತ್ತೇನೆ.

ಪರೀಕ್ಷಾ ಪ್ರಶ್ನೆ ವಿಭಾಗ ಅತಿ ಮಹತ್ವದ ಹಾಗೂ ಗೋಪ್ಯವಾದ ವಿಭಾಗ. ಹೀಗಿದ್ದರೂ ಪರೀಕ್ಷಾ ಪ್ರಶ್ನೆಪತ್ರಿಕೆಗಳು, ವಿದ್ಯಾ ಇಲಾಖೆಯ ಗೋಪ್ಯ ವಿಚಾರಗಳು ನಮ್ಮ ದೇಶದಲ್ಲಿ ಬಹಿರಂಗವಾಗುವಷ್ಟು ಬೇರೆ ಯಾವ ದೇಶದಲ್ಲಿಯೂ ಕಂಡುಬಂದಿಲ್ಲ. ಹೀಗಾಗುವುದರಿಂದ ಧನನಷ್ಟ, ದಕ್ಷತೆಯ ನಷ್ಟ ಉಂಟಾಗುತ್ತಿದೆ. ವಿದ್ಯಾ ಇಲಾಖೆಯ ದಕ್ಷತೆಯು, ಪ್ರಾಮಾಣಿಕತೆಯು ಅಭಾವಕ್ಕೆ

ಇಂದೊಂದೇ ಉದಾಹರಣೆ ಸಾಕು. ಮುಂದಾದರೂ ಈ ಬಗ್ಗೆ ಕಟ್ಟುನಿಟ್ಟಾದ ಕಾರ್ಯಕ್ರಮ ಕೈಕೊಳ್ಳುತ್ತೀರೆಂದು ನಂಬಿದ್ದೇವೆ.

ಇನ್ನೊಂದು ವಿಚಾರ. ಹಿಂದಿ ಉಪಾಧ್ಯಾಯರುಗಳಿಗೆ ವೇತನ, ನೇಮಕ, ವಗೈರೆ ವಿಚಾರದಲ್ಲಿ ನಿರ್ದಿಷ್ಟ ರೀತಿನೀತಿಗಳೇನೂ ಇದ್ದಂತೆ ಕಾಣಲಿಲ್ಲ. ಇಂತಿಷ್ಟೇ ಕಾಲಾವಧಿ ಪಾಠ ಹೇಳಬೇಕೆಂದು ನೇಮಿಸಿಕೊಳ್ಳುವ ಹಿಂದಿ ಉಪಾಧ್ಯಾಯರಿಗೆ ಕೊಡುವ ವೇತನ ಕಡಿಮೆ. ಇಷ್ಟೇ ಹೊತ್ತು ಪಾಠ ಹೇಳುವ ಕಾಲೇಜಿನ ಮತ್ತು ಇತರೆ ಭಾಷಾ ಉಪಾಧ್ಯಾಯರಿಗೆ ಪೂರ್ಣ ವೇತನಕೊಡುತ್ತಿರುವಾಗ ಹಿಂದಿ ಉಪಾಧ್ಯಾಯರಿಗೆ ತ್ರಿಶಂಕುಸ್ವರ್ಗದ ವೇತನಕೊಡಲು ಕಾರಣವೇನೆಂದು ಗೊತ್ತಾಗಲಿಲ್ಲ. ಇನ್ನು ಮುಂದಾದರೂ ಸರ್ಕಾರ ಈ ಬಗ್ಗೆ ನ್ಯಾಯ ದೊರಕಿಸಿಕೊಡುತ್ತಾರೆಂದು ನಂಬಿದ್ದೇನೆ.

ಶಾಲಾ ಕಟ್ಟಡಗಳ ಅಭಾವ ನಮ್ಮ ದೇಶದಲ್ಲಿರುವಷ್ಟು ಬೇರೆಲ್ಲೂ ಇಲ್ಲವೆಂದು ನಾನು ಭಾವಿಸಿದ್ದೇನೆ. ಬೆಂಗಳೂರಿನಲ್ಲಿ ಒಂದೊಂದು ಕಟ್ಟಡದಲ್ಲಿ ಬೆಳಿಗ್ಗೆ ಒಂದು ಕ್ಲಾಸು, ಮಧ್ಯಾಹ್ನ ಒಂದು ಕ್ಲಾಸು ಹೀಗೆ ಬೇರೆ ಬೇರೆ ಪ್ರಾಥಮಿಕ, ಮಾಧ್ಯಮಿಕ, ಪ್ರೌಢ ತರಗತಿಗಳು ನಡೆಯುತ್ತಿವೆ. ಇದನ್ನು ತಪ್ಪಿಸಲು, ಕಟ್ಟಡದ ಅಭಾವ ತೊಲಗಿಸಲು 30 ಕೋಟಿ ರೂಪಾಯಿಗಳು ಬೇಕೆಂದು ಮಂತ್ರಿಗಳು ಹೇಳಿದ್ದಾರೆ. ಇವರಿಗೆ 30 ಕೋಟಿ ಹಣ ಯಾವಾಗ ಎಲ್ಲಿ ದೊರೆಯುತ್ತದೆ? ಎಂದು ಅಭಾವ ತೊಲಗುತ್ತದೆ ಎಂದು ಕೇಳಿದರೆ, ವಿದ್ಯಾಮಂತ್ರಿಗಳಿಂದ ಉತ್ತರಕೊಡಲು ಸಾಧ್ಯವಿಲ್ಲ. ಹೀಗೆಲ್ಲಾ ಹೇಳುವ ಬದಲು ಶಾಲಾ ಕಟ್ಟಡಗಳ ಪಾಂಚವಾರ್ಷಿಕ ಯೋಜನೆಯೊಂದನ್ನು ಕೈ ಕೊಂಡು ಪ್ರತಿವರ್ಷ ಇಂತಿಷ್ಟೆಂದು ನಿರ್ಧರಿಸಿಕೊಂಡು ಕಟ್ಟಡಗಳನ್ನು ಕಟ್ಟುತ್ತಾ ಹೋದಲ್ಲಿ ಒಂದು ನಿರ್ದಿಷ್ಟ ಅವಧಿಗಾದರೂ ಕಟ್ಟಡಗಳ ಅಭಾವ ತಪ್ಪಬಹುದು. ಈ ರೀತಿಯಾದ ಕಾರ್ಯಕ್ರಮ ಕೈ ಕೊಳ್ಳಿರೆಂದು ಸೂಚಿಸುತ್ತೇನೆ.

ಈಗ ದೇಶದಲ್ಲಿ ಖಾಸಗಿ ವಿದ್ಯಾಸಂಸ್ಥೆಗಳ ಗೊಂದಲ ತುಂಬಾ ಇದೆ. ಕೆಲವು ಖಾಸಗಿ ಸಂಸ್ಥೆಗಳು ತಮ್ಮ ಸ್ವಂತ ಪ್ರಯತ್ನ ಮತ್ತು ಸರ್ಕಾರದ ಸಹಾಯಧನದಿಂದ ಒಳ್ಳೆಯ ಕೆಲಸ ಮಾಡುತ್ತಿವೆ. ಅಂತಹ ಸಂಸ್ಥೆಗಳಿಗೆ ನಮ್ಮ ವಂದನೆಗಳುಂಟು. ಆದರೆ ಇನ್ನು ಕೆಲವು ಸಂಸ್ಥೆಗಳು ಹಣ ಗಳಿಸಲು, ಪ್ರತಿಷ್ಠೆ ಬೆಳೆಸಲು, ಪುಡಾರಿಗಳ ನೇತೃತ್ವದಲ್ಲಿ ಸ್ಥಾಪಿಸಲ್ಪಟ್ಟಿವೆ; ಸ್ಥಾಪಿಸಲ್ಪಡುತ್ತಿವೆ. ಇವುಗಳಲ್ಲಿ ಎಷ್ಟೋ ಸಂಸ್ಥೆಗಳ ವಿದ್ಯಾವ್ಯಾಪಾರವಿಟ್ಟುಕೊಂಡು ಹಣಗಳಿಸುತ್ತಿವೆ. ಇನ್ನೂ ಕೆಲವು ಸ್ವಾರ್ಥಿಗಳ ಬಾಳುವೆ ನಡೆಸಲು ನೆರವಾಗಿವೆ. ಪುಢಾರಿಗಳ, ಸ್ವಾರ್ಥಿ ಪ್ರಭಾವಶಾಲಿಗಳ ಕೈವಾಡ, ಅಸ್ತಿತ್ವ ಇಂಥ ಸಂಸ್ಥೆಗಳಲ್ಲಿ ತುಂಬಾ ಇದೆ. ಲೆಕ್ಕಪತ್ರಗಳಿರುವ ಸಂಸ್ಥೆಗೆ ಜಾಗ್ರತೆ ಗ್ರಾಂಟ್ ಕೊಡುವುದಿಲ್ಲ, ಲೆಕ್ಕಪತ್ರ ಸರಿಯಾಗಿಲ್ಲದಿದ್ದ ಸಂಸ್ಥೆಗಳಿಗೆ ಜಾಗ್ರತೆ ಗ್ರಾಂಟ್ ಒದಗಿಸುತ್ತಾರೆ. ಅನ್ಯಾಯ ನಡೆಯುತ್ತಿರುವ ಸಂಸ್ಥೆಗಳ ಬಗ್ಗೆ ಸರ್ಕಾರ ಸದಾ ಕಣ್ಣಿಟ್ಟಿರಬೇಕು, ಅನ್ಯಾಯವಾಗದಂತೆ ನೋಡಿಕೊಳ್ಳುತ್ತೀರೆಂದು ನಂಬಿದ್ದೇನೆ. ಖಾಸಗಿ ಸಂಸ್ಥೆಗಳಿಗೆ ಗ್ರಾಂಟ್ ಕೊಡುವಾಗ ಇಂಥಿಂಥ ಖಾತೆಗೆ ಇಷ್ಟಿಷ್ಟು ಹಣ ಎಂದು ವಿಭಾಗಿಸಿಕೊಡುವುದು ಒಳ್ಳೆಯದು.

ಕನ್ನಡ ಶಬ್ದಕೋಶದ ಬಗ್ಗೆ ಒಂದು ಮಾತು ಹೇಳಬೇಕಾಗಿದೆ. ಶಬ್ದಕೋಶ ಗಜಗರ್ಭದಂತೆ ಸಾಕಷ್ಟು ಕಾಲ ತೆಗೆದುಕೊಳ್ಳುತ್ತಿದೆ. ಈಗಾಗಲೆ 5 ಲಕ್ಷ ಖರ್ಚಾಗಿದೆ. ಇನ್ನೂ 25 ಲಕ್ಷ ಬೇಕೆಂದು ಹೇಳುತ್ತಿದ್ದಾರೆ. ಖರ್ಚಿಗೆ ತಕ್ಕ ಕೆಲಸ ನಡೆಯುತ್ತಿದೆಯೆ? ಈ ಕಾರ್ಯ ಪ್ರಾಮಾಣಿಕತೆಯಿಂದ ನಡೆಯುತ್ತಿದೆಯೆ? ನಮ್ಮ ಮೊಮ್ಮಕ್ಕಳ ಕಾಲಕ್ಕಾದರೂ ಕನ್ನಡ ಶಬ್ದಕೋಶ ದೊರೆಯುತದೆಯೇ? ಎಂದು ವಿದ್ಯಾಮಂತ್ರಿಗಳನ್ನು ಪ್ರಶ್ನಿಸುತ್ತೇನೆ. ನಮ್ಮ ನೆರೆ ರಾಜ್ಯದವರು ಈಗಾಗಲೆ 6-7 ಸಂಪುಟಗಳನ್ನು ಹೊರಡಿಸಿದ್ದರೂ ನಮ್ಮಲ್ಲಿ ಒಂದು ಸಂಪುಟವೂ ಹೊರಡದಿರುವುದು ವಿಷಾದನೀಯ.

ವಿದ್ಯಾಮಂತ್ರಿಗಳಿಗೆ ತುಂಬಾ ಬುದ್ಧಿ ಇರಬೇಕೆಂಬುದು ನಿರ್ವಿವಾದವಾದ ವಿಚಾರ. ಜೊತೆಗೆ ಸಿದ್ಧಿಯೂ ಇರಬೇಕು. ಇದರಲ್ಲಿ ಯಾವುದರ ಅಭಾವವಾದರೂ ವಿದ್ಯಾ ಇಲಾಖೆ ಅವ್ಯವಸ್ಥೆಗೊಳಗಾಗುತ್ತದೆ. "ಬಾಳೆಗೆ ಗೊನೆಮೂಡಿದ್ದೇ ಕಡೆ, ಚೇಳಿಗೆ ಬಸುರಾಗಿದ್ದೇ ಕಡೆ, ವಿದ್ಯಾ ಸಚಿವಗೆ ದಕ್ಷಹೀನತೆಯೇ ಕಡೆ" ಎಂದು ರಾಜಕೀಯ ಚಾಟೋಕ್ತಿ ಇದೆ. ವಿದ್ಯಾಮಂತ್ರಿಗಳಿಗೆ ಆಡಳಿತ ಸಿದ್ಧಿ ದೊರೆಯದಿದ್ದರೆ, ಆಡಳಿತ ಹದಗೆಟ್ಟು ಹೋಗುತ್ತದೆ. ಉದಾಹರಣೆಗೆ ಹೇಳಬೇಕೆಂದರೆ, ಕಾಲೇಜು ಶಿಕ್ಷಣವನ್ನು ಹೈಸ್ಕೂಲಿಗೆ ವರ್ಗಾಯಿಸುವುದು, ಸೆಕೆಂಡರಿ ಶಿಕ್ಷಣ ಎಷ್ಟನೇ ತರಗತಿಗೆ ಮುಗಿಸಬೇಕು? ಕಾಲೇಜು ಶಿಕ್ಷಣ ಎಷ್ಟು ವರ್ಷದ್ದಾಗಿರಬೇಕು? ಪ್ರಮೋಷನ್ ವಗೈರೆ ಬಗ್ಗೆ ನಡೆಯುತ್ತಿರುವ ವಾದವಿವಾದಗಳು, ಒಮ್ಮೆ ಇಲ್ಲಿ ಒಂದು ಹೇಳಿಕೆ; ಮತ್ತೊಮ್ಮೆ ಮತ್ತೊಂದು ಕಡೆ ಮತ್ತೊಂದು ಹೇಳುವುದು, ಕಟ್ಟುಕರುರುಗಳಿಲ್ಲದೆ ಇಷ್ಟಬಂದಂತೆ ತೀರ್ಮಾನ ಕೈಕೊಳ್ಳುವುದು, ವಿದ್ಯಾ ಇಲಾಖೆಯಲ್ಲಿ ನಡೆಯುತ್ತಿದೆ. ಹೀಗೆಲ್ಲಾ ಹದ್ದುಬಸ್ತಿಲ್ಲದೆ ವಿದ್ಯಾ ಇಲಾಖೆಯು ನಡೆದರೆ

(ಶ್ರೀಮತಿ ನಾಗರತ್ನಮ್ಮ ಹಿರೇಮಠ್)

ದೇಶದ ಗತಿ ಏನು ? ಶಿಕ್ಷಣದ ಗತಿ ಏನು ? ಎಂದು ನಾವು ಸಂಶಯಗ್ರಸ್ತರಾಗಿ ಪ್ರಶ್ನಿಸಬೇಕಾಗುತ್ತದೆ. ವಿದ್ಯಾ ಮಂತ್ರಿಗಳು ಉತ್ತರಕೊಡದಿದ್ದರೆ :

ಚಿಲಮಿಲಿಯೆಂದೋದುವ ಗಿಳಿಗಳಿರಾ
ನೀವು ಹೇಳುವಿರಾ, ಗಿರಿ ಗಹ್ವರಗಳಲ್ಲಿ
ನರ್ತಿಸುವ ನವಿಲುಗಳೇ, ನೀವು
ಹೇಳುವಿರಾ ? ವಿದ್ಯಾ ಇಲಾಖೆಗೆ ಬುದ್ಧಿ
ಬಂದು ಆಡಳಿತ, ಶಿಕ್ಷಣ, ಎಂದು
ಶುದ್ಧವಾಗುವುದೆಂಬುದನು ನೀವು ಹೇಳುವಿರಾ ?

ಎಂದು ಕಾಡಿನಲ್ಲಿರುವ ಪಕ್ಷಿಗಳನ್ನು ಪ್ರಶ್ನಿಸುತ್ತಾ ಹೋಗಬೇಕಾದೀತು !

ಬಹು ಮೇಧಾವಿಗಳಾದ ನಮ್ಮ ವಿದ್ಯಾ ಮಂತ್ರಿಗಳು ಅಂತಹ ಪ್ರಸಂಗವನ್ನು ತರಲಾರರೆಂದು ನಂಬಿದ್ದೇನೆ. ವೈಯ್ಯುಕ್ತಿಕವಾಗಿಯಾಗಲೀ, ಸಾಮಾಜಿಕ, ರಾಜಕೀಯ, ಧಾರ್ಮಿಕ, ಆರ್ಥಿಕವಾಗಿಯಾಗಲೀ, ಯಾವ ದೃಷ್ಟಿಯಿಂದಲೂ ಯಾವ ತತ್ವದಿಂದಲೂ ನನಗೆ ವೈಯ್ಯುಕ್ತಿಕವಾಗಿ ವಿದ್ಯಾ ಮಂತ್ರಿಗಳ ಮೇಲೆ ದ್ವೇಷವೇನೂ ಇಲ್ಲ ಎಂದು ಹೇಳಬಯಸುತ್ತೇನೆ. ಕಾರಣ ದೇಶದ ಹಿತದೃಷ್ಟಿಯಿಂದ ವಿದ್ಯಾ ಖಾತೆಯ ಉನ್ನತಿಯ ದೃಷ್ಟಿಯಿಂದ ನನ್ನ ವಿಮರ್ಶೆಗಳನ್ನು ಸ್ವಾಗತಿಸಲಿ, ತ್ಯಾಗ ಮಾಡುವ ಪ್ರಸಂಗ ಬಂದರೂ ಸರಿಯೆ, ಅದಕ್ಕೂ ತಯಾರಾಗಿ ದೇಶಕ್ಕೆ ವಿದ್ಯಾ ದಾನ ಮಾಡಿದ ಕೀರ್ತಿಗೆ ಭಾಗಿಗಳಾಗಲೆಂದು ವಿದ್ಯಾ ಸಚಿವರಿಗೆ ವಿನಂತಿಸುತ್ತೇನೆ.

ಶ್ರೀ ಸಿ. ಆರ್. ರಂಗೇಗೌಡ (ಮಾಗಡಿ).—ಪೂಜ್ಯಸಭಾಪತಿಗಳೇ, ಈ ದಿವಸ ನಮ್ಮ ಮುಂದೆ ವಿದ್ಯಾ ಸಚಿವರು ಇಟ್ಟಿರುವ ಬೇಡಿಕೆಗಳನ್ನು ಸ್ವಾಗತಿಸುತ್ತಾ ಕೆಲವು ಲೋಪದೋಷಗಳನ್ನು ಸರಕಾರದ ಗಮನಕ್ಕೆ ತರಲು ಇಚ್ಛಿಸುತ್ತೇನೆ. ಹಾಗೇ ನಾನು ಇಲ್ಲಿ ಕೊಟ್ಟಿರುವ ಸುಮಾರು 41 ಕಟ್‌ಮೋಷನ್ನುಗಳೇನಿವೆ ಅವೆಲ್ಲ Self-Explanatory ಆಗಿವೆ. ಅವುಗಳ ಬಗ್ಗೆ ಪೂರ್ಣ ಕಾಲವನ್ನು ಇಲ್ಲಿ ತೆಗೆದುಕೊಳ್ಳಲು ಇಷ್ಟಪಡುವುದಿಲ್ಲ. ಕೆಲವೇ ವಿಷಯಗಳನ್ನು ಮಾತ್ರ ಇಲ್ಲಿ ಸರಕಾರದ ಗಮನಕ್ಕೆ ತರಲು ಆಶಿಸುತ್ತೇನೆ. To Question the propriety of Government in refusing admission to the children of neighbouring village in the Chamarajasagar High School, T. G. Hallay, Magdi Taluk. ಈ ಬಗ್ಗೆ ಸರಕಾರದವರು ಒಂದು ಆರ್ಡರು ಮಾಡಿದರು. ಅದರಲ್ಲಿ ಹೀಗೆ ಹೇಳಲಾಗಿದೆ :—

" The Chief Engineer General has requested the Government to sanction the starting of an aided High School at Thippagondnanalli to the residents of Thippagondanahalli and roundabout villages."

ಇದರ ಬಗ್ಗೆ ಈ ಸಭೆಯಲ್ಲಿ ಒಂದು ಪ್ರಶ್ನೆ ಕೇಳಿದಾಗ ಅದಕ್ಕೆ ಮಾನ್ಯ ಆರ್ಥಿಕ ಸಚಿವರು ಈ ರೀತಿ ಉತ್ತರ ಹೇಳಿದರು.

"Public will have to think about it. There is a local advisory committee not only for children of Government servants but also children of roundabout villages."

ಈಚೆಗೆ ಈ ಸ್ಕೂಲಿಗೆ ಹಳ್ಳಿಯ ಮಕ್ಕಳನ್ನು ಸೇರಿಸಕೂಡದು ಬರೀ ಕಾಲೋನಿಯಲ್ಲಿರುವ ಅಧಿಕಾರಿಗಳ ಮಕ್ಕಳನ್ನು ಮಾತ್ರ ಸೇರಿಸಬೇಕೆಂದು ಒಂದು ಆರ್ಡರು ಮಾಡಿದ್ದಾರೆ. ಇದು ನೋಡಿದರೆ ಹೇಗಿದೆ ಎಂದರೆ ಯಾರೋ ಒಬ್ಬರು ಮುದುಕಿ ಹತ್ತಿರ ಒಂದು ಅಗ್ಗಿಷ್ಟಿಕೆ ಮತ್ತು ಒಂದು ಕೋಳಿ ಇದ್ದುವಂತೆ.

ಶ್ರೀ ಎಸ್. ಆರ್. ಕಂಠಿ.—ತಾವು ಹೇಳುವುದು ಸರಕಾರಿ ಆರ್ಡರೇ ಯೋಚನೆ ಮಾಡಿ ಹೇಳಿ. ಅದು ಸರಕಾರಿ ಆರ್ಡರು ಇರಲಿಕ್ಕಿಲ್ಲ. D.P.I. order ಇದ್ದರೆ ಹೇಳಿ. ಅದನ್ನು ನೋಡುತ್ತೇನೆ.

ಶ್ರೀ ಸಿ. ಆರ್. ಗಂಗೇಗೌಡ.—ನಾನು ಹೇಳಿದಂತೆ ಅಗ್ಗಿಷ್ಟಿಕೆ ಯಿಂದ ಅಡಿಗೆ ಮಾಡಿ ಊಟ ಮಾಡುತ್ತಾರೆ, ಕೋಳಿಯಿಂದ ಬೆಳಕು ಹರಿಯುವುದನ್ನ ನೋಡುತ್ತಾರೆ ಎಂದು ಕಾಡಿಗೆ ಹೋಗಿ ಅಲ್ಲಿ ಸೇರಿದಳಂತೆ. ಆದರೆ ಮುದುಕಿ ತಿಳಿದದ್ದು ಸರಿಯಲ್ಲವೆಂದು ನಂತರ ತಿಳಿದು ಬಂತು. ಅದರಂತೆ ಸರ್ಕಾರದ ಧೋರಣೆ ಬಹಳ ಕಷ್ಟಗಳಿಗೆ ಕಾರಣವಾಗುತ್ತಿದೆ. ಹಿಂದೆ ಸರಕಾರದ D.P.I. ಮೂಲಕ ಬಂದ ಆರ್ಡರು.

ಶ್ರೀ ಎಸ್. ಆರ್. ಕಂಠಿ.—ಡಿ.ಪಿ.ಐ. ಕಡೆಯಿಂದ ಬಂದ ಸರ್ಕ್ಯುಲರಿರಬಹುದು.

ಶ್ರೀ ಸಿ. ಆರ್. ರಂಗೇಗೌಡ.—ಸರಕಾರಕ್ಕೆ ಮಲ್ಲಾರಾಧ್ಯರವರು ಕೊಟ್ಟ pre-Primary Education Report of the Committee ಯ ರಿಪೋರ್ಟ್ ಸಲ್ಲಿಸಿದ್ದರೂ ಸರಕಾರ ಇದುವರೆಗೂ ಯಾವ ಕಾರ್ಯಕ್ರಮ ಕೈಗೊಳ್ಳುತ್ತಿದೆ ? ಪ್ರಾಥಮಿಕ ಶಾಲೆಗೆ ಆರುವರ್ಷ ಆದನಂತರ ಮಕ್ಕಳನ್ನು ಸೇರಿಸಿಕೊಳ್ಳುವುದು ಎಂದು ತೀರ್ಮಾನ ಮಾಡಿದ್ದಾರೆ. ಆರ ವರ್ಷಗಳೊಳಗಿರುವ ಮಕ್ಕಳನ್ನು ಪ್ರೈಮರಿ ಶಾಲೆಗಳಿಗೆ ಕಳುಹಿಸುವುದಕ್ಕೆಂದು ಮಾಡಿರುವ ಭಾಗದಲ್ಲಿ ನರ್ಸರಿ ಸ್ಕೂಲುಗಳನ್ನು ತೆರೆಯುವುದಾದರೆ ಬಹಳ ಒಳ್ಳೆಯದಾಗುತ್ತದೆ. The policy of Distributing Mid-day meal articles given by CARE organisation ;—

ಉಪಾಹಾರವೆಂದು ಶಾಲೆಗಳಲ್ಲಿ ಕೆಲವು ಕಡೆ ಕೊಡುತ್ತಾರೆ. ಕೆಲವು ಕಡೆ ಇಲ್ಲ. ನಮ್ಮ ತಾಲ್ಲೂಕಿನಲ್ಲಿ ಕೆಲವು ಸ್ಕೂಲುಗಳಿಗೆ ಕೊಟ್ಟಿರು. ಕೆಲವು ಕಡೆ ಉರ್ದು ಸ್ಕೂಲುಗಳಿಗೆ ಕೊಟ್ಟಿಲ್ಲ. ಇದರ ಬಗ್ಗೆ ಸರಕಾರ ತೀವ್ರ ಗಮನಕೊಡಬೇಕು. Location of large number of Primary Schools in Temples where Harijan children are not admitted: ಇದರ ಬಗ್ಗೆ ಹಿಂದೆ ಇಲ್ಲಿ ಒಂದು ಪ್ರಶ್ನೆ ಕೇಳಿದಾಗ ಉತ್ತರ ಕೊಟ್ಟರು—ದೇವಸ್ಥಾನಗಳಲ್ಲಿ 37 ಸ್ಕೂಲುಗಳು, ಬಾಡಿಗೆ ಕಟ್ಟಡಗಳಲ್ಲಿ 69 ಸ್ಕೂಲುಗಳು ನಡೆಯುತ್ತಿವೆ ಎಂದು ಹೇಳಿದ್ದಾರೆ. Division need for School Buildings-154, 363 ಹಳ್ಳಿಗಳಿರುವ ಈ ತಾಲ್ಲೂಕಿನಲ್ಲಿ ಎಷ್ಟು ಹಳ್ಳಿಗಳಲ್ಲಿ ಸ್ಕೂಲು ಕಟ್ಟಡ ಕೊಟ್ಟಿದ್ದಾರೆ. ಕಟ್ಟಡಗಳಿಲ್ಲದ ಕಡ್ಡಾಯ ಪ್ರಾಥಮಿಕ ಶಿಕ್ಷಣ ಜಾರಿಗೆ ತಂದಿರುವಾಗ ಎಷ್ಟು ಹುಡುಗರು ಬರುತ್ತಾರೋ ಅಷ್ಟು ಜನಕ್ಕೂ ಶಾಲಾ ಕಟ್ಟಡಗಳನ್ನು ಕಟ್ಟಲು ಅವರೂ ಮಾಡಿಕೊಡಬೇಕೆಂದು ಸರ್ಕಾರದಲ್ಲಿ ಸಲಹೆ ಮಾಡುತ್ತೇನೆ. The Administration in the Library Training School, Bangalore :—

ನನ ತಿಳಿದ ಮಟ್ಟಿಗೆ ಇಲ್ಲಿ ಎರಡು ಲಕ್ಚರರುಗಳು ಕಂಟ್ರಾಕ್ಟ್ ಬೇಸಿಸ್ಸಿನ ಮೇಲೆ ಮಾಡಬೇಕೆಂದಿದೆ. ಒಬ್ಬರು ಲಕ್ಚರರನ್ನು ಆಗಿರತಕ್ಕ ಗರ್ವನಮೆಂಟು ಆರ್ಡರ್ ಪ್ರಕಾರ 5 ವರ್ಷ ಕಾಲ ತಗೆದುಕೊಳ್ಳಬೇಕೆಂದಿದ್ದರೂ ಕೂಡ, ಒಂದೊಂದು ವರ್ಷಕ್ಕೆಂದು ಮುಂದುವರಿಸಿಕೊಂಡು ಬರುತ್ತಿದ್ದಾರೆ, ಏಕೆ ಒಂದೇ ಸಾರಿ ಮಾಡಿ ತೆಗದುಕೊಳ್ಳುತ್ತಿಲ್ಲ ಎನ್ನುವುದು ಇಲ್ಲಿ ಅರ್ಥವಾಗುತ್ತಿಲ್ಲ ಇನ್ನೊಬ್ಬರನ್ನು S. T. Collge, Belgaum, ರೀಜನಲ್ ಎಂಪ್ಲಾಯ್‌ಮೆಂಟು ಎಕ್ಸ್‌ಛೇಂಜಿನ ಕಾರ್ಡಿನ ಮೇಲೆ ನೇಮಕಮಾಡಿಕೊಂಡು ಇದ್ದವರನ್ನು ಟ್ರಂಕ್‌ಫೋನು ಕಾಲ್ ಮಾಡಿ ಇಲ್ಲಿಗೆ ಕರೆಸಿಕೊಂಡು ಇಲ್ಲಿ ಲಕ್ಚರರಾಗಿ ತೆಗೆದುಕೊಂಡಿದ್ದಾರೆ. ಸರಕಾರದ ನೀತಿ ನಿಯಮವಿಲ್ಲದೆ ಈ ಲಕ್ಚರರನ್ನು ಇಲ್ಲಯೇ ಕಂಟಿನ್ಯೂ ಮಾಡುತ್ತಿದ್ದಾರೆ. ಉತ್ತರ ಕೊಡುವ ಸಂದರ್ಭದಲ್ಲಿ ಕೂಲಂಕಷವಾಗಿ ಇದರ ವಿಚಾರವನ್ನು ತಿಳಿಸಬೇಕೆಂದು ಹೇಳುತ್ತೇನೆ.

ಶ್ರೀ ಎಸ್. ಆರ್. ಕಂಠಿ.—ಯಾವ ಲಕ್ಚರರುಗಳದ್ದು ?

ಶ್ರೀ ಸಿ. ಆರ್. ರಂಗೇಗೌಡ.—ಲೈಬ್ರರಿ ಟ್ರೇನಿಂಗು ಸ್ಕೂಲಿಗೆ S. T. Collge, Belgaum ನಿಂದ ಲೈಬ್ರರಿಯನ್ ಆಗಿದ್ದವರನ್ನು ತಂದು ಇಲ್ಲಿಗೆ ಕರೆಸಿಕೊಂಡು ಡೈರೆಕ್ಟಾಗಿ ನೇಮಕ ಮಾಡಿದ್ದಾರೆ. ಲೈಬ್ರರಿಯನ್ ಆಗಿದ್ದವರಿಗೆ ಲಕ್ಚರರಾಗಿ 250—300ರ ಗ್ರೇಡಿನಲ್ಲಿ ನೇಮಕ ಮಾಡುವುದು ಯಾವ ಸರಕಾರದ ನೀತಿ ಎಂದು ಇಲ್ಲಿ ಕೇಳುತ್ತಿದ್ದೇನೆ. ಗವರ್ನಮೆಂಟು ಆರ್ಡರನ್ನು ಕಳಿಸಿ. ಡಿ.ಪಿ.ಐ. ಕಡೆಯಿಂದ ಬಂದಿರುವ ಅಡ್ವರ್ಟೈಸ್‌ಮೆಂಟಿನಂತೆ, ರೆಟ್ರಾಸ್‌ಪೆಕ್ಟಿವ್ ಆಗಿ ಪ್ರಮೋಷನ್ನು ಕೊಡಬಹುದು ಎಂದು ಇವರಿಗೆ ಈಗಾಗಲೇ 600–700 ರೂಪಾಯಿಗಳ ವರೆಗೆ ಬರುತ್ತೆ.

ಶ್ರೀ ಎಸ್. ಆರ್. ಕಂಠಿ.—ತಾವು ಇದರ ವಿವರಗಳನ್ನು ನನಗೆ ಕೊಡಿ.

ಶ್ರೀ ಸಿ. ಆರ್. ರಂಗೇಗೌಡ.—To request the Government to find out a simpler method of finding out the income of the parents of the students seeking scholarships and freeships as the present method of obtaining certificate from the Tahsildar works hardships.

ಈ ಫ್ರೀಷಿಪ್ಪುಗಳ ಬಗ್ಗೆ ಈಗಾಗಲೇ ಮಾನ್ಯ ಸದಸ್ಯರಾದ ಶ್ರೀಮತಿ ರತ್ನಮ್ಮ ಮಾಧವ ರಾಯರೂ ಹೇಳಿದ್ದಾರೆ. 30 ರೂಪಾಯಿಗಳಷ್ಟು ತಿಂಗಳಾದಾಯ ಇರುವವರಿಗೆ ಸ್ಕಾಲರುಷಿಪ್ಪು

(ಶ್ರೀ ಸಿ. ಆರ್. ರಂಗೇಗೌಡ)

ಕೊಡುವಾಗ ಸರಕಾರ ನಿರ್ದಿಷ್ಟವಾದ ನಿಯಮಗಳನ್ನನುಸರಿಸಿ ಕೊಡುವಾಗ 30 ರೂಪಾಯಿ ಯಾರಿಗೆ ಆದಾಯವಿದೆ ಎನ್ನುವುದನ್ನು ಪಡೆಯಬೇಕಾದರೆ ಆಯಾ ಜಿಲ್ಲೆಯಲ್ಲಿನ ತಹಶೀಲ್‌ದಾರರುಗಳ ಬಳಿ ಸರ್ಟಿಫಿಕೇಟಿಗಾಗಿ ಕೊಡಿ ಎಂದು ಕೇಳಿದರೆ ಅವರು ಶ್ಯಾನುಭೋಗರ ಹತ್ತಿರ, ಆ ನಂತರ ಪಟೇಲರ ಹತ್ತಿರ ಎಂದು ಹೀಗೆ ಅಲೆಯಬೇಕಾಗಿ ಬರುತ್ತಿದೆ. ಇದಕ್ಕೆ ಬದಲು ಮಕ್ಕಳ ತಂದೆ ತಾಯಿಗಳೇ ಯಾವುದಾದರೂ ಸರಕಾರಿ ಅಧಿಕಾರಿಗಳ ಮುಂದೆ ಒಂದು ಡಿಕ್ಲರೇಷನ್ನು ಮಾಡಿ ಕೊಟ್ಟರೆ ಅನುಕೂಲವಾಗುವುದಿಲ್ಲವೇ ? ಈಗ ಇರುವಂತೆ ಮಕ್ಕಳೇ ಹೋಗಿ ಸರ್ಟಿಫಿಕೇಟು ತೆಗೆದು ಕೊಳ್ಳಬೇಕಾದರೆ ಅನೇಕ ಕಡೆ ಸುತ್ತಿ ಸುತ್ತಿ ತಿರುವುದು ಕಷ್ಟ ನಾನೇ ನೋಡಿರುವಂತೆ ಮಕ್ಕಳು ತಹಶೀಲುದಾರರಲ್ಲಿಗೆ ಹೋದಾಗ ಅವರು ಈ ಮಕ್ಕಳನ್ನು ನಾಯಿಯಂತೆ ಕಡೆಗಣ್ಣಿನಿಂದ ಕಾಣುತ್ತಾರೆ. ಈಗಿನ ಮಕ್ಕಳು ಮುಂದಿನ ಭವ್ಯ ಜನಾಂಗದ ಅಡಿಪಾಯ. ಸರ್ಟಿಫಿಕೇಟುಗಳನ್ನು ಬೇರೆ ಯಾವ ರೀತಿಯಿಂದ ಮಾಡಬಹುದು ಎನ್ನುವುದನ್ನು ಸರಕಾರ ಪರಿಶೀಲನೆ ಮಾಡಬೇಕು.

To request the Government to introduce extra curricular activities, etc., to the students of Middle and High School Classes.

ಈ ದಿವಸ ನಮ್ಮ ಸ್ಕೂಲುಗಳಲ್ಲಿರುವ ವ್ಯವಸ್ಥೆಯಂತೆ ಅಲ್ಲಿರುವ ಮಕ್ಕಳಿಗೆ ಅಕ್ಕಪಕ್ಕದಲ್ಲಿರುವ ತಾಲ್ಲೂಕಿನ ಸ್ಥಳಗಳಸ್ಥಿತಿಯೇ ಗೊತ್ತಿರುವುದಿಲ್ಲ. ತಾಲ್ಲೂಕುಗಳ ಮ್ಯಾಪುಗಳು ಇರುವುದಿಲ್ಲ. ತಾಲ್ಲೂಕಿನ ಮ್ಯಾಪುಗಳು ಸ್ಕೂಲುಗಳಲ್ಲಿದ್ದರೆ ಆ ತಾಲ್ಲೂಕಿನಲ್ಲಿರುವ ಮುಖ್ಯ ಪ್ರದೇಶಗಳಾವುವು ಎನ್ನುವುದನ್ನು ತಿಳಿದುಕೊಳ್ಳಬಹುದು. ಇಂತಹ ಪರಿಸ್ಥಿತಿಯೊಳಗೆ ಹೈಸ್ಕೂಲುಗಳಲ್ಲಿ ಹಾಗೂ ಮಿಡಲ್ ಸ್ಕೂಲುಗಳಲ್ಲಿ ಒಂದು ಮ್ಯಾಪಿನಂತಹ ಚಿತ್ರಪಟವಿದ್ದರೆ, ಮಕ್ಕಳಿಗೆ ಆ ಪ್ರದೇಶಗಳ ಸ್ಥಿತಿ ಗೊತ್ತಾಗುತ್ತದೆ. ತಾಲ್ಲೂಕಿನಲ್ಲಿರುವ ಅಕ್ಕಪಕ್ಕದ ಹಳ್ಳಿಗಳೂ ತಿಳಿಯುತ್ತವೆ. ಈಚೆಗೆ ಒಂದು ಪತ್ರಿಕೆ ನಾನು ಓದಿದಾಗ ಅದರಲ್ಲಿ ಉತ್ತರ ಪ್ರದೇಶದಲ್ಲಿನ ಸರಕಾರ ಏನು ಮಾಡಿದೆ ಎಂದು ನೋಡಿದರೆ ಆ ಉತ್ತರ ಪ್ರದೇಶದಲ್ಲಿ ಹೋಲಿಸಿ ನೋಡಿದರೆ ವರ್ಷಕ್ಕೆ ಸಲ ಸಲವೂ ಹಣಕಾಸಿನ ವರ್ಷದಲ್ಲಿ ಈ ಕಾರ್ಯಕ್ಕಾಗಿ ಒಂದು ಲಕ್ಷದ ಎಪ್ಪತ್ತೊಂಬತ್ತು ಸಾವಿರ ರೂಪಾಯಿಗಳಷ್ಟು ಅಲ್ಲಿರುವ ಎಲ್ಲ ಪ್ರದೇಶಗಳ ಬಗ್ಗೆ ತಿಳುವಳಿಕೆ ಕೊಡಲು ವೆಚ್ಚ ಮಾಡಲಾಗಿದೆ. ಹಾಗೆ ಈ ಸರಕಾರದವರೂ ಆಯಾ ತಾಲ್ಲೂಕಿನ, ಆಯಾ ಜಿಲ್ಲೆಯಲ್ಲಿರುವ ಪಟ್ಟಣಗಳನ್ನು ಸಂಸ್ಥಾನಾಮಳೆ ಇರುವ ಪಟ್ಟಣಗಳ ಪಟ್ಟಿಯನ್ನು ತಯಾರು ಮಾಡಿ ಎಲ್ಲಾ ಸ್ಕೂಲುಗಳಲ್ಲಿಯೂ ಇಟ್ಟರೆ ಪ್ರಕೃತಿ ಸೌಂದರ್ಯಗಳನ್ನು ನೋಡಿ ಕೊಳ್ಳುವುದಕ್ಕೆ ಒಂದು ಅವಕಾಶ ಮಕ್ಕಳಿಗೆ ಸಿಗುತ್ತದೆ.

The construction of Janamangala High School :—

ಶ್ರೀಮಾನ್ ಹನುಮಂತಯ್ಯನವರು ಹಿಂದೆ ಮುಖ್ಯ ಮಂತ್ರಿಗಳಾಗಿದ್ದಾಗ ಈ ಜನಮಂಗಲಕ್ಕೆ ಹೈಸ್ಕೂಲು ಕೊಟ್ಟರು. ಈ ಹೈಸ್ಕೂಲಿಗೆ ಈ ಗ್ರಾಮದವರು 30 ಸಾವಿರ ಹಾಗೂ ಸರಕಾರ 30 ಸಾವಿರ ಕೊಡಬೇಕೆಂದು ಆಗಿತ್ತು. ಆದರೆ ಗ್ರಾಮದವರು 20 ಸಾವಿರದಷ್ಟು ಕೊಟ್ಟಿದ್ದರು. ಉಳಿಕೆಯಾದುದನ್ನು ಕೊಡುವುದಕ್ಕಾಗಲಿಲ್ಲ. ಸರಕಾರದವರೇ ಹತ್ತು ಸಾವಿರದಷ್ಟು ಹೆಚ್ಚು ಕೊಡಲಿ ಎಂದರೂ ಕೊಡಲಿಲ್ಲ. ಈ ಸ್ಕೂಲಿಗೆ ಇನ್ನೂ ಹಣ ವೆಚ್ಚ ಮಾಡದಿರುವುದು ನೋಡಿದರೆ ಬಹಳ ಶೋಚನೀಯವಾಗಿದೆ. 20 ಸಾವಿರದಷ್ಟು ಹಣ ಜನ ಕೊಟ್ಟಿರುವುದರಿಂದ ಸರಕಾರ ತಕ್ಷಣ ಇನ್ನೂ 20 ಸಾವಿರದಷ್ಟು ವೆಚ್ಚ ಮಾಡಿ ಹಾಗೇ ಉಳಿದಿರುವ ಈ ಹೈಸ್ಕೂಲು ಕಟ್ಟಡದ ಕೆಲಸ ಮಾಡಲು ತಕ್ಕ ಕಾರ್ಯಕ್ರಮ ತೆಗೆದುಕೊಳ್ಳಲು ಗ್ರಾಮದವರಿಂದ ಕೆಲಸಗಳನ್ನೂ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಹೀಗೆ ಈ ಎನ್. ಇ. ಎಸ್. ಬಾಬಿನಲ್ಲಿರತಕ್ಕ ಸೋಷಿಯಲ್ ಎಜುಕೇಷನ್ನಿನ ಆಫೀಸರ ಮೇಲ್ವಿಚಾರಣೆ ಮಾಡತಕ್ಕವರು ಯಾರು ಇವರಿಗೆ ಯಾರು ತಂದೆ-ತಾಯಿಗಳೆಂಬುದೇ ಗೊತ್ತಾಗುತ್ತಿಲ್ಲ. ಇವರಿಗೆ ಯಾರೂ ನಿಗಾ ನೋಡಲು ದಿಕ್ಕು ದಿವಾಳಿಯಿಲ್ಲದಂತಾಗಿದೆ. ಆದರೆ ಮೈಸೂರು ಸರ್ಕಾರದವರು ಸೋಷಿಯಲ್ ಎಜುಕೇಷನ್ ಬೋರ್ಡ್ ಎಂತ ಒಂದು ಬೋರ್ಡನ್ನು ಮಾಡಿದ್ದಾರೆ. ಆದರೆ ಇದು ಎಷ್ಟು ಸಾರ್ತಿ ಮೀಟಿಂಗನ್ನು ಮಾಡಿದರೋ ಅದು ಗೊತ್ತಾಗುವಂತಿಲ್ಲ. ಇದೇ ವಿಚಾರದಲ್ಲಿ ನಾನು ಈ ಹಿಂದೆ ಕೂಡ ಬಹು ಕಟುವಾಗಿ ಟೀಕೆ ಮಾಡಿದ್ದೇನೆ. ಈಗ ಇಲ್ಲಿ ಹಗಲೇ ಕೃಷ್ಣಲೀಲೆ ನಡೆಯುತ್ತಿದೆಯೆಂದು ಜನರು ಆಡಿಕೊಳ್ಳುತ್ತಿದ್ದಾರೆ. ಇವರಿಗೆ ಕೊಟ್ಟಿರತಕ್ಕ ವ್ಯಾನು ಎಲ್ಲೆಲ್ಲಿಯೋ ತಿರುಗುತ್ತಿರುತ್ತದೆ ಎಂದು ಜನರು ನಾನಾ ರೀತಿಯಲ್ಲಿ ಮಾತನಾಡಿಕೊಳ್ಳುತ್ತಿದ್ದಾರೆ. ನಾನೂ ಸಹಾ ವಯಸ್ಕರ ಶಿಕ್ಷಣ ಸಮಿತಿಯಲ್ಲಿ ಕೆಲಸ ಮಾಡಿದ್ದೇನೆ. ಇದಕ್ಕೆ ಶ್ರೀ ಟಿ. ಮಾದಯ್ಯಗೌಡರೂ ಸೇವೆಯನ್ನು ಸಲ್ಲಿಸಿದ್ದಾರೆ. ಆದರೆ ನಾನು ಹೀಗೆ ಹೇಳುತ್ತಿರುವುದರಿಂದ ಅವರಿಗೆ ಮನ ನೋಯಬಹುದು.

'ಸ್ವಾಮಿ, ಇನ್ನು ಈಗ ಹೈಸ್ಕೂಲುಗಳಲ್ಲಿ ವ್ಯಾಸಂಗ ಮಾಡತಕ್ಕ ಸುಮಾರು ಶೇಕಡ 70-80 ಮಂದಿಗೆ ಉಚಿತ ವಿದ್ಯಾಭ್ಯಾಸವನ್ನು ಕೊಡಲಾಗುತ್ತಿದೆ. ಆದರೆ ಈ ಉಚಿತ ವಿದ್ಯಾಭ್ಯಾಸವನ್ನು ಇನ್ನುಳಿದ ವಿದ್ಯಾರ್ಥಿಗಳಿಗೂ ದೊರೆಯುವಂತೆ ಮಾಡಬೇಕೆಂದು ಸಲಹೆ ಮಾಡುತ್ತೇನೆ. ಇನ್ನು ಮಾಗಡಿ ತಾಲ್ಲೂಕಿನಲ್ಲಿ ಒಂದು ಸ್ಕೂಲು ಕಟ್ಟಡಕ್ಕಾಗಿ ಮಾಯನಾಯ್ಕನಹಳ್ಳಿ ಗ್ರಾಮದವರು 1947ರಲ್ಲಿ ಗ್ರಾಮಸ್ಥರಿಂದ ಹಣವನ್ನು ಸರ್ಕಾರದವರು ಕಟ್ಟಿಸಿಕೊಂಡು ಆ ಸ್ಕೂಲನ್ನಿನ್ನೂ ಮಾಡಿಸಿಲ್ಲ. ಇದನ್ನು ಕೂಡಲೇ ಕಟ್ಟಿಸಿಕೊಡಬೇಕೆಂದು ಹೇಳುತ್ತೇನೆ. ಸರ್ಕಾರದವರು ಇದರ ಬಗ್ಗೆ ಸುಮ್ಮನಿರುವುದು ಬಹಳ ಶೋಚನೀಯ. ಇನ್ನು ನಮ್ಮ ತಾಲ್ಲೂಕಿನಲ್ಲಿ ಒಂದು ಕಾರ್ಯಕ್ರಮವನ್ನು ಈ ವರ್ಷಾರಂಭದಲ್ಲಿ ನಡೆಸಿದರು. ಅದೇನೆಂದರೆ ಪಠ್ಯ ಪುಸ್ತಕಗಳನ್ನು ಬಡ ಹುಡುಗರಿಗೆ ಹಂಚುವುದು, ಆದರೆ ಈ ಕಾರ್ಯವನ್ನು ವರ್ಷದ ಕೊನೆಯಲ್ಲಿ ಕೈಗೊಂಡರೆ ಇದರಿಂದ ಬಂದ ಪುರುಷಾರ್ಥವೇನು ? ಮಾನ್ಯ ಅಧ್ಯಕ್ಷರು ನನಗೆ ಮಾತನಾಡಲು ಇಷ್ಟು ಅವಕಾಶವನ್ನು ಮಾಡಿಕೊಟ್ಟದ್ದಕ್ಕಾಗಿ ಅವರಿಗೆ ನನ್ನ ವಂದನೆಗಳನ್ನರ್ಪಿಸಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

Sri K. S. SURYANARAYANA RAO (Mysore City).—Sir, I wish to support the Demand for the grant uuder this head. While doing so, I would like to offer a few suggestions for the consideration of the Government. Sir, if we look at the progress achieved during the Third Plan period in the field of education, it is something marvellous. It was originally intended that primary education may not attract more than sixty per cent of the schoolgoing children. But our experience has shown that out of the children of school going age — the attendance is up to 80 per cent of the enrolment. It is a thing which the Government will have to be congratulated for the bold step taken. But the criticism that we are hearing is all because that this heavy enrolment will have to be stablised. Therefore, what I would earnestly suggest to Government is that though primary education has been a success, if it should yield proper results, then it must be stablised during the rest of the period of the Third Five Year plan.

Sir, likewise in the high schools also. There are more schools than what is probably intended under the Third Five Year Plan. In a way it is good that we have started in the third year of the plan itself the actual number of schools which are to be started in the plan period. If the Government finds funds to stablise these institutions instead of now phasing them for all the rest of the period of the five year plan, it will be good. Sir, the several criticisms that I heard on the floor of the House about high schools is because there has been inadequate building, accommodation and eqipment. Sir, it is not that the Government were not aware. Circulars have been issued that due to unprecedented entry into high schools, school could be run on a shift basis. Schools are being run on a shift basis. But this should not continue for long. I only earnestly request the Government to see that proper accommodation is made available to such of the schools which are started and to give them sufficient assistance and aid and guidance so that those schools may get permanent recognition during the plan period. I would however like to make a small suggestion for the consideration of the Government. The Government said that they would give permission to start a high school but recognition would come later if the school fulfils all the conditions prescribed. I would say that this would cause hardship for the students because, the management, for reasons better known to themselves may not be able to equip the schools properly and if recognition is not given to

(SRI K. S. SURYANARAYANA RAO)

such schools at the end of the year, it would cause hardship to the children who have undergone training in these schools. Therefore, even before the starting of the school or issuing of permission, necessary conditions may be imposed and necessary pre-requisites prescribed, and only when such conditions are fulfilled, then permissions given and affiliation or recognition given after a proper investigation and enquiry. If that is done, possibly much of the criticism will have been overcome.

What I would mention is, that so far as accommodation is concerned, at least, as a beginning, I would request the Government to consider providing accommodation to Government schools at the first instance because even Government schools are not properly equipped. One instance, I would like to mention, is, in a high school in Kunigal there are 1400 children and in the middle school 1,200 children, and there are hardly 12 rooms. It only shows that even Government schools are overcrowded and they are being run on shifts. Atleast the Government schools have better accommodation, because the Government school should be a model to other schools. On the other hand, what has happened is this. It is the private schools that are becoming more model schools rather than Government schools. That should not happen. Government schools should be a standard which every other school should follow. Therefore in that direction, I request that additional accommodation may be made available to Government schools, to start with, and to extend possibly the aid later on to other schools. Of course, the Hon'ble Education Minister may be very generous. But it is unfortunate that the local body or the Government will be rather reluctant to give sites to those schools which are willing to build school buildings. This should not happen. Government should be as liberal as the Education Minister is in giving sites for school buildings and create necessary atmosphere for the school to run well. We do not have proper school buildings ; we do not have proper environment and we do not have proper equipment. For all these, if the Government is not liberal, then it is not very desirable to have an expansion on such a large scale.

While speaking on this subject, I would like to speak a few words on what Government is proposing to do regarding the nationalisation of text books. They have been thinking of having their own printing press and printing their textbooks for the poor children and the distribution of these text books. It is all good. But the difficulty today is this. Even such of the text books that are nationalised and prescribed are not of a particular standard. Even they are of a poor quality. I have seen some of the books. In the form, it may be good. The technique is allright. But the content is not up to the standard.

6-00 P.M.

Therefore the substance or content is as important, perhaps more important, than the form. I suggest that while they make copies, they may go through this and improve the contents.

Sri S. R. KANTHI.—May I say that the Government of India are issuing model textbooks for our guidance. After they give these textbooks which are now nationalsed they will be compared and improved.

Sri K. S. SURYANARAYANA RAO.—That is a guidance and it is allright. What I have been trying to explain is, in order to have better content and also form, you must go through them. You must enlarge your own research section or textbook section and have more qualified men and have a better look at these things. So far as the other text books that are being selected, I am afraid they are not up to the standard. Much can be said about these selections. However much the Government may try to curb the malpractices it is very difficult. The only way is to nationalise such of the books which are in great demand, books like Chemistry, Phyics, etc. They should be published by the Government. Otherwise the private man would somehow or other get in and take advantage. I know the Education Minister or the topmost people in the administration may not be able to look into these things.

The other thing is about the stores purchase. I am sorry I have to say that the stores purchase system followed is not helpful. Sometimes it appears as though they are favouring a few. You can have a catalogue of firms on the approved list and insist on buying from them. I hope the Government will look into.

It is a happy thing that today we are having a technical man in charge of administration of education. Education should not be in the hands of administrative services. Much is said about the administrative services being able to do anything. But at least with regard to this department more technical persons are required and I believe they will strengthen their number to the extent poossible.

The other point I would like to mention in this connection before I go to university and colleges, is the teacher's training. In matters of undergraduate teacher training, I am sorry to state that efforts have not been made to the extent expected. Here what is happening is even for some efforts made by private sector at the undergraduate teacher training level, we are not getting any grant. We have been urging on the Government and I do not know when they will find means to help them. Unless undergraduate teacher training course is helped, primary education will not be of the required quality. Therefore the teachers of primary education must be given a better deal; they will have to be trained and they are the persons required in the largest bulk. Therefore, primary education teacher training should be given some more encouragement and I request the Government to help these institutions. The other point is about the technical colleges. Technical colleges, engineering or polytechnic must be under the guidance of technical persons. To-day we are not giving as much attention to the administration of these several colleges and polytechnics and the consequent result is that though there is heavy intake the result is not encouraging and even those that are coming out of these institutions may not be of high standard. Because of the vastness of the field,

(SIR K. S. SURYANARAYANA RAO)

because of the huge organisation, it became difficult for the administration to look into these things. I have brought one to the notice of the Minister and hope and he will take action. To mention by way of explanation, in the K. R. Technical Institute there has been some promotions and the promotions are challenged in the High Court. I do not want to go into it. But what has happened is, the work has suffered. So the person who ought to have done the job is not doing because a person who is not qualified has been preferred. Possibly due to the good offices of the Minister the work is going on now. But this should not happen because all these things may not come to the notice of the Government unless some of us bring it to their notice. Therefore, in order to give better attention to this, I wish there is a Technical Education Board and if there is one such, it will have to be reorganised and if there is none, it will have to be constituted. If that is done, they will be in the know of these things and they will be in a better position to advise the Government in the matter of any shortcomings in the branches.

Lastly I would come to the collegiate education. I am happy that engineering colleges and other colleges have come up in the State and a large number of technical men are coming out of these institutions. I would like to say one thing about the problem of post-graduate institutions. Today what is happening is the post graduates that we are turning out have absolutely no link with the life of today. A socio-economic survey will have to be done and these post-graduate students will have to be given necessary statistics and information and asked to work out several sociological problems that we are facing today. If those technical men highly qualified men, can give attention to these socio-economic problems possibly they will have done a good work. Today what is done is, there is absolutely no link to the actual life outside. Therefore I suggest that there will have to be a department of statistics and they should have specific issues framed and analyse them and then they should give for the working up to the teachers or to the post-graduate teachers, who themselves can undertake this survey. They must produce research papers.

I congratulate the Government for the Bangalore University that has to come up shortly. We were not hopeful about it because of the emergency. Particularly the Education Minister has laboured much to get the University for Bangalore. Otherwise during the Third Plan we would have lost it. With these words I thank the Chair.

†ಶ್ರೀ ಎಚ್. ಆರ್. ಕೇಶವಮೂರ್ತಿ.—ಮಾನ್ಯ ಅಧ್ಯಕ್ಷರೇ ವಿದ್ಯಾ ಶಾಖೆಯ ಬಡ್ಜೆಟ್ಟು ಒಂದು ಸಂತೋಷದಾಯಕವಾದ ಬಡ್ಜೆಟ್ಟು. ಈ ಬಡ್ಜೆಟ್ಟಿನಲ್ಲಿ ಹಣವನ್ನು ಒದಗಿಸಿರುವುದು ನೋಡಿದರೆ ಯಾವುದೋ ಉಪಯೋಗವಿಲ್ಲದ ಬಾಬುಗಳಿಗೆ ಹಣವನ್ನು ಒದಗಿಸಿರುವುದನ್ನು ನಾವು ನೋಡುತ್ತಿದ್ದೇವೆಯೇ ಹೊರತು ಇದರಲ್ಲಿ ಪ್ರಗತಿಯ ಕುರುಹೇನೂ ನಾವು ಕಾಣುತ್ತಿಲ್ಲ. ವಿದ್ಯಾ ಸಚಿವರು ಈ ಬೇಡಿಕೆಗೆ ನಮ್ಮ ಒಪ್ಪಿಗೆಯನ್ನು ಪಡೆದು ಅವರ ಮನಸ್ಸು ಬಂದ ಹಾಗೆ ಖರ್ಚು ಮಾಡುವುದಕ್ಕೆ ಈ ಬಡ್ಜೆಟ್ಟಿನಲ್ಲಿ ಅವಕಾಶವನ್ನು ಕಲ್ಪಿಸಿಕೊಂಡಿದ್ದಾರೆ ಎಂದು ನಾವು ಹೇಳಬಹುದು. ಈ ಬಡ್ಜೆಟ್ಟನ್ನು ನಾವು ಕೂಲಂಕಷವಾಗಿ ಐಟಮ್‌ವಾರು ವಿಮರ್ಶೆ ಮಾಡಿದರೆ ಎಲ್ಲಾ ವಿಷಯಗಳೂ

ಚೆನ್ನಾಗಿ ಗೊತ್ತಾಗುತ್ತವೆ. ಜನರಲ್ ಎಜುಕೇಷನ್ ಎಂದು ಹೊಸದಾಗಿ ಒಂದು ಐಟಮ್ ಅನ್ನೇ ಕ್ರಿಯೇಟ್ ಮಾಡಿಕೊಂಡಿದ್ದಾರೆ. ಅದಕ್ಕೆ 4 ಕೋಟಿ 51 ಲಕ್ಷ 200 ರೂಪಾಯಿಗಳನ್ನು ಒದಗಿಸಿದ್ದಾರೆ. ಹೋದ ವರ್ಷ 2 ಕೋಟಿ 64 ಲಕ್ಷ ಚಿಲ್ಲರೆ ರೂಪಾಯಿ ಇತ್ತು. 1962-63, 1963-64 ರಲ್ಲಿ 2 ಕೋಟಿ 24 ಲಕ್ಷ ರೂಪಾಯಿಗಳು ಇತ್ತು. ಅದನ್ನು ಈ ವರ್ಷ ಒಂದೇ ಸಾರ್ತಿಗೆ 2 ಕೋಟಿ ರೂಪಾಯಿಗಳನ್ನು ಜಾಸ್ತಿ ಮಾಡಿದ್ದಾರೆ. ಏತಕ್ಕೋಸ್ಕರ ಆ ರೀತಿ ಮಾಡಿಕೊಂಡಿದ್ದಾರೆಂದರೆ ಗ್ರಾಂಟನ್ನು ಮನಸ್ಸಿಗೆ ಬಂದ ಹಾಗೆ ಖರ್ಚು ಮಾಡುವುದಕ್ಕೆ ಮಾಡಿಕೊಂಡಿದ್ದಾರೆ. ಒಟ್ಟಿನಲ್ಲಿ ತಮ್ಮ ಪ್ರಭಾವವನ್ನೂ ತಮ್ಮ ಪಕ್ಷದ ಪ್ರಭಾವವನ್ನೂ ದೇಶದ ಮೇಲೆ ಬೀರುವುದಕ್ಕೆ ಈ ಒಂದು ಸಾಧನವನ್ನು ಮಾಡಿಕೊಂಡಿದ್ದಾರೆ. ಇದನ್ನು ತಮ್ಮ ಗಮನಕ್ಕೆ ತರುವುದಕ್ಕೆ ಇಚ್ಛಿಸುತ್ತೇನೆ. ಇವೊತ್ತಿನ ದಿವಸ ವಿದ್ಯಾ ಪ್ರಗತಿ ಯಾವ ಮಟ್ಟದಲ್ಲಿ ನಮ್ಮ ದೇಶದಲ್ಲಿದೆ ಎಂಬುದನ್ನು ಅಳತೆ ಮಾಡಬೇಕು. ನಮ್ಮ ದೇಶದ ಪ್ರಗತಿಯನ್ನು ಅಳತೆ ಮಾಡಬೇಕಾದರೆ ವಿದ್ಯಾ ಪ್ರಗತಿ ಬಹಳ ಮುಖ್ಯವಾದದ್ದು. ಇಡೀ ಇಂಡಿಯಾ ದೇಶದಲ್ಲಿಯೇ ಮೈಸೂರು ಮಾಡಲ್ ಸ್ಟೇಟ್ ಎಂದು ಹೇಳುತ್ತಾರೆ. ಇದಕ್ಕೆ ಕಾರಣವೇನೆಂಬುದನ್ನು ಆಲೋಚನೆ ಮಾಡಬೇಕು. ಇಂಥಾ ಒಂದು ಮಾದರೀ ಸಂಸ್ಥಾನ ಎಂಬ ಹೆಸರನ್ನು ಉಳಿಸಿಕೊಳ್ಳಲು ನಮ್ಮ ವಿದ್ಯಾ ಸಚಿವರು ಏನೇನು ಪ್ರಯತ್ನಗಳನ್ನು ಮಾಡುತ್ತಿದ್ದಾರೆ ಎಂದು ನಾನು ಕೇಳುತ್ತೇನೆ. ಮೊನ್ನೆ ವಿದ್ಯಾ ಸಚಿವರು ಡಿಲ್ಲಿಗೆ ಹೋಗುತ್ತೇನೆ. ಏನೊ ಹಣವನ್ನು ತರುತ್ತೇನೆಂದು ಹೇಳಿದ್ದರು. ಆದರೆ ಈಗ ಅವರು ಡಿಲ್ಲಿಗೆ ಹೋಗಿ ಫಂಡ್ ತೆಗೆದುಕೊಂಡು ಬಂದಿರುವುದನ್ನು ನೋಡಿದರೆ ಹಿಮಾಲಯಕ್ಕೆ ಹೋಗಿ ಇಲ್ಲಿ ಹಿಡಿದುಕೊಂಡು ಬಂದ ಹಾಗೆ ಸ್ವಲ್ಪ ಹಣವನ್ನು ತೆಗೆದುಕೊಂಡು ಬಂದಿದ್ದೇವೆಂದು ಹೇಳುತ್ತಾರೆ.

ಶ್ರೀ ಎಸ್. ಆರ್. ಕಂಠಿ.—ನಾನು ಎಷ್ಟು ಹಣವನ್ನು ತಂದಿದ್ದೇನೆ ಎನ್ನುವುದನ್ನು ಹೇಳುವ ಹಾಗಿಲ್ಲ.

ಶ್ರೀ ಎಚ್. ಆರ್. ಕೇಶವಮೂರ್ತಿ.—ಆದರೆ ನಾನು ಈ ವಿದ್ಯಾ ಖಾತೆಯ ವಿಷಯದಲ್ಲಿ ಇಷ್ಟು ಮಾತ್ರ ಹೇಳುತ್ತೇನೆ. ಈ ವಿದ್ಯಾ ಖಾತೆಯಲ್ಲಿ ಏನೊಂದು ಪ್ರಗತಿ ಆಗಬೇಕಾಗಿತ್ತೋ ಅದು ಆಗಿಲ್ಲ. ಮತ್ತು ಈ ವಿದ್ಯಾ ಪ್ರಗತಿಯಲ್ಲಿ ಸತ್ಯ ಸಂಪ್ರದಾಯದಿಂದ ಕೂಡಿದಂತಹ ಸಮೀಕರಣ ಆಗಿಲ್ಲ. ಮತ್ತು ಈ ಇಲಾಖೆಯಲ್ಲ ದುಡ್ಡನ್ನು ಖರ್ಚು ಮಾಡತಕ್ಕಂಥ ವಿಧಾನ ಏನಿದೆಯೋ ಅದು ಒಳ್ಳೆಯ ಸಂಪ್ರದಾಯದಿಂದ ಕೂಡಿಲ್ಲ, ಎಂದು ಮಾತ್ರ ಹೇಳಬಹುದು. ಈಗ ಉದಾಹರಣೆಗೆ ಹೇಳಬೇಕಾದರೆ ಈಗಿನ ವಿದ್ಯಾ ಮಂತ್ರಿಗಳು ತಮ್ಮ ಕಾಲದಲ್ಲಿ ಅನೇಕ ಹೈಸ್ಕೂಲುಗಳನ್ನೇನೋ ಕೊಟ್ಟಿದ್ದಾರೆ. ಅದಕ್ಕಾಗಿ ನಾನು ಅವರಿಗೆ ಶ್ಲಾಘನೆಯನ್ನು ಮಾಡುತ್ತೇನೆ. ಈಗ ಒಂದು ಮನೆಯಲ್ಲಿ ತಂದೆ ತಾಯಿಗಳು ತಮಗೆ ಬೇಕಾದಷ್ಟು ಮಕ್ಕಳನ್ನು ಪಡೆದುಕೊಂಡು ಆ ಮಕ್ಕಳು ಬರೀ ಮೈಯ್ಯಲ್ಲಿ ಓಡಾಡುತ್ತಿದ್ದರೆ ಆ ತಂದೆ ತಾಯಿಗಳಿಗೆ ಎಷ್ಟು ಅಗೌರವವಾಗುತ್ತದೆ ಎಂಬುದನ್ನು ಆಲೋಚನೆ ಮಾಡಬೇಕು. ಅದೇ ರೀತಿ ನಮ್ಮ ವಿದ್ಯಾ ಮಂತ್ರಿಗಳು ಹೈಸ್ಕೂಲುಗಳನ್ನು ಕೊಟ್ಟು ಅವುಗಳಿಗೆ ಗ್ರಾಂಟನ್ನು ಕೊಡದೆ ಹೋದರೆ ಅವು ಹೇಗೆ ಬದುಕಿಕೊಳ್ಳುತ್ತವೆ, ಹೇಗೆ ನಡೆಯುತ್ತವೆ ಎಂಬುದನ್ನು ಯೋಚನೆಮಾಡಬೇಕು.

ಶ್ರೀ ಎಸ್. ಆರ್. ಕಂಠಿ.—ನೀವೇ ಆ ರೀತಿ ಒಪ್ಪಿಕೊಂಡು ಬರೆದು ಕೊಟ್ಟಿದ್ದೀರಿ ಅದಕ್ಕೋಸ್ಕರ ಅದು ಹಾಗೆ ಆಗಿದೆ.

ಶ್ರೀ ಎಚ್. ಆರ್. ಕೇಶವಮೂರ್ತಿ.—ಮೊದಲು ಸ್ಕೂಲು ಕೊಡಲಿ ಆಮೇಲೆ ನೋಡೋಣ ಎಂದು ಆ ರೀತಿ ಬರೆದು ಕೊಟ್ಟಿದೆ. ಈಗ ಸ್ಕೂಲು ಕೊಟ್ಟ ಮೇಲೆ ಅದಕ್ಕೆ ಗ್ರಾಂಟು ಕೊಡುವುದು ಧರ್ಮ ಅಲ್ಲವೇ ? ಈಗ ಒಂದು ಉದಾಹರಣೆಯನ್ನು ಹೇಳುತ್ತೇನೆ. ಈಗ ನಾವು ಎಲ್ಲಿಗಾದರೂ ಪ್ರಯಾಣ ಮಾಡುವಾಗ ಮೊದಲು ಬಸ್ಸಿನಲ್ಲಿ ಸೀಟು ಕೊಡು ಎಂದು ಕಂಡಕ್ಟರನ್ನು ಕೇಳುತ್ತೇವೆ. ಆ ಮೇಲೆ ಒಳಗಡೆ ಹೋದ ಮೇಲೆ ಸ್ವಲ್ಪ ಹೊತ್ತು ನಿಂತುಕೊಂಡಿದ್ದು ಆ ಮೇಲೆ ಯಾರ ಪಕ್ಕದಲ್ಲಾದರೂ ಸ್ವಲ್ಪ ಜಾಗ ಕೊಡಿ ಎಂದು ಕೇಳಿ ಪಕ್ಕದಲ್ಲಿ ಕುಳಿತುಕೊಳ್ಳುತ್ತೇವೆ. ಅದೇ ರೀತಿ ಮೊದಲು ಸ್ಕೂಲನ್ನು ಕೊಡಲಿ ಎಂದು ಅವರು ಆ ರೀತಿ ಬರೆದು ಕೊಟ್ಟಿದ್ದಾರೆ. ಈ ಸ್ಕೂಲುಗಳನ್ನು ಕೊಡುವ ವಿಷಯದಲ್ಲಿಯೂ ಸಹ ತಮ್ಮ ಮನಸ್ಸಿಗೆ ಬಂದ ಹಾಗೆ ಕೊಟ್ಟಿದ್ದಾರೆ. ಯಾವ ಯಾವ ಕ್ಷೇತ್ರಗಳಿಗೆ ಕೊಡಬೇಕು, ಎಲ್ಲಿ ಸ್ಕೂಲುಗಳ ಅಗತ್ಯ ಇದೆ, ಎಲ್ಲಿ ಅಗತ್ಯವಿಲ್ಲ ಎಂಬುದನ್ನು ತಿಳಿದುಕೊಂಡು ಸ್ಕೂಲುಗಳನ್ನು ಕೊಟ್ಟಿಲ್ಲ. ಈ ವಿಷಯದಲ್ಲಿ ಬಹಳ ಅನ್ಯಾಯ ಮಾಡಿದ್ದಾರೆ. ವಿದ್ಯಾ ಸಂಸ್ಥೆಗಳನ್ನು ಹಂಚಿರತಕ್ಕ ಮಾರ್ಗ ಸಾಧುವಾದದ್ದಲ್ಲ. ಇನ್ನು ಮುಂದಾದರೂ ಮಾನ್ಯ ವಿದ್ಯಾ ಸಚಿವರು ಎಲ್ಲಿ ಹೆಚ್ಚು ಶಾಲೆಯ ಅಗತ್ಯವಿರುತ್ತದೆಯೋ ಅಂಥಾ ಕಡೆಗೆ ಶಾಲೆಗಳನ್ನು ಕೊಡಬೇಕೆಂದು ಹೇಳುತ್ತೇನೆ. ಈಗ ನನ್ನ ಹತ್ತಿರ ಒಂದು ಲಿಸ್ಟ್ ಇದೆ. ಬೇಕಾದರೆ ತೋರಿಸುತ್ತೇನೆ. ಗ್ರಾಂಟ್ ಇನ್-ಏಯ್ಡ್ ರೂಲ್ಸ್ ಪ್ರಕಾರ ಯಾವ ಪ್ರದೇಶಕ್ಕಾದರೂ ಒಂದು ಸ್ಕೂಲನ್ನು ಕೊಡಬೇಕಾದರೆ ಅಲ್ಲಿ ಕೊನೆಯ ಪಕ್ಷ 15 ಹುಡುಗರಾದರೂ ಇರಬೇಕು ಅಂಥಾ ಕಡೆಗೆ ಶಾಲೆಯನ್ನು ಕೊಡಬೇಕೆಂದು ಇದೆ. ಈಗ ಅನೇಕ ಕಡೆ

(ಶ್ರೀ ಎಚ್. ಆರ್. ಕೇಶವಮೂರ್ತಿ)

13 ಜನ ವಿದ್ಯಾರ್ಥಿಗಳಿದ್ದರೂ ಅಂಥಾ ಕಡೆ ಹೈಸ್ಕೂಲನ್ನು ನಡೆಸಿಕೊಂಡು ಬರುತ್ತಿದ್ದಾರೆ. ಅವರಿಗೆ ಗ್ರಾಂಟನ್ನೂ ಸಹ ಸರ್ಕಾರದವರು ಕೊಡುತ್ತಿದ್ದಾರೆ. ಆದರೆ ಬೇರೆ ಕಡೆ ಆ ರೀತಿ ಕೊಟ್ಟಿಲ್ಲ. ಈಗ ಉದಾಹರಣೆಗೆ ಹೇಳುವುದಾದರೆ ಗಂಡಸಿಗೆ ಒಂದು ಹೈಸ್ಕೂಲನ್ನು ಕೊಟ್ಟಿಲ್ಲ. ಹೆಣ್ಣು ಮಕ್ಕಳ ದೃಷ್ಟಿಯಿಂದಲಾದರೂ ಊರಿನ ಪಕ್ಕದಲ್ಲಿ ಸ್ಕೂಲು ತೆರೆಯುವುದಕ್ಕೆ ಪ್ರೋತ್ಸಾಹ ಕೊಡಬೇಕೋ ಅಥವಾ ಕಾಡಿನಲ್ಲಿ ಸ್ಕೂಲು ತೆರೆಯುವುದಕ್ಕೆ ಪ್ರೋತ್ಸಾಹ ಕೊಡಬೇಕೋ ಎಂಬುದನ್ನು ಯೋಚನೆ ಮಾಡಿರಿ. ಊರಿನ ಪಕ್ಕದಲ್ಲಿ ಇದ್ದದ್ದನ್ನು ಕಿತ್ತು ಹಾಕಿ ಕಾಡಿಗೆ ಹಾಕಿದ್ದಾರೆ.

ಶ್ರೀ ಎಸ್. ಆರ್. ಕಂಠಿ.—ಮೊದಲು ಅವರು ಬೇಡಿದರು ಅವರಿಗೆ ಕೊಟ್ಟೆವು. ಆ ಮೇಲೆ ನೀವು ಬೇಡಿದರೆ ಏನು ಮಾಡುವುದಕ್ಕಾಗುತ್ತದೆ?

ಶ್ರೀ ಎಚ್. ಆರ್. ಕೇಶವಮೂರ್ತಿ.—ನಾನು ಸತ್ಯವಾಗಿ ಹೇಳುತ್ತೇನೆ. ಈ ಸಭೆಯಲ್ಲಿ ಸುಳ್ಳು ಹೇಳಬಾರದು. ಸರ್ಕಾರದವರ ಆರ್ಡರ್ ಪ್ರಕಾರ ನಾವು ಹೈಸ್ಕೂಲನ್ನು ಶುರು ಮಾಡಿದೆವು. ಈಗ ಆ ಸ್ಕೂಲು ನಡೆಯುತ್ತಿದೆ. ಆ ಸ್ಕೂಲನ್ನು ಕೊಡುವುದಕ್ಕೂ ಸಹ ಆ ವಿಷಯ ಈ ಸಭೆಯಲ್ಲಿ ಚರ್ಚೆಗೆ ಬಂದು ಅನಂತರ ಆ ಸ್ಕೂಲನ್ನು ಕೊಟ್ಟರು. ಈಗ ಆ ಸ್ಕೂಲಿಗೆ ಗ್ರಾಂಟನ್ನು ಕೊಡುತ್ತಿಲ್ಲ. ಅದಕ್ಕೆ ಸರ್ಕಾರದವರು ಗ್ರಾಂಟನ್ನು ಕೊಡದಿದ್ದರೆ ಅದು ಉಳಿಯಬೇಕೋ ಹಾಳಾಗಬೇಕೋ?

ಶ್ರೀ ಎಸ್. ಆರ್. ಕಂಠಿ.—ಆ ಕಂಡೀಷನ್ನಿಗೆ ನೀವು ಮೊದಲು ಒಪ್ಪಿ ಬರೆದು ಕೊಟ್ಟಿದ್ದೀರಿ, ಅದರಲ್ಲಿ 3ವರ್ಷದ ಕಂಡೀಷನ್ ಇದೆ.

ಶ್ರೀ ಎಚ್. ಆರ್. ಕೇಶವಮೂರ್ತಿ.—ಆ ಕಂಡೀಷನ್ ಇಲ್ಲ ಒಂದು ವರ್ಷ ಮಾತ್ರ ಗ್ರಾಂಟು ಕೊಡುವುದಕ್ಕಾಗುವುದಿಲ್ಲ, ಆಮೇಲೆ ಕೊಡುತ್ತೇವೆ ಎಂದು ಹೇಳಿದ್ದೀರಿ. No mention is made in the original Government letter whether the school is entitled to departmental grant. Hence this question may please be clarified to admit the claim of the management.

ಇನ್ನೊಂದು ವಿಷಯ. ಈಗ ಬೆಂಗಳೂರಿನಲ್ಲಿ ಹೋಮ್ ಸೈನ್ಸ್ ಶಾಲೆಯನ್ನು ಸ್ಥಾಪನೆ ಮಾಡಿದ್ದಾರೆ. ಇದು ಬಹಳ ಸಂತೋಷ. ಈ ವಿಷಯದಲ್ಲಿ ನನ್ನ ಕೋರಿಕೆ ಏನೆಂದರೆ ಇದು ಹೆಣ್ಣು ಮಕ್ಕಳಿಗೆ ಬಹಳ ಮುಖ್ಯವಾದದ್ದು. ಆದ್ದರಿಂದ ಇಂಥಾ ಶಾಲೆಗಳನ್ನು ಪ್ರತಿ ಡಿಸ್ಟ್ರಿಕ್ಟ್ ಹೆಡ್ ಕ್ವಾರ್ಟರ್ಸ್‌ನಲ್ಲಿ ಒಂದೊಂದು ಶಾಲೆಯನ್ನು ಸ್ಥಾಪನೆ ಮಾಡಬೇಕು. ಹಾಗೆ ಮಾಡಿದರೆ ಎಲ್ಲರಿಗೂ ಒಂದು ಅವಕಾಶವನ್ನು ಕಲ್ಪಿಸಿಕೊಟ್ಟ ಹಾಗೆ ಆಗುತ್ತದೆ.

ಶ್ರೀ ಎಸ್. ಆರ್. ಕಂಠಿ.—ಯಾರೂ ಬರುವುದಿಲ್ಲ.

ಶ್ರೀ ಎಚ್. ಆರ್. ಕೇಶವಮೂರ್ತಿ.—ನೀವು ಡಿಸ್ಟ್ರಿಕ್ಟ್ ಹೆಡ್‌ಕ್ವಾರ್ಟರ್ಸ್‌ನಲ್ಲಿ ಅದನ್ನು ಶುರು ಮಾಡಿದರೆ ಎಲ್ಲರೂ ಬರುತ್ತಾರೆ. ಶ್ರೀಮಾನ್ ಸೂರ್ಯನಾರಾಯಣರಾವ್ ಅವರು ಹೇಳಿದ ಹಾಗೆ ಪ್ರೈಮರಿ ವಿದ್ಯಾಭ್ಯಾಸವನ್ನು ಹೇಳಿ ಕೊಡತಕ್ಕ ಉಪಾಧ್ಯಾಯರ ರಿಕ್ರೂಟ್‌ಮೆಂಟ್ ರೂಲ್ಸ್ ಅನ್ನು ಸ್ವಲ್ಪ ಬದಲಾವಣೆ ಮಾಡಬೇಕು. ವಿದ್ಯೆಯನ್ನು ಹೇಳಿ ಕೊಡತಕ್ಕ ಉಪಾಧ್ಯಾಯರ ನೈತಿಕಮಟ್ಟ ಚೆನ್ನಾಗಿರಬೇಕು. ಅಂಥಾ ಉಪಾಧ್ಯಾಯರುಗಳನ್ನೇ ಶಾಲೆಗಳಿಗೆ ಪಾಠವನ್ನು ಹೇಳಿಕೊಡುವುದಕ್ಕೆ ನೇಮಿಸಬೇಕು. ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕ ಕೆಲವು ಸ್ಕೂಲುಗಳು ಪಡಖಾನೆಗಳಾಗಿವೆ. ಕೆಲವು ಉಪಾಧ್ಯಾಯರು ಪಾಠಶಾಲೆಯಲ್ಲಿ ಹುಡುಗರ ಎದುರಿನಲ್ಲಿ ಶೀಸೆಯಲ್ಲಿ ಸಾರಾಯನ್ನು ತಂದು ಕುಡಿಯತಕ್ಕ ನಿದರ್ಶನಗಳನ್ನು ನಾನು ನೋಡಿದ್ದೇನೆ. ಮತ್ತು ಕ್ಲಾಸ್ ರೂಮಿನಲ್ಲಿ ಉಪಾಧ್ಯಾಯರು ಬೀಡಿ ಸಿಗರೇಟುಗಳನ್ನು ಸೇದುತ್ತಾರೆ. ಇಂಥಾದ್ದನ್ನು ನೀವು ಹೇಗೆ ಆಲೋಚನೆ ಮಾಡುತ್ತೀರಿ? ಇದರಂತೆ ಎಷ್ಟೋ ಗ್ರಾಮಾಂತರ ಪ್ರದೇಶದಲ್ಲಿರತಕ್ಕ ಸ್ಕೂಲುಗಳಲ್ಲಿ ನಡೆಯುತ್ತಿವೆ. ಮತ್ತು ಕ್ಲಾಸ್ ರೂಮುಗಳಲ್ಲಿ ಉಪಾಧ್ಯಾಯರು ಇಸ್ಪೀಟ್ ಆಡುತ್ತಾರೆ. ಆ ಸಂಬಂಧದಲ್ಲಿ ನನಗೆ ಬೇಕಾದಷ್ಟು ಕಂಪ್ಲೇಂಟ್ಸ್ ಬಂದಿವೆ. ಅದಕ್ಕೆ ಸಂಬಂಧಪಟ್ಟ ಕಾಗದಗಳೂ ಇವೆ. ಬೇಕಾದರೆ ಮಾನ್ಯ ಮಂತ್ರಿಗಳಿಗೆ ತೋರಿಸುತ್ತೇನೆ. ಇಂಥದಕ್ಕೆಲ್ಲ ಅವಕಾಶ ಕೊಡದೆ ನೈತಿಕ ಮಟ್ಟವಿರತಕ್ಕ ಉಪಾಧ್ಯಾಯರನ್ನು ನೇಮಿಸಬೇಕು, ಅವರಿಗೆ ಸರಿಯಾದ ತಿಳುವಳಿಕೆ ಕೊಡಬೇಕು. ಶಾಲೆಗಳಲ್ಲಿಯೇ ಸಿಗರೇಟ್, ಚುಟ್ಟ ಸೇದುವುದು, ಇಸ್ಪೀಟು ಆಡುವುದು ಇವೆಲ್ಲ ಶುದ್ಧ ಕೆಟ್ಟದ್ದು. ಶಾಲೆಗಳು ದೇವ ಸ್ಥಾನಕ್ಕೆ ಸಮಾನವಾದುವು. ಆ ಮಟ್ಟದಲ್ಲಿ ಪಾಠಶಾಲೆಗಳನ್ನು ನೋಡಿಕೊಳ್ಳಬೇಕೆಂದು ಆಗಿಂದಾಗ್ಗೆ ಇಲಾಖೆಯಿಂದ ಸರ್ಕ್ಯುಲರ್‌ಗಳನ್ನು ಕಳಿಸಬೇಕು. ಉಪಾಧ್ಯಾಯರ ಮೇಲೆ strict control ಇರಬೇಕು. ಏಕೆ ಹೇಳುತ್ತೇನೆಂದರೆ, ಚಿಕ್ಕ ಮಕ್ಕಳನ್ನು ಇವರ ಕೈಯಲ್ಲಿ ಕೊಡುತ್ತೇವೆ. ಮಕ್ಕಳು

ಹಾಳಾದರೆ ದೇಶವೇ ಹಾಳಾಗುತ್ತದೆ. ಮಕ್ಕಳು ಉತ್ತಮ ಪ್ರಜೆಗಳಾಗುವಂತೆ ನಾವು ನೋಡಿ ಕೊಳ್ಳಬೇಕು.

ನರ್ಸರಿ ಶಾಲೆಗಳನ್ನು ಹಳ್ಳಿಗಳಲ್ಲಿ ಸ್ಥಾಪನೆ ಮಾಡಿಲ್ಲ. ಪಟ್ಟಣಗಳಿಗೆ ಮಾತ್ರ ಇಂಥ ಶಾಲೆ ಗಳನ್ನು ಕೊಟ್ಟಿದ್ದೀರಿ. ಗ್ರಾಮಾಂತರ ಪ್ರದೇಶಗಳಲ್ಲಿ ಸಹ ನರ್ಸರಿ ಶಾಲೆಗಳು ಅಗತ್ಯವಿಲ್ಲವೇ ಎನ್ನುವುದನ್ನು ಯೋಚನೆ ಮಾಡಬೇಕು. ಇದುವರೆಗೂ ಕೊಟ್ಟಿಲ್ಲ. ಇನ್ನೂ ಮುಂದಾದರೂ ಹಳ್ಳಿ ಗಳಲ್ಲಿರುವ ಮಕ್ಕಳಿಗೆ ಅನುಕೂಲವಾಗುವಂತೆ ನರ್ಸರಿ ಶಾಲೆಗಳನ್ನು ಸ್ಥಾಪನೆ ಮಾಡಬೇಕು.

[MR. SPEAKER in the Chair.]

ಪಾಲಿಟೆಕ್ನಿಕ್‌ಗಳಲ್ಲಿ ವ್ಯಾಸಂಗ ಮಾಡಿ ತೇರ್ಗಡೆಯಾಗಿ ಬಂದಂಥ ವಿದ್ಯಾರ್ಥಿಗಳು ಕೆಲಸ ಸಿಕ್ಕದೆ ತುಂಬ ತಾಪತ್ರಯ ಪಡುತ್ತಿದ್ದಾರೆ. ಕಾಲಕ್ಕನುಗುಣವಾಗಿ ಪಾಲಿಟೆಕ್ನಿಕ್‌ಗಳಲ್ಲಿ courses ಬದಲಾಯಿಸುತ್ತಿರಬೇಕು. Metallurgy Mining ಇಂಥ ಪಾಠ ಕ್ರಮಗಳನ್ನು ಕಲಿಸಿದರೆ ಸುಲಭವಾಗಿ ಕೆಲಸ ಸಿಕ್ಕುತ್ತದೆ. ಆದುದರಿಂದ ಆಗಾಗ್ಗೆ ಕಾಲಕ್ಕೆ ತಕ್ಕಂತೆ courses ಬದಲಾಯಿಸು ತ್ತಿದ್ದರೆ, ನಿರುದ್ಯೋಗ ಸಮಸ್ಯೆಯನ್ನು ನಿವಾರಣೆ ಮಾಡಿದ ಹಾಗೆ ಆಗುತ್ತದೆ.

ಪಠ್ಯಪುಸ್ತಕಗಳನ್ನು ಸಂಪೂರ್ಣವಾಗಿ ರಾಷ್ಟ್ರೀಕರಣ ಮಾಡಿ ಸರ್ಕಾರದವರೇ ಅವುಗಳನ್ನು ಪ್ರಿಂಟ್ ಮಾಡಿಸಬೇಕು. ಪ್ರತಿ ಜಿಲ್ಲಾ ಹೆಡ್‌ಕ್ವಾರ್ಟರಿನಲ್ಲಿಯೂ ಬುಕ್ ಡಿಪೊ ಮತ್ತು ಪ್ರಿಂಟಿಂಗ್ ಪ್ರೆಸ್ ಇರಬೇಕು. ಹಾಗಿದ್ದರೆ ಸರ್ಕಾರದ ಎಲ್ಲ ಕಾಗದ ಪತ್ರಗಳೂ, ಪುಸ್ತಕಗಳೂ ಇಲ್ಲಿ ಪ್ರಿಂಟಾ ಗಲು ಅವಕಾಶವಾಗಿ ಎಲ್ಲ ಶಾಲೆಗಳಿಗೂ ಪಠ್ಯಪುಸ್ತಕಗಳನ್ನು ಕಾಲಕ್ಕೆ ಸರಿಯಾಗಿ ಒದಗಿಸುವಂಥ ಏರ್ಪಾಡು ಮಾಡಬಹುದು. ಇದಕ್ಕೆ ಗಮನ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಬಿಲ್ಡಿಂಗ್ ಗ್ರಾಂಟ್ ವಿಷಯದಲ್ಲಿ ಒಂದು ಮಾತು ಹೇಳುತ್ತೇನೆ. ಗ್ರಾಮಾಂತರ ಪ್ರದೇಶ ಗಳಲ್ಲಿ ಎಷ್ಟೋ ಜನ ಹೈಸ್ಕೂಲು ಕಟ್ಟಡಗಳಿಗಾಗಿ ಹಣವನ್ನು ಕೊಟ್ಟಿದ್ದಾರೆ. ಆ ಹಣ ಸರ್ಕಾರಿ ಖಜಾನೆಯಲ್ಲಿ ಕೊಳೆಯುತ್ತಿದೆ. ಉದಾಹರಣೆಗೆ ಜಾವಗಲ್ ಹೈಸ್ಕೂಲಿಗೆ 1956ರಲ್ಲಿ ಕೊಟ್ಟ ಹಣ 33 ಸಾವಿರ ರೂಪಾಯಿ ಇವತ್ತಿನವರೆಗೂ ಕೊಳೆಯುತ್ತಿದೆ. ಇವತ್ತಿಗೂ ಕಟ್ಟಡವಿಲ್ಲದೆ ಆ ಶಾಲೆ ಯವರು ತೊಂದರೆ ಪಡುತ್ತಿದ್ದಾರೆ. ಬಾಡಿಗೆ ಕೊಡುವುದಕ್ಕೆ ಸಹ ದುಡ್ಡಿಲ್ಲದೆ ಕಷ್ಟ ಪಡುತ್ತಿದ್ದಾರೆ. ಇಂಥ ಹತ್ತಾರು, ನೂರಾರು, ಶಾಲೆಗಳಿವೆ. ಅದರ ಬಗ್ಗೆ ಕೊಟ್ಟಿರುವ ಹಣ ಸರ್ಕಾರದ ಖಜಾನೆ ಯೊಳಗೆ ಕೊಳೆಯುತ್ತಿದೆ. ಆದರೂ ಕಟ್ಟಡಗಳನ್ನು ಕಟ್ಟಿಸಿಕೊಡುವುದಕ್ಕೆ ಮನಸ್ಸು ಮಾಡಿಲ್ಲ. ಯಾವ ಯಾವ ಶಾಲಾ ಕಟ್ಟಡಗಳ ಬಗ್ಗೆ ಹಣವನ್ನು ಡಿಪಾಜಿಟ್ ಮಾಡಿದ್ದಾರೆಯೋ ಅದನ್ನೆಲ್ಲ ಲೆಕ್ಕ ತೆಗೆದುಕೊಂಡು ಶೀಘ್ರವಾಗಿ ಆದ್ಯತೆಯ ಮೇಲೆ ಕಟ್ಟಡಗಳನ್ನು ಕಟ್ಟಿಸಬೇಕೆಂದು ಸಲಹೆ ಮಾಡುತ್ತೇನೆ.

ಶ್ರೀಮತಿ ಜಿ. ಸಿ. ಭಾಗೀರಥಮ್ಮ (ತುಮಕೂರು).—ಸನ್ಮಾನ್ಯ ಸಭಾಪತಿಗಳೇ, ಸಭೆಯ ಮುಂದಿರುವ ವಿದ್ಯಾ ಬೇಡಿಕೆಯನ್ನು ಅನುಮೋದಿಸುತ್ತಾ ಕೆಲವು ವಿಷಯಗಳನ್ನು ತಮ್ಮ ಮೂಲಕ ಸರ್ಕಾರಕ್ಕೆ ತಿಳಿಸಲು ಇಚ್ಛಿಸುತ್ತೇನೆ.

ಕಡ್ಡಾಯ ಪ್ರಾಥಮಿಕ ಶಿಕ್ಷಣ 90 ಶೇಕಡ ಯಶಸ್ವಿಯಾಗಿದೆ ಎಂದು ತಿಳಿಸಿದ್ದಾರೆ. ಆದರೆ 90 ಶೇಕಡ ವಿದ್ಯಾರ್ಥಿಗಳಿಗೆ ಸಾಕಷ್ಟು ಪಾಠಶಾಲೆಗಳಿವೆಯೇ ಎಂಬುದನ್ನು ಅವರೇನಾದರೂ ತಿಳಿಸಿ ದ್ದಾರೆಯೇ? ಗ್ರಾಮಾಂತರ ಪ್ರದೇಶಗಳಲ್ಲಿ ಸಾಕಷ್ಟು ಪಾಠಶಾಲೆಗಳು ಕಟ್ಟಡಗಳಿಲ್ಲದೆ ಚಾವಡಿ ಗಳಲ್ಲಿ, ದೇವಸ್ಥಾನಗಳಲ್ಲಿ, ಬಯಲಿನಲ್ಲಿ ನಡೆಯುತ್ತಿರುವುದು ಮಂತ್ರಿಗಳ ಗಮನಕ್ಕೆ ಬಾರದೆ ಇಲ್ಲ. ಹಿಂದೆ ಸರ್ಕಾರದವರು ಶಾಲಾ ಕಟ್ಟಡಗಳಿಗೆ 60 ಶೇಕಡ ಧನ ಸಹಾಯವನ್ನೂ ಕೊಡುತ್ತಿದ್ದರು. ಹೋದ ವರ್ಷದಿಂದ ಅದನ್ನು 40 ಶೇಕಡಕ್ಕೆ ಇಳಿಸಿದರು. ಆದರೂ ಕೂಡ ಗ್ರಾಮಸ್ಥರು ಮುಂದೆ ಬಂದು ಅಷ್ಟು ದುಡ್ಡನ್ನಾದರೂ ಕೊಡಿ, ಪಾಠಶಾಲೆಗಳನ್ನು ಕಟ್ಟಿಸುತ್ತೇವೆ ಎಂದು ಹೇಳುತ್ತಿದ್ದಾರೆ. ಆದರೂ ಸರ್ಕಾರದವರು ಅಷ್ಟು ಹಣವನ್ನು ಸಹಿತ ಒದಗಿಸುತ್ತಿಲ್ಲ. ಇಷ್ಟೇ ಅಲ್ಲ. ಹಾಲಿ ಇರುವ ಕಟ್ಟಡಗಳನ್ನಾದರೂ ಉಳಿಸಿಕೊಳ್ಳುತ್ತಿದ್ದಾರೆಯೇ ಎಂದರೆ ಅದೂ ಇಲ್ಲದಂತಾಗಿದೆ. ಶಾಲಾ ಕಟ್ಟಡಗಳನ್ನು ರಿಪೇರಿ ಮಾಡುವ ಜವಾಬ್ದಾರಿಯನ್ನು ತಾಲ್ಲೂಕು ಬೋರ್ಡಿಗೆ ವಹಿಸಿದ್ದಾರೆ ಅದರ ರಿಪೇರಿಗಾಗಿ ಕೊಡಬೇಕಾದ ಹಣವನ್ನು ಮಾತ್ರ ತಾಲ್ಲೂಕು ಬೋರ್ಡ್‌ಗಳಿಗೆ ವರ್ಗಾಯಿಸಿರುವುದಿಲ್ಲ. ಇದರಿಂದಾಗಿ ಕಟ್ಟಡಗಳು ರಿಪೇರಿ ಇಲ್ಲದೆ ಬಿದ್ದು ಹೋಗುವಂಥ ಸ್ಥಿತಿಯಲ್ಲಿವೆ. ತಾಲ್ಲೂಕು ಬೋರ್ಡ್‌ನವರು ತಮ್ಮಲ್ಲಿ ಹಣವಿಲ್ಲವೆಂದು ಅದನ್ನು ಪಂಚಾಯಿತಿಗಳಿಗೆ ವಹಿಸಿ ಬಿಟ್ಟಿದ್ದಾರೆ. ಹೀಗೆ ಒಬ್ಬರ ಮೇಲೆ ಒಬ್ಬರು ತೋರಿಸುತ್ತ ಗಂಡ ಹೆಂಡಿರ ಜಗಳದಲ್ಲಿ ಮಗು ಬಡವಾಯಿತು ಎನ್ನುವಂತೆ ತಾಲ್ಲೂಕು ಬೋರ್ಡ್ ಮತ್ತು ಸರ್ಕಾರದ ಮಧ್ಯೆ ಗ್ರಾಮದ ಮಕ್ಕಳು, ಹಳ್ಳಿಯ ಮಕ್ಕಳು ಮರ ಣಕ್ಕೆ ಗುರಿಯಾಗ ಬೇಕಾಗಿದೆ. ಈ ಕಟ್ಟಡಗಳನ್ನು ತಾಲ್ಲೂಕ್ ಬೋರ್ಡಿಗಾದರೂ ಕೊಡಿ, ಗ್ರಾಮ

(ಶ್ರೀಮತಿ ಜಿ. ಸಿ. ಭಾಗೀರಥಮ್ಮ)

ಪಂಚಾಯಿತಿಗಳಿಗಾದರೂ ಕೊಡಿ. ಪಬ್ಲಿಕ್ ವರ್ಕ್ಸ್ ಇಲಾಖೆಯುವಶಕ್ಕಾದರೂ ಕೊಡಿ. ಹಳ್ಳಿಗಳಲ್ಲಿರುವ ಶಾಲಾ ಕಟ್ಟಡಗಳನ್ನು ಉಳಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಕೇಂದ್ರ ಸರ್ಕಾರದವರು ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲಾ ಕಟ್ಟಡಗಳಿಗಾಗಿ 40 ಕೋಟಿ ರೂಪಾಯಿ ತೆಗೆದಿಟ್ಟಿದ್ದಾರೆ. ರಾಜ್ಯ ಸರ್ಕಾರಕ್ಕೆ ಸಾಲದ ರೂಪವಾಗಿ ಆ ಹಣವನ್ನು ಕೊಡಲು ನಿರ್ಧರಿಸಿರುವುದರಿಂದ ನಮ್ಮ ರಾಜ್ಯ ಸರ್ಕಾರದವರು ಸಾಲತೆಗೆದುಕೊಂಡಾದರೂ ಶಾಲಾ ಕಟ್ಟಡಗಳಿಗೆ ಹಣವನ್ನು ಒದಗಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಹೈಸ್ಕೂಲುಗಳನ್ನು ಸೆಕಂಡರಿ ಶಾಲೆಗಳಾಗಿ ಪರಿವರ್ತಿಸಲು ಕೆಲವು ಉಪಾಧ್ಯಾಯರನ್ನು M.A., ಮತ್ತು M.Sc., ಓದಲು ಸರ್ಕಾರ ಡೆಪ್ಯುಟ್ ಮಾಡಿ ಅವರಿಗೆ ಪೂರ್ತಿ ಸಂಬಳ ಮತ್ತು ಅಲೋಯೆನ್ಸ್. family allowance ಇಷ್ಟನ್ನೂ ಕೊಟ್ಟರು. ಇವರು ಓದು ಮುಗಿಸಿಕೊಂಡು ಬಂದ ನಂತರ ಅವರಿಗೆ ಎರಡು ಇಂಕ್ರಿಮೆಂಟುಗಳನ್ನು ಕೊಟ್ಟರು. ಆದರೆ ಅದೇ ವೇಳೆಗೆ ತಮ್ಮ ಸ್ವಂತ ಖರ್ಚಿನಿಂದ M.A., M.Sc., ಮಾಡಿದಂಥ ಉಪಾಧ್ಯಾಯರಿಗೆ ಯಾವ ತರಹ ಇಂಕ್ರಿಮೆಂಟನ್ನೂ ಕೊಟ್ಟಿಲ್ಲ. ಅವರನ್ನು ಗಣನೆಗೆ ತೆಗೆದುಕೊಳ್ಳಲಿಲ್ಲ. ಮತ್ತೊಂದು ಕಡೆ B.Ed., ಓದಲು ಸರ್ಕಾರ ಡೆಪ್ಯುಟ್ ಮಾಡಿದವರಿಗೆ ಯಾವ ಇಂಕ್ರಿಮೆಂಟನ್ನು ಕೊಟ್ಟಿಲ್ಲ. ಸ್ವಂತ ಖರ್ಚಿನಲ್ಲಿ B.Ed., ಮಾಡಿದವರಿಗೆ ಎರಡು ಇನ್‌ಕ್ರಿಮೆಂಟನ್ನು ಕೊಟ್ಟಿದ್ದಾರೆ. ಇದು ಯಾವ ನ್ಯಾಯ ? ಸರ್ಕಾರದ ಹಣ ಸಹಾಯ ಪಡೆದು ಪಾಸ್ ಮಾಡಿದವರಿಗೆ ಒಂದು ಕಡೆ ಇನ್‌ಕ್ರಿಮೆಂಟನ್ನು ಕೊಡುತ್ತಿದ್ದಾರೆ. ಇನ್ನೊಂದು ಕಡೆ ಸ್ವಂತ ಖರ್ಚಿನಿಂದ ಪಾಸ್ ಮಾಡಿದವರಿಗೆ ಕೊಡುತ್ತಿದ್ದಾರೆ.

ಶ್ರೀ ಎಸ್. ಆರ್. ಕಂಠಿ.—B.Ed. ಆದವರಿಗೆ ಅವರು ಸ್ವಂತ ಖರ್ಚಿನಿಂದ ಮಾಡಿರಲಿ, ಸರ್ಕಾರದ ಸಹಾಯ ಪಡೆದು ಮಾಡಿರಲಿ ಅವರಿಬ್ಬರಿಗೂ ಕೊಡುತ್ತಿದ್ದೇವೆ. M.A., M.Sc., ಆದವರ ವಿಷಯ ನೋಡಬೇಕು.

ಶ್ರೀಮತಿ ಜಿ. ಸಿ. ಭಾಗೀರಥಮ್ಮ.—ಹಾಗಾದರೆ ಬಹಳ ಸಂತೋಷ ಸ್ವಾಮಿ.

ಇನ್ನು non-S.S.L.C., ಯವರಿಗೆ T.C.L. Training ಕೊಡುತ್ತಿದ್ದರು. 1960 ರಿಂದ ಅದನ್ನು ನಿಲ್ಲಿಸಿ H.T.C. training ಪ್ರಾರಂಭ ಮಾಡಿದರು. T.C.L. Training ಆದ non-S.S.L.C. ಯವರಿಗೆ ರಿಕ್ರೂಟ್ ಮಾಡಲು ಇಂಟರ್‌ವ್ಯೂಗೆ ಕರೆದು 1957ಕ್ಕೆ ಮುಂಚೆ ಟ್ರೈನಿಂಗ್ ಆದವರಿಗೆ ಮಾತ್ರ ಕೆಲಸಕೊಟ್ಟು 1958-59 ರಿಂದೀಚೆಗೆ ಪಾಸಾದವರಿಗೆ ಕೆಲಸ ಕೊಡುವುದಕ್ಕೆ ಸಾಧ್ಯವಿಲ್ಲವೆಂದು ಹೇಳುವುದು ನ್ಯಾಯವಲ್ಲ.

ಶ್ರೀ ಎಸ್. ಆರ್. ಕಂಠಿ.—1960 ಅಥವಾ 1961ಕ್ಕೆ ಮುಂಚೆ ಟ್ರೈನಿಂಗ್ ಪಡೆದು ಪಾಸಾದವರಿಗೆ ಕೆಲಸಕ್ಕೆ ತೆಗೆದು ಕೊಳ್ಳಲು ಬರುತ್ತದೆ.

ಶ್ರೀಮತಿ ಜಿ. ಸಿ. ಭಾಗೀರಥಮ್ಮ.—ಈಗ 1957-1958 ರಲ್ಲಿ ಪಾಸಾದವರನ್ನು ತೆಗೆದುಕೊಂಡು 1958-59, 1959-60ರಲ್ಲಿ ಪಾಸಾದವರಿಗೆ ಕೆಲಸ ಕೊಡುತ್ತಿಲ್ಲ. ಮತ್ತು ಅವರಿಗೆ ಈಗಾಗಲೇ ಏಜ್‌ಬಾರ್, ಎಂದರೆ ಸರ್ವಿಸ್‌ಗೆ ಸೇರುವ ವಯೋಮಿತಿ ಮೀರಿ ಹೋಗುವ ಪ್ರಶ್ನೆ ಬರುತ್ತದೆ. ಇಂಥವರು ಕೇವಲ ಕಡಮೆ ಮಂದಿ ಇದ್ದಾರೆ.

Sri S. R. KANTHI.—I will make the point clear. About non-S.S.L.C. trained, they must have been trained before 1-6-1961. Up to that date we will take them.

ಶ್ರೀಮತಿ ಜಿ. ಸಿ. ಭಾಗೀರಥಮ್ಮ.—ಆದುದರಿಂದ ಕೇವಲ ಸ್ವಲ್ಪ ಜನರು ಉಳಿದುಕೊಂಡಿರುವುದರಿಂದ ಅವರಿಗೂ ಕೆಲಸ ಕೊಡುತ್ತಾರೆಂದು ನಂಬಿದ್ದೇನೆ.

ಬೇಸಿಕ್ ಟ್ರೈನಿಂಗಿಗೆ ಹೋಗುವ ಉಪಾಧ್ಯಾಯರಿಗೆ 15 ರೂಪಾಯಿ ಅಲೋಯೆನ್ಸ್ ಕೊಡುತ್ತಾರೆ, ನಾನ್‌ಬೇಸಿಕ್‌ಟ್ರೈನಿಂಗಿಗೆ ಹೋಗುವವರಿಗೆ ಕೇವಲ 7 ರೂಪಾಯಿ ಕೊಡುತ್ತಾರೆ. ನಾನ್ ಬೇಸಿಕ್ ಟ್ರೆನಿಂಗ್ ಸ್ಕೂಲಿಗೆ ಹಾಸನದಿಂದ ಸುಮಾರು 40 ಜನರನ್ನು ಡೆಪ್ಯೂಟ್ ಮಾಡಿದ್ದಾರೆ. ಅಲ್ಲಿಂದ ಬೇರೆ ಊರಿಗೆ ಬಂದು 7 ರೂಪಾಯಿನಲ್ಲಿ ಸಂಸಾರ ಮಾಡುವುದು ಕಷ್ಟವಾಗಿದೆ. ಆದುದರಿಂದ ಅವರಿಗೂ 15 ರೂಪಾಯಿ ಕೊಡಬೇಕೆಂದು ಸಲಹೆ ಮಾಡುತ್ತೇನೆ.

ಹಿಂದಿ ವಿದ್ವಾಂಸರಿಗಾಗಿ ಸಾವಿರಗಟ್ಟಲೆ ಹಣವನ್ನು ಸರಕಾರದವರು ಖರ್ಚುಮಾಡುತ್ತಿದ್ದಾರೆ. ಆದರೆ ಅವರು ಪಡೆದ ವಿದ್ಯೆಯನ್ನು ಸರಕಾರ ಉಪಯೋಗ ಮಾಡಿಕೊಳ್ಳುತ್ತಿಲ್ಲ. ಅವರು ಬಿಡ

ಬೋರೇಗೌಡನ ಹಣದಿಂದ ಶಿಕ್ಷಣ ಪಡೆದಮೇಲೆ, ನಾವು ಕಲಿತ ವಿದ್ಯೆಯನ್ನು ಪ್ರವೋಷನ್ ಸಹ ಕೇಳದೆ ಉಪಯೋಗ ಮಾಡಿಕೊಳ್ಳಿ ಎಂದು ಅವರು ಕೇಳಿದರೆ ಅದನ್ನು ಉಪಯೋಗ ಮಾಡದೆ ಅನ್ಯಾಯವಾಗಿ ವ್ಯರ್ಥಮಾಡುವುದು ಸರಿಯಲ್ಲ. ಸರಕಾರದ ನೆರವಿನಿಂದ ಹಿಂದಿ ವಿದ್ವಾನ್ ಕೋರ್ಸ್ ಓದಿದ ಮೇಲೆ ಅದನ್ನು ರೆಕಗ್ನೈಸ್ ಮಾಡಿಲ್ಲವೆಂದು ಹೇಳುವುದು ಬಹಳ ಅನ್ಯಾಯ. ಮೈಸೂರಿನಲ್ಲಿದ್ದ ಹಿಂದಿ ಟ್ರೈನಿಂಗ್ ಕಾಲೇಜನ್ನು ವರ್ಗಮಾಡಿ ಬಾಗಲಕೋಟೆ, ಗುಲ್ಬರ್ಗಕ್ಕೆ ಹಾಕಲು ಕಾರಣವೇನು ?

ಶ್ರೀ ಎಸ್. ಆರ್. ಕಂಠಿ.—ಹಾಗಲ್ಲ, ಹಿಂದೆ ಆ ಟ್ರೈನಿಂಗ್ ಕಾಲೇಜು ಇಲ್ಲಿರಲಿಲ್ಲ.

ಶ್ರೀಮತಿ ಜಿ. ಸಿ. ಭಾಗೀರಥಮ್ಮ.—ಬಾಗಲಕೋಟೆಯಲ್ಲಿ ಟ್ರೈನಿಂಗ್ ಪಡೆಯುತಕ್ಕವರಲ್ಲಿ ಸೇಕಡ 70 ರಷ್ಟು ಅಥವಾ ೬0 ರಷ್ಟು ಈ ಕಡೆಯವರಿದ್ದಾರೆ. ಈಗಲಾದರೂ ಹಳೆಯ ಮೈಸೂರಿಗೆ ಒಂದು ಕಾಲೇಜನ್ನು ಕೊಡಿ ಎಂದು ಕೇಳುತ್ತೇನೆ.

ಶ್ರೀ ಎಸ್. ಆರ್. ಕಂಠಿ.—ಈಗಾಗಲೇ ಹೇಳಿದ್ದೇನೆ, ಮೈಸೂರಿನಲ್ಲಿ ಒಂದು ಇಂತಹ ಕಾಲೇಜನ್ನು ಪ್ರಾರಂಭ ಮಾಡುವುದಕ್ಕೆ ಇಂಡಿಯಾ ಸರಕಾರವನ್ನು ಕೇಳುತ್ತೇನೆ.

ಶ್ರೀಮತಿ ಜಿ. ಸಿ. ಭಾಗೀರಥಮ್ಮ.—ಇನ್ನು ತುಮಕೂರಿನ ಕಾಲೇಜನ್ನು ಸ್ವಲ್ಪ ಸುಧಾರಿಸಬೇಕಾಗಿದೆ. ಅಲ್ಲಿನ ಪ್ರಿನ್ಸಿಪಾಲರು ಹತ್ತು ಗಂಟೆಗೆ ಇಲ್ಲಿಂದ ಅಲ್ಲಿಗೆ ಬರುತ್ತಾರೆ ವಾಪಸು ನಾಲ್ಕು ಗಂಟೆಗೆ ಅಲ್ಲಿಂದ ಇಲ್ಲಿಗೆ ಬರುತ್ತಾರೆ; ಹೀಗಾದರೆ ಅಲ್ಲಿನ ಆಡಳಿತ ಎಷ್ಟು ಮಟ್ಟಿಗೆ ಚೆನ್ನಾಗಿರಬಹುದೆಂಬುದನ್ನು ತಿಳಿದುಕೊಳ್ಳಬಹುದು. ಇದನ್ನು ಸರಿಪಡಿಸಬೇಕು. ಇಷ್ಟು ಹೇಳಲು ಅವಕಾಶ ಕೊಟ್ಟುದಕ್ಕಾಗಿ ಅಧ್ಯಕ್ಷರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

Mr. SPEAKER.—The House will now stand adjourned to re-assemble at 12 NOON tomorrow.

The House adjourned at Thirty Minutes past Six of the Clock to meet again at Twelve Noon on Wednesday, the 18th March 1964.

WD 2583—GPB—900—9-6-64